ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 51


ಡಿಸೆಂಬರ್ 20, 2009

ರೂ. 5/-

ಕನ್ನಡ ವಾರಪತ್ರಿಕೆ



ಹಂಗಿನರಮನೆಯಲ್ಲಿ ಕೇಂದ್ರ ಸರ್ಕಾರದ ಸಂಭ್ರಮ



ಗುಟುಕು ಗಂಜಿಗೂ ಪರದಾಟ



ತೆಲಂಗಾಣ :
ಉದ್ವಿಗ್ನ ಆಂಧ್ರ - ಕಾಂಗ್ರೆಸ್ ಹೊಣೆ

ನೆಲ ಕಚ್ಚುತ್ತಿರುವ ಡಾಲರ್ ಅಧಿಪತ್ಯ

ಬಾಬ್ರಿ ಮಸೀದಿ :
ಧ್ವಂಸಕಾರಿಗೆ ಶಿಕ್ಷೆ ಸರ್ಕಾರಕ್ಕೆ ಪರೀಕ್ಷೆ



ನವೆಂಬರ್ 25 ರಂದು ಬೆಂಗಳೂರಿನಲ್ಲಿ ನಡೆದ ಎಡಪಕ್ಷಗಳ ನೇತೃತ್ವದಲ್ಲಿ ಬೃಹತ್ ರ್‍ಯಾಲಿಯಲ್ಲಿ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಹೋರಾಟದ ಪ್ರಚಾರಕ್ಕೆ ತೆರಳಿದಾಗ ಮಹಿಳೆಯರ ನಡುವೆ ಆದ ಅನುಭವಗಳು ವಿಶಿಷ್ಟ. ಈ ಕುರಿತು ಬರೆದಿದ್ದಾರೆ ಸ್ತ್ರೀಶಕ್ತಿ ಸಂಘಗಳ ಒಕ್ಕೂಟದ ರಾಜ್ಯ ಸಮನ್ವಯ ಸಮಿತಿಯ ಸಂಚಾಲಕಿ.

ಗುಟುಕು ಗಂಜಿಗೂ ಪರದಾಟ

ಸಿ.ಕುಮಾರಿ

ಪ್ರಜಾಸತ್ತಾತ್ಮಕ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಹಕ್ಕುಬಾಧ್ಯತೆಯ ವಿಚಾರ ಮಾಡುವುದು ಸ್ವಭಾವಿಕ ಹಾಗೂ ಅವಶ್ಯಕ. ಅದರಲ್ಲೂ ಮಹಿಳೆ ಈ ವಿಚಾರ ಮಾಡುವಲ್ಲಿ ದಾಪುಗಾಲು ಹಾಕಲೇಬೇಕು, ಕಾರಣ....

ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಮನೆಗೆಲಸದ ಅತ್ಯಧಿಕ ಹೊರೆ ಮಹಿಳೆಯರ ಮೇಲಿದೆ. ಮಹಿಳೆಯರು ದಿನದ ತಮ್ಮ ಬಹುಪಾಲು ಸಮಯವನ್ನು ಸೌದೆ, ಮೇವು ತರಲು ನೀರು ಸಂಗ್ರಹಿಸಲು, ಪಶುಪಾಲನೆ ಮತ್ತು ಕೃಷಿ ಕೆಲಸಗಳಲ್ಲಿ, ಮನೆಯಲ್ಲಿ ಅಡುಗೆ, ತಯಾರಿ ಪಾತ್ರೆ ತೊಳೆಯುವುದು, ಕಸ ಮುಸರೆ ತೆಗೆಯುವುದು, ಬಟ್ಟೆ ಒಗೆಯುವುದು, ಮಕ್ಕಳು, ಗಂಡ ಇಡೀ ಮನೆಮಂದಿ ಪಾಲನೆ ಪೋಷಣೆ ಮಾಡುವುದು, ಅವರೆಲ್ಲರ ಬಗ್ಗೆ ಕಾಳಜಿ ವಹಿಸುವುದು. ನಡುವೆ ಬರುವ ಬಂಧುಬಳಗದವರಿಗೆ ಇಷ್ಟವಾಗುವ ರೀತಿ ನಡೆದುಕೊಳ್ಳುವುದು, ಹೀಗೆ ಮನೆ ಕೆಲಸದ ಜೊತೆ ಮನೆ ಹೊರಗಿನ ಕೆಲಸಗಳಲ್ಲಿ ಮೈಮುರಿಯುವ ದುಡಿತದಲ್ಲಿ ಹೈರಾಣಾಗಿ ಸರಿಯಾದ ಪೌಷ್ಟಿಕ ಆಹಾರವು ಸಿಗದೇ ನಿಶ್ಯಕ್ತರಾಗಿ ರಕ್ತಹೀನತೆಯಿಂದ ಬಳಲಿ ಅನೇಕ ರೋಗಗಳಿಗೆ ತುತ್ತಾಗುವವಳು ಮಹಿಳೆ.

ಜೊತೆಗೆ ಹೆಚ್ಚು ಕಾಯಿಲೆಗೆ ಬೀಳುವವರೂ ಹೆಂಗಸರು ಮತ್ತು ಹೆಣ್ಣು ಮಕ್ಕಳೇ. ಇದರಲ್ಲಿ ಸ್ವಲ್ಪ ಮಟ್ಟಿಗೆ ಪಾರಾಗುವವರು ಗಂಡಸರು, ಯಾಕಂದ್ರೆ, ಮೊದಲು ಊಟ ಬಡಸೋದ್ ಗಂಡಸರಿಗೆ. ಹಾಗಾಗಿ ಅನ್ನ ಸಾಂಬಾರು, ಸೊಪ್ಪುಕಾಳು ಮೊದಲು ತಿಂದವರ ಪಾಲು.

ಮುಂಜಾನೆ 4ಕ್ಕೆ ಎದ್ದು ರಾತ್ರಿ 10, 11 ರ ತನಕ ಮನೆ ನಿರ್ವಹಣೆಯಿಂದ ಹಿಡಿದು ಮನೆಯವರೆಲ್ಲರ ದೈನಂದಿನ ಅಗತ್ಯಗಳನ್ನು ಪೂರೈಸುವುದರಲ್ಲೇ? ಹೊಸ ಆರ್ಥಿಕ ನೀತಿಯ ಫಲವಾಗಿ ಬಡವರು, ಕೂಲಿ ಕಾರ್ಮಿಕರು, ಅಸಂಘಟಿತ ಕಾರ್ಮಿಕರಿಗೆ ಜೀವನ ನಡೆಸುವುದೇ ದುಸ್ತರವಾಗಿದೆ.

ಆಹಾರ ಹಕ್ಕಿನ ಹೋರಾಟದ ಪ್ರಚಾರದ ಸಂದರ್ಭದಲ್ಲಿನ ಕೆಲವು ಅನುಭವಗಳ ತುಣುಕು
-
ನೊಂದ ಮಹಿಳೆಯರ ಮನದಾಳದ ಮಾತುಗಳು

"ಬೆಟ್ಟ ಕಡಿದು ಇಲಿ ಹಿಡಿದರು ಎಂಬಂತೆ" ರೇಷನ್‌ಕಾರ್ಡ್ ವಿತರಣೆಗೆ ಸಂಬಂಧಿಸಿ ಹತ್ತಾರು ಬಾರಿ ಸಮೀಕ್ಷೆಗಳನ್ನು ನಡೆಸಿದ ನಾಟಕವಾಡಿ, ಒಟ್ಟಾರೆ ರೇಷನ್ ಪದ್ಧತಿಯನ್ನೂ ನಾಶ ಮಾಡಲು ಹೊರಟಿರುವ ಸರ್ಕಾರಗಳು, ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ರಾಕೇಟ್ ರೀತಿ ಮುಗಿಲು ಮುಟ್ಟಿಸಿ ಬಡಪಾಯಿಗಳು ತುತ್ತು ಕೂಳಿಗೂ ಪರದಾಡುವ ಸ್ಥಿತಿಗೆ ದೂಡಿರುವ ಈ ಸಂದರ್ಭ ಜನರ ಅನ್ನ ಕದಿಯುವ ಯೂನಿಟ್ ಪದ್ಧತಿ ಮತ್ತು ಮಿತಿಯನ್ನು ಜಾರಿಗೆ ತಂದು "ಗಾಯದ ಮೇಲೆ ಬರೆ ಎಳೆದಂತೆ" ಮಾಡಿರುವ, ನೆಮ್ಮದಿ ಕೇಂದ್ರದ ಹೆಸರಲ್ಲಿ ಜನರ ನೆಮ್ಮದಿಯನ್ನು ಹಾಳು ಮಾಡುವ ಆಹಾರ ಕಾಯ್ದೆ ಹೆಸರಿನಲ್ಲಿ ದುಬಾರಿ ಬೆಲೆಗೆ ಕಡಿಮೆ ಆಹಾರ ನೀಡಲು ಹೊರಟಿರುವ ಹಾಗೂ ಚುನಾವಣೆ ಸಂದರ್ಭ ಹೊತ್ತಿನ ಕೂಳು ನೀಡಿ ವರ್ಷದ ಕೂಳು ಕದಿಯುವ ನಮ್ಮನ್ನಾಳುವ ಜನರ ಹುನ್ನಾರ ಬಯಲುಗೊಳಿಸಲು ನವೆಂಬರ್ 25 ರಂದು ಸ್ವತಂತ್ರ ಪಾರ್ಕ್‌ನಲ್ಲಿ ನಡೆಸಿದ ಬೃಹತ್ ಜನಸ್ತೋಮದ ಸಭೆಯೂ ಮುಂದಿನ ಹೋರಾಟಗಳಿಗೆ ಸ್ಫೂರ್ತಿದಾಯಕ ಸಭೆಯಾಗಿ ಹೊರಹೊಮ್ಮಿತು.

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಾದ್ಯಂತ ಅಂಗನವಾಡಿ ಗೆಳತಿಯರ ಹೆಚ್ಚಿನ ಪರಿಶ್ರಮದಿಂದ 2009 ಫೆಬ್ರವರಿ 27 ಸ್ತ್ರೀಶಕ್ತಿ, ಸ್ವಸಹಾಯ ಗುಂಪುಗಳ ಸಮೀಕರಣಕ್ಕೆ ಒತ್ತಾಯಿಸಿ ವಿಧಾನಸೌಧ ಚಲೋ" ಕಾರ್ಯಕ್ರಮಕ್ಕೆ ಕರೆತಂದಿದ್ದ ಸಂಪರ್ಕ. ಆ ಮೂಲಕ ಅವರ ಸಹಕಾರದೊಟ್ಟಿಗೆ ಸೆಪ್ಟೆಂಬರ್ 17 ರಂದು ಮಧುಗಿರಿ ಪಟ್ಟಣದಲ್ಲಿ ಸುಮಾರು [illegible] ಸಾವಿರ ಜನ ಸ್ತ್ರೀಶಕ್ತಿ, ಸ್ವಸಹಾಯ ಗುಂಪಿನ [illegible]ಹಿಳೆಯರ ಮುಗಿಲು ಮುಟ್ಟುವ ಆಹಾರ ಹಕ್ಕಿನ ಘೋಷಣೆಗಳೊಂದಿಗೆ ಮಧುಗಿರಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೃಹತ್ ರ್‍ಯಾಲಿ ಮೂಲಕ 4 ತಾಸಿಗೂ ಹೆಚ್ಚು ಕಾಲ, ಉಪವಿಭಾಗಾಧಿಕಾರಿ ಹಾಗೂ ತಹಶೀಲ್ದಾರರವರ ಕಛೇರಿ ಮುತ್ತಿಗೆ ನಡೆಸಲಾಯಿತು. ಮುಂದುವರಿದ ಹೋರಾಟದ ಭಾಗವಾಗಿ ಸಾರ್ವಜನಿಕರಿಗೆ ಪಡಿತರ ವಿತರಣೆಯಲ್ಲಿ ಮಾಡುತ್ತಿದ್ದ ಅನ್ಯಾಯದ ವಿರುದ್ಧ ಕ್ರಮ ಆಗುವಂತೆ ಒತ್ತಾಯಿಸಿ, ದೊಡ್ಡ ಹೊಸಹಳ್ಳಿ ಗ್ರಾಮದ ಶ್ರೀರಾಮಯ್ಯ ಮಾಲೀಕತ್ವ ನ್ಯಾಯಬೆಲೆ ಅಂಗಡಿಯಲ್ಲಿ ಅಮಾನತ್ತುಗೊಳಿಸ ಬೇಕೆನ್ನುವ ಒತ್ತಾಯವನ್ನು ಆಲೂರಿನ ಸಾರ್ವಜನಿಕ ಸಭೆಯಲ್ಲಿ ಆಹಾರ ಶಿರಸ್ತೇದಾರ ಮತ್ತು ಆಹಾರ ನಿರೀಕ್ಷಕರನ್ನು ದಿಗ್ಬಂಧಿಸಿದ ಪರಿಣಾಮ, ಅಧಿಕಾರಿಗಳ ಆತನ ವಿರುದ್ಧ ತುರ್ತು ಕ್ರಮಕ್ಕೆ ಜಿಲ್ಲಾಡಳಿತಕ್ಕೆ ಬರೆದರು. ಅದಕ್ಕೆ ತತ್‌ಕ್ಷಣ ಸ್ಪಂದಿಸಿದ ಜಿಲ್ಲಾಧಿಕಾರಿಗಳು ಕೂಡಲೇ ಅಮಾನತ್ತು ಆದೇಶ ಹೊರಡಿಸಿದರು ಹಾಗೂ ಜನವಾದಿ ಮತ್ತು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಒಕ್ಕೂಟದ ಹೋರಾಟವನ್ನು ಮನಸಾರೆ ಹೊಗಳಿದರು. ಅದೇ ಸಂದರ್ಭದಲ್ಲಿ ಪ್ರವಾಹಪೀಡಿತರಿಗೆ ನಿಮ್ಮಿಂದ ಸಹಾಯ ಆಗಬೇಕು. ಎನ್ನುವ ಕೋರಿಕೆ ಮುಂದಿಟ್ಟ ತಕ್ಷಣವೇ ಕಾರ್ಯಪ್ರವೃತ್ತರಾದ ಮಹಿಳೆ ಪುರುಷರಿಬ್ಬರು ಕೈಯಲ್ಲಿ ಗೋಣಿಚೀಲಗಳನ್ನು ಹಿಡಿದು ಮನೆ ಮನೆಗೆ ತೆರಳಿ, ಒಂದು ಗಂಟೆ ಸಮಯದಲ್ಲಿ 2 ಕ್ವಿಂಟಾಲ್ ಅಕ್ಕಿ, 1 ಕ್ವಿಂಟಾಲ್ ರಾಗಿ, 25 ಕೆ.ಜಿ. ಯಷ್ಟು ತೊಗರಿಬೇಳೆ, ಮಕ್ಕಳು,

ಪುಟ 4

ಕುಡುಕ ಗಂಡನ ಕೂಡಿ....

ಕುಡುಕ ಗಂಡನ ಕೋಪಕ್ಕೆ ಗುರಿಯಾದ ರತ್ನಮ್ಮನ ವಯಸ್ಸು 45. ಬಾಲ್ಯದಲ್ಲಿಯೇ ಮದುವೆ, ಅವಿದ್ಯಾವಂತ ಕುಟುಂಬ, ಮಕ್ಕಳು ಒಟ್ಟು 6, 3 ಹೆಣ್ಣು, 3 ಗಂಡು. ವತ್ತಾರೆದ್ದು ಕೂಲಿ ಮಾಡಿದ್ರೆ ಅನ್ನ ಮುದ್ರೆ. ಇಲ್ಲಂದ್ರೆ ಉಪಾಸ. ಆಕೆನ ಬಡಿದು ಮುಕ್ಕುವ ಗಂಡ, ಸದ್ಯ "ಆ ಗಂಡ ಅನ್ನೋ ಪ್ರಾಣಿ ಅದು ಮನೆಗೆ ಬರದಿದ್ರೆ ಎಷ್ಟೋ ನೆಮ್ಮದಿ. ಮೇಡಮ್ಮರೇ" ಅಂತಾರೆ ರತ್ನಮ್ಮ. "ಮನೇಲಿರೋ ಸಾಮಾನೆಲ್ಲ ಮಾರಿ ಕುಡಿದವನೇ, ನನಗೂ ನನ್ನ ಮಕ್ಕಳಿಗೂ ನೆಮ್ಮದಿಯೇ ಇಲ್ಲ. ಈ ಹಾಳ್ ಸರ್ಕಾರನಾದ್ರೋ ನನಗೊಂದು ಅಕ್ಕಿ ಕಾರ್ಡುನೂ ಕೊಟ್ರಿಲ್ಲ. ಹತ್ತಾರು ಸಲ ಅರ್ಜಿ ಆಕುದ್ರೂ ಏನೂ ಪ್ರಯೋಜನ ಇಲ್ಲ. ನಾನು ಒಂದು ದಿನಕ್ಕೆ 4 ಮನೇಲಿ ಮನೆಕೆಲಸ ಮಾಡ್ತೀನಿ. ಪಾತ್ರೆ ತೊಳೆಯೋದು, ಬಟ್ಟೆ ಒಗೆಯೋದು, ಮನೆ ಕಸ ಗುಡಿಸುವುದು. ಮನೆ ಒರೆಸೋದು. ಜೊತೆ ಅವರಿಗೆ ಅಂಗಡಿಲಿ ಮನೆ ಸಾಮಾನು ತಂದು ಕೊಡುವುದು. ಕೂತುಕೊಳ್ಳೋಕು ಪುರುಸೋತ್ತಿರುವುದಿಲ್ಲ. ಕೈತುಂಬ ಕೆಲಸ. ಸಂಬಳ ಮಾತ್ರ ಕಮ್ಮಿ. ಎದೆ ಮೇಲೆ ನಿಂತ್ಕಂಡು ಕೆಲಸ ತಗಿತಾರೆ. ಶ್ರೀಮಂತರ ಮನೇಲಿ ಕೆಲಸ, ಬಾಡಿಗೆ ಮನೆ ಮಾಡಿರುವುದು, ಆ ಮನೆಗೆ ತಿಂಗಳಿಗೆ 2000 ಬಾಡಿಗೆ, ಕರೆಂಟ್, ನೀರು, ಕೇಬಲ್, ಗ್ಯಾಸ್‌ಬಿಲ್ ಎಲ್ಲ ಸೇರಿ 500 ರೂಪಾಯಿ. ನಾನು ದುಡಿಯೋದು 4000, ತಿನ್ನೋದು 8 ಬಾಯಿ. ನಾವು ಬದುಕುವುದಾದ್ರು ಹೇಗೆ ನೀವೇ ಹೇಳಿ? ಅಂತಾರೆ ರತ್ನಮ್ಮ. ಆ ನಾಲ್ಕು ಮನೆಯವರು ದೊಡ್ಡ ಮನಸು ಮಾಡಿ ಊಟ ಕೊಟ್ರೆ ಮನೆಮಂದಿಗೆ ಊಟ, ಇಲ್ಲಂದ್ರೆ ಅರೆಹೊಟ್ಟೆ, ಜೊತೆ ಗಂಡನಿಗೆ ಹೆಂಡ ಕುಡಿಯೋಕೆ ಕಾಸು ಕೊಡಬೇಕು. ಮೊದಲು ಒಂದು ಸಾರಾಯಿ ಪ್ಯಾಕೇಟ್ 13 ರೂ ಇತ್ತು. ಅದನ್ನು ಬ್ಯಾನ್ ಮಾಡಿ ಬಾಟಲಿ ತಂದ ಯಡಿಯೂರಪ್ಪ. ಒಂದು ಬಾಟಲಿಗೆ 45 ರೂಪಾಯಿ ಕಾಸು ಕೊಟ್ಟು ಬಡ್ಸಕಲು ಬೇಕು. ನೋಡಿ ಯಂಗೈತೆ. ಈ ಕಷ್ಟ ಯಾವ ಶತ್ರುಗೂ ಬೇಡಪ್ಪ. ನಮ್ಮ ಸ್ವಂತ ಊರು ಮಂಡ್ಯ ತಾಲ್ಲೂಕು ಬಸರಾಳು ಹೋಬಳಿ ಹಟ್ನಗ್ರಾಮ. ನಮ್ಮಲ್ಲಿ ನೀರಾವರಿ ಇಲ್ಲ. ನೀರಾವರಿ ಇದ್ದಿದ್ರೆ ಕೂಲಿನಾಲಿ ಮಾಡಿ ಹೇಗೋ ಜೀವನ ಮಾಡಬಹುದಿತ್ತು. ಈಗ ಇಲ್ಲಿ ಬಂದು ನರಕ ಅನುಭವಿಸ್ತಾ ಇದ್ದೀವಿ. ರೇಷನ್ ಕಾರ್ಡ್ ಆದ್ರೂ, ಸಿಕ್ಕಿದ್ರೆ ತಿಂಗಳಲ್ಲಿ ಹತ್ತಾರು ದಿನ ಗಂಜಿನಾದ್ರೂ ಕುಡಿತಿದ್ದೀವಿ. ಈ ಬೆಂಗಳೂರಿಗೆ ಬಂದ್ರು ಅಂತ ರೇಷನ್‌ಕಾರ್ಡ್‌ನ್ನೂ ಕಸಕಂಡೆವ್ರೆ. ಅಂದು ಇಷ್ಟೆಲ್ಲಾ ಕೇಳಿದ ಮೇಲೆ ನಾನೂ ಮಂಡ್ಯ ಅಂದಾಕ್ಷಣ ರತ್ನಮ್ಮನಿಗಾದ ಸಂತೋಷ ಹೇಳತೀರದು. ನೀವು ಜನವಾದಿಗೆ 2 ರೂ. ಕೊಟ್ಟು ಸದಸ್ಯರಾಗಬೇಕು. ಹೋರಾಟಕ್ಕೆ ಬರ್ಬೇಕು ಅಂದಾಕ್ಷಣ ನಾಲ್ಕೈದು ಬೀದಿಲಿ ಅಡ್ಡಾಡಿ 10 ನಿಮಿಷದಲ್ಲಿ 30 ಜನರನ್ನು ಒಂದೆಡೆ ಸೇರಿಸಿ ನಾವೆಲ್ಲರೂ ಬರ್ತೀವಿ ಅಂದ್ರು. ಅವರನ್ನ ಜನವಾದಿಗೆ ಸದಸ್ಯತ್ವ ಮಾಡಿ ನಂತರ ಒಂದು ಸ್ವಸಹಾಯ ಗುಂಪು ರಚನೆ ಮಾಡಲು ಮುತುವರ್ಜಿ ವಹಿಸಿದರು.

ಸಂಪಾದಕೀಯ

ವಿಶಾಲಾಂಧ್ರ ವಿಭಜನೆ : ಷಡ್ಯಂತ್ರದ ಭಾಗ

ವಿಶಾಲಾಂಧ್ರವನ್ನು ವಿಭಜಿಸಿ ಪ್ರತ್ಯೇಕ ತೆಲಂಗಾಣ ರಾಜ್ಯವನ್ನು ರಚಿಸಲು ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ, ಆತುರದಿಂದ ಪ್ರಕಟಿಸಿರುವುದು ಅತ್ಯಂತ ಆಘಾತಕಾರಿಯಾಗಿದೆ. ಪ್ರತ್ಯೇಕ ತೆಲಂಗಾಣ ರಾಜ್ಯದ ಬೇಡಿಕೆಯನ್ನು ಈಗ ಎತ್ತಿ ಚಳುವಳಿ ನಡೆದಾಗ ಕಾಂಗ್ರೆಸ್ ಸರ್ಕಾರ ಅವರನ್ನು ಮಾತುಕತೆಗೂ ಕರೆಯದೇ, ಎಲ್ಲರೊಂದಿಗೆ ವಿವರವಾಗಿ ಸಮಾಲೋಚನೆಯನ್ನು ನಡೆಸದೇ ಪ್ರಕಟಿಸಿರುವುದು ಷಡ್ಯಂತ್ರದ ಒಂದು ಭಾಗವೆಂದು ಭಾವಿಸಬಹುದು.

ಈ ಬೇಡಿಕೆ ಕುರಿತಂತೆ ಕಾಂಗ್ರೆಸ್‌ನದು ಇಬ್ಬಗೆಯ ಮಾತುಗಳು. ಎಡಪಕ್ಷಗಳ ಬೆಂಬಲವಿದ್ದ ಹಿಂದಿನ ಯುಪಿಎ ಸರ್ಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ತೆಲಂಗಾಣ ಬೇಡಿಕೆಗೆ ಸಂಬಂಧಿಸಿ ವಿಶಾಲವಾದ ಸಮಾಲೋಚನೆ ಬಳಿಕ ಒಂದು ನಿರ್ಧಾರಕ್ಕೆ ಬರುವುದಾಗಿ ಹೇಳಿತ್ತು. ಅದನ್ನು ಈಗಿನ ಯುಪಿಎ ಗಾಳಿಗೆ ತೂರಿದೆ. ಪ್ರತ್ಯೇಕ ತೆಲಂಗಾಣ ರಾಜ್ಯದ ಬೇಡಿಕೆಯನ್ನು ಕೇಂದ್ರ ಒಪ್ಪಿರುವ ಬೆನ್ನಲ್ಲೇ ವಿದರ್ಭ, ಡಾರ್ಜಿಲಿಂಗ್, ಹರಿತ್ ಪ್ರದೇಶ ಮುಂತಾದ ಹಲವು ರಾಜ್ಯಗಳನ್ನು ವಿಭಜಿಸಿ ಪ್ರತ್ಯೇಕ ರಾಜ್ಯ ರಚಿಸಬೇಕೆಂಬ ಕೂಗುಗಳು ಎದ್ದಿವೆ. ಕರ್ನಾಟಕದಲ್ಲಿಯೂ ಪ್ರತ್ಯೇಕ ಕೊಡಗು, ಹೈದ್ರಾಬಾದ್ ಕರ್ನಾಟಕದಂತಹ ಬೇಡಿಕೆಗಳು ಇವೆ. ಇಂತಹ ವಿಭಜನೆ ಕ್ರಮಗಳು ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲ ಆಶಯಕ್ಕೆ, ಒಕ್ಕೂಟ (ಫೆಡರಲ್) ವ್ಯವಸ್ಥೆಯ ಅಡಿಪಾಯದ ಮೇಲಿನ ಧಾಳಿಯಾಗಿದೆ.

ಆಂಧ್ರದಲ್ಲಿ ತೆಲಂಗಾಣ ಮಾತ್ರವಲ್ಲ, ದೇಶದಲ್ಲಿನಂತೆ ಬಹುತೇಕ ರಾಜ್ಯಗಳಲ್ಲಿಯೂ ಪ್ರಾದೇಶಿಕ ಅಸಮತೋಲನ, ಹಿಂದುಳಿದಿರುವಿಕೆಗೆ ಹಲವಾರು ಪ್ರದೇಶಗಳು ಒಳಗಾಗಿವೆ. ಇದು ಬಂಡವಾಳಶಾಹಿ, ಭೂಮಾಲೀಕ ಅಭಿವೃದ್ಧಿ ಪಥದ ಪರಿಣಾಮವಾಗಿದೆ. ಇಂತಹ ಹಿಂದುಳಿದಿರುವಿಕೆಯನ್ನೇ ಬಳಸಿ ಪ್ರತ್ಯೇಕತೆಯ ಕೂಗುಗಳನ್ನು ಎಬ್ಬಿಸಲಾಗುತ್ತಿದೆ.


ಜಾಗತಿಕ ಆರ್ಥಿಕ ಬಿಕ್ಕಟ್ಟು ಮತ್ತು ನಿರಂತರವಾಗಿ ಮುಂದುವರಿಯುತ್ತಿರುವ ಕಾರ್ಷಿಕ ಬಿಕ್ಕಟ್ಟಿನ ತೀವ್ರತೆಯ ಈ ಸಂದರ್ಭದಲ್ಲಿ ತೆಲಂಗಾಣ ರಾಜ್ಯದಂತಹ ಬೇಡಿಕೆಗಳು ಎದ್ದಿದ್ದನ್ನು ಗಮನಿಸಬೇಕು. ದೇಶದ ಜನತೆ ಸಂಕಷ್ಟದಲ್ಲಿದ್ದಾರೆ. ಪ್ರಾದೇಶಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿಯೂ ಈ ಸಂಕಷ್ಟದ ಹೊರೆ ಇನ್ನೂ ಹೆಚ್ಚಿನದು. ಈ ಬಿಕ್ಕಟ್ಟಿಗೆ ಕಾರಣ ಹಿರಿಯ ಬಂಡವಾಳಶಾಹಿ ನೇತೃತ್ವದ ಪ್ರಭುತ್ವ. ನೈಜ ಪ್ರಜಾಸತ್ತಾತ್ಮಕ ಅಭಿವೃದ್ಧಿ, ವಿಕೇಂದ್ರೀಕರಣವನ್ನು ಮಾಡದೇ ಬಿಕ್ಕಟ್ಟಿನ ಈ ಕಾರಣವನ್ನು ಮರೆಮಾಚಿ ಜನತೆಯ ದಿಕ್ಕುತಪ್ಪಿಸಲು ಪ್ರತ್ಯೇಕತಾವಾದಿ ಚಳುವಳಿಗಳನ್ನು ಹುಟ್ಟುಹಾಕುವುದು ಆಳುವ ಸರ್ಕಾರಗಳ ಹುನ್ನಾರವಾಗಿದೆ. ಇದು ಹಿರಿಯ ಬಂಡವಾಳಶಾಹಿ ನೇತೃತ್ವದ ಪ್ರಭುತ್ವಕ್ಕೆ ಬೇಕಾಗಿದೆ. ಇದರ ಪ್ರತಿನಿಧಿಯಾಗಿರುವ ಕಾಂಗ್ರೆಸ್ ಪಕ್ಷಕ್ಕೆ ಇದು ಪ್ರಿಯವಾದ ಸಂಗತಿಯಾಗಿದೆ. ಇಂತಹ ಪ್ರಾದೇಶಿಕ ಅಂಧಾಭಿಮಾನವನ್ನು ಹಿಂದಿನಿಂದಲೂ ಪ್ರೋತ್ಸಾಹಿಸುತ್ತಾ ಬರಲಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿಗಳೆರಡನ್ನೂ ಮುಖವಾಣಿಯಾಗಿ ಬಳಸುತ್ತಿರುವ ಹಿರಿಯ ಬಂಡವಾಳಗಾರರು ಭಾರತ ಬ್ರಿಟೀಶರಿಂದ ಸ್ವತಂತ್ರಗೊಂಡ ನಂತರದಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ವಿರೋಧಿಸಿದ್ದರು. ಈಗಲೂ ಈಗಿನ ಬಿಕ್ಕಟ್ಟನ್ನು ಬಳಸಿ ಈಗಿರುವ ಭಾಷಾವಾರು ಪ್ರಾಂತ್ಯಗಳನ್ನು ವಿಭಜಿಸಿ, ಸಣ್ಣ ರಾಜ್ಯಗಳನ್ನಾಗಿಸಲು ರಾಜ್ಯಗಳನ್ನೇ ಒಡೆದು ದುರ್ಬಲಗೊಳಿಸಲು ಮುಂದಾಗಿವೆ.

ಜನತೆ ತಮ್ಮ ಪ್ರಜಾಸತ್ತಾತ್ಮಕ ಹಕ್ಕನ್ನು ಪಡೆಯಲು ಭಾಷಾವಾರು ಪ್ರಾಂತ್ಯಗಳ ಆಧಾರದಲ್ಲಿದ್ದ ರಾಜ್ಯ ಸರ್ಕಾರಗಳನ್ನು ಬಳಸುತ್ತಿದ್ದಾರೆ. ಇದನ್ನೇ ದುರ್ಬಲಗೊಳಿಸಬೇಕೆಂಬುದು ಹಿರಿಯ ಬಂಡವಾಳಗಾರರ ನೇತೃತ್ವದ ಪ್ರಭುತ್ವದ ಹಂಚಿಕೆಯಾಗಿದೆ ಕೂಡ. ಸಾಮ್ರಾಜ್ಯಶಾಹಿಗಳ ಮಧ್ಯಪ್ರವೇಶ ದೇಶದಲ್ಲಿ ಹೆಚ್ಚುತ್ತಿರುವ ಸಂದರ್ಭವನ್ನೂ ಇಲ್ಲಿ ಪರಿಗಣಿಸಬೇಕು.

ಆದ್ದರಿಂದ ಹಿಂದುಳಿದಿರುವಿಕೆ, ಇನ್ನೂ ಇಂತಹ ಹಲವು ಸಮಸ್ಯೆಗಳಿಗೆ ಭಾಷಾವಾರು ಪ್ರಾಂತ್ಯಗಳನ್ನು ವಿಭಜಿಸಿ ಸಣ್ಣ ರಾಜ್ಯ ರಚಿಸುವುದು ಪರಿಹಾರವೇ ಅಲ್ಲ. ಇಂತಹ ದುರ್ಬಲಗೊಂಡ ಸಣ್ಣ ರಾಜ್ಯಗಳ ಮೇಲೆ ಕೇಂದ್ರ ಸರ್ಕಾರದ ಯಜಮಾನಿಕೆ ಹೇರಿಕೆಗೆ ಇದು ಅವಕಾಶವಷ್ಟೇ ಸಿಗುವಂತಾಗುತ್ತದೆ. ಈಗಾಗಲೇ ರಚಿತಗೊಂಡ ರಾಜ್ಯಗಳ ಅನುಭವವೂ ಇದನ್ನೇ ತೋರಿಸುತ್ತದೆ. ಬಿಜೆಪಿಯು ಸಣ್ಣ ರಾಜ್ಯಗಳನ್ನಾಗಿ ಒಡೆಯುವುದನ್ನೇ ಪ್ರತಿಪಾದಿಸುತ್ತಿದ್ದು ಅದರ ಅಖಂಡ ಭಾರತವೆಂಬುದು ವಿಪರೀತ ಕೇಂದ್ರೀಕೃತ ವ್ಯವಸ್ಥೆಯಾಗಿದೆ. ಇಂದಿನ ಹಿಂದುಳಿದಿರುವಿಕೆಯನ್ನು ಹೋಗಲಾಡಿಸಲು ಮೂಲಭೂತವಾದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಲು ಅಗತ್ಯ ಕ್ರಮ ವಹಿಸಬೇಕು. ಬುಡಕಟ್ಟು, ಗುಡ್ಡಗಾಡಿನಂತಹ ಪ್ರದೇಶಗಳಲ್ಲಿ ಅಗತ್ಯವಿರುವಲ್ಲಿ ಪ್ರಾದೇಶಿಕ ಸ್ವಾಯತ್ತತೆಯನ್ನು ರಾಜ್ಯದ ವ್ಯಾಪ್ತಿಯಲ್ಲಿ ತರಬೇಕು. ಈಗಿರುವ ಕೇಂದ್ರ ರಾಜ್ಯಗಳ ಸಂಬಂಧಗಳು ಪ್ರಜಾಸತ್ತಾತ್ಮಕ ನೆಲೆಯಲ್ಲಿ ಬದಲಾಗಬೇಕು. ರಾಜ್ಯಗಳಿಗೆ ಹೆಚ್ಚಿನ ಸಂಪನ್ಮೂಲ, ಅಧಿಕಾರ ಸಿಗುವಂತಾಗಬೇಕು.

ಆದ್ದರಿಂದ ಪ್ರತ್ಯೇಕತೆಯ ಕೂಗು ವಿಭಜಕವಾದುದಾಗಿದೆ. ವಿಶಾಲಾಂಧ್ರಕ್ಕಾಗಿ, ಭಾಷಾವಾರು ಪ್ರಾಂತ್ಯದ ರಚನೆಗಾಗಿ ಆಂಧ್ರ ಪ್ರದೇಶದಲ್ಲಿಯೂ ಧೀಮಂತವಾದ ತ್ಯಾಗ, ಬಲಿದಾನಗಳ ಚಳುವಳಿ ನಡೆದಿತ್ತು. ಅವಿಭಜಿತ ಕಮ್ಯೂನಿಸ್ಟ್ ಪಕ್ಷ ಮುಂಚೂಣಿಯ ಪಾತ್ರ ವಹಿಸಿತ್ತು. ಕಾಂಗ್ರೆಸ್ ಸರ್ಕಾರದ ಈಗಿನ ನಿರ್ಧಾರ ಅಪಾರ ಹಾನಿಗೆ ಹಾದಿ ಮಾಡಿಕೊಡುವಂತಹದ್ದಾಗಿದೆ. ಇಂದಿನ ಸ್ಥಿತಿಯಲ್ಲಿ ಜನತೆ ತಮ್ಮ ನಡುವೆಯೇ ವಿಭಜಕತೆಗೆ ಅವಕಾಶ ನೀಡದಂತೆ ಶಾಂತಿಯುತ ಪರಿಹಾರ ಹುಡುಕಲು ಮುಂದಾಗಲೇಬೇಕು.

ಸಂದರ್ಭಸಾಧಕ ಮೈತ್ರಿಗಳ ನಡುವೆ



ವಿಧಾನ ಪರಿಷತ್‌ನ ಚುನಾವಣೆಗಳ ಪ್ರಚಾರ ಬಿರುಸು ಪಡೆಯುತ್ತಿದೆ. ಪ್ರಚಾರದ ವಿಷಯಗಳೇನು? ಅಂತಹ ವಿಷಯಗಳು ಯಾಕಿರಬೇಕು? ಅದರ ಅಗತ್ಯವಾದರೂ ಏನು ಎಂಬಂತಹ ಸ್ಥಿತಿಗೆ ಬಹುತೇಕ ಸ್ಪರ್ದೆಯಲ್ಲಿರುವ ಎಲ್ಲ ಪಕ್ಷಗಳೂ ಬಂದುಬಿಟ್ಟಿವೆ. ಜನರ ಒಟ್ಟು ಸಾಮಾನ್ಯ ಪ್ರಶ್ನೆಗಳು ಒತ್ತಟ್ಟಿಗಿರಲಿ, ಕನಿಷ್ಟ ಚುನಾವಣಾ ಕಣವಾಗಿರುವ ಸ್ಥಳೀಯ ಸಂಸ್ಥೆಗಳನ್ನು ಅದರ ಆಶಯದಂತೆ ಪ್ರಜಾಸತ್ತಾತ್ಮಕವಾಗಿ ಬಲಪಡಿಸುವುದು, ಹೆಚ್ಚು ಜನಮುಖಿಯಾಗಿಸುವಂತಹ ಕನಿಷ್ಟ ಕಾಳಜಿಯೂ ಎಲ್ಲೂ ಕಾಣುತ್ತಿಲ್ಲ. ಅಂತಹ ಕಾಳಜಿಯಾಗಲೀ, ತಿಳುವಳಿಕೆಯಾಗಲೀ ಬಹುತೇಕ ಅಭ್ಯರ್ಥಿಗಳಲ್ಲಿಯೂ ಇಲ್ಲ.

ನಿಜ ಕಹಾನಿ

ಹೀಗಾಗಿ ಅಧಿಕಾರ ಸ್ಥಾನ ಪಡೆಯುವ ಧಾವಂತದಲ್ಲಿ ಅವರದೇ ಘೋಷಿತ ನೀತಿ ನಿಯತ್ತುಗಳಿಗೆ ತಿಲಾಂಜಲಿ ನೀಡಲಾಗಿದೆ. ಅನೈತಿಕ ಸಂದರ್ಭಸಾಧಕ ಮೈತ್ರಿಗೂ ಇಳಿಯಲಾಗಿದೆ. ಈ ಚುನಾವಣೆಯಲ್ಲಿ ಕಾಂಗ್ರೆಸ್, ಜೆಡಿ(ಎಸ್) ಪಕ್ಷಗಳು ಬಹಿರಂಗ ಮೈತ್ರಿ ಏರ್ಪಡಿಸಿಕೊಂಡು ಜಂಟಿ ಪ್ರಚಾರಕ್ಕೆ ಇಳಿದಿವೆ. ಆದರೆ ಕೋಮುವಾದಿಗಳನ್ನು ಎದುರಿಸಲೆಂದೇ ಈ ಮೈತ್ರಿ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಈ ಚುನಾವಣೆಯಲ್ಲಿ ಮಾಡಿದ್ದಾದರೂ ಏನು? ದಕ್ಷಿಣ ಕನ್ನಡದಲ್ಲಿ ಎರಡು ಸ್ಥಾನಗಳನ್ನು ಹಂಚಿಕೊಂಡು ಅವಿರೋಧ ಆಯ್ಕೆಯಾಗಿರುವುದೇ ನಿಜ 'ಕಹಾನಿ'ಯನ್ನು ಹೇಳುತ್ತದೆ.

ಕಾಂಗ್ರೆಸ್ ಶರಣಾಗತಿ

ದಕ್ಷಿಣ ಕನ್ನಡದಲ್ಲಿ ಒಟ್ಟು ಎರಡು ಸ್ಥಾನಗಳಿಗೆ ಈಗ ಆಯ್ಕೆಯಾಗಬೇಕಿತ್ತು. ಈಗಲ್ಲಿ ಚುನಾವಣೆ ಇಲ್ಲ. ಕಾರಣ ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳಿಗೆ ವಿರೋಧವಾಗಿ ಯಾವ ಅಭ್ಯರ್ಥಿಗಳೂ ಇಲ್ಲ!. ಕಾರಣ ನಾಮಪತ್ರ ಹಿಂತೆಗೆಯುವ ದಿನ ಒಂದೊಂದು ಕ್ಷೇತ್ರದಲ್ಲಿಯೂ ಕಾಂಗ್ರೆಸ್ ಅಥವಾ ಬಿಜೆಪಿ ಅಭ್ಯರ್ಥಿಯನ್ನು ಹೊರತು ಇದ್ದಬದ್ದವರು ಹಿಂತೆಗೆದದ್ದು. ಹೀಗಾಗಿ ಅವಿರೋಧ ಆಯ್ಕೆ!. ಇದ್ದಬದ್ದ ಅಭ್ಯರ್ಥಿಗಳು 'ಸ್ವಯಂ ಪ್ರೇರಣೆ'ಯಿಂದ ಹಿಂದೆ ತೆಗೆದುಕೊಂಡಿದ್ದಾರೆ. ಎಂದರೆ ನಂಬುವವರೂ ಯಾರೂ ಇಲ್ಲ. ಚುನಾವಣೆಗೆ ಮಾಡಬೇಕಾದ ಖರ್ಚಿನಲ್ಲಿ ಒಂದು ಭಾಗ ಈ 'ಡೀಲ್' ಗೆ ಹೋಗಿರುವ ಸಾಧ್ಯತೆ ಯಾರೂ ತಳ್ಳಿ ಹಾಕುತ್ತಿಲ್ಲ. ಇದ್ದ ಬದ್ದ ಅಭ್ಯರ್ಥಿಗಳಿರಲಿ ಕೋಮುವಾದಿಗಳನ್ನು ಎದುರಿಸುವುದಾಗಿ ಕೊಚ್ಚಿಕೊಳ್ಳುವ ಕಾಂಗ್ರೆಸ್ ಯಾಕೆ ಇನ್ನೊಂದು ಕ್ಷೇತ್ರದಲ್ಲಿ ಹಿಂತೆಗೆದದ್ದು. ಕಾರಣ ಸ್ಪಷ್ಟ. ಕೋಮುವಾದಿ ಬಿಜೆಪಿಯೊಂದಿಗೆ ಕೈಜೋಡಿಸಿದ್ದು. ಒಂದೊಂದು ಕ್ಷೇತ್ರಗಳ ಸ್ಥಾನ ಹಂಚಿಕೊಂಡದ್ದು, ಕರಾವಳಿ ನಿತ್ಯವೂ ಕೋಮುವಾದಿಗಳ ಆಕ್ರಮಣ, ಹಿಂಸೆ, ಕಾನೂನು ವಿರೋಧಿ ಕೃತ್ಯಗಳಿಂದ ತಲ್ಲಣಿಸುತ್ತಿದೆ. ಸೌಹಾರ್ದತೆಯ ನಾಗರೀಕ ಸಮಾಜವನ್ನು ಕೋಮುವಾದದ ವಿಷದಿಂದ ನಿತ್ಯವೂ ನರಳುವಂತೆ ಮಾಡಲಾಗುತ್ತಿದೆ. ಇಂತಹ ಶಕ್ತಿಗಳನ್ನು ರಾಜಕೀಯವಾಗಿಯೂ ಎದುರಿಸಬೇಕಾದ್ದು ಅತ್ಯಗತ್ಯ, ಅನಿವಾರ್ಯವಿತ್ತು. ಅದೂ ಈ ಕ್ಷೇತ್ರದಲ್ಲಿ ಹಿಂದೆ ಎರಡೂ ಸ್ಥಾನಗಳಲ್ಲಿಯೂ ಕಾಂಗ್ರೆಸ್ ಗೆದ್ದಿತ್ತು ಆದರೀಗ ಬಿಜೆಪಿ ಸಂಘ ಪರಿವಾರಕ್ಕೆ ಶರಣಾಗಿದೆ. ಕಾಂಗ್ರೆಸ್‌ನ ವೈಫಲ್ಯಗಳು, ಇಂತಹ ರಾಜಿ ಸಂಧಾನಗಳೇ ಇಂದು ಕರಾವಳಿಯಲ್ಲಿ ಕರ್ನಾಟಕದಲ್ಲಿ, ದೇಶದಲ್ಲಿಯೂ ಕೋಮುವಾದ ಬೆಳೆಯಲು, ಆಸ್ಫೋಟವಾಗಲು ಕಾರಣವಾಗಿದೆ. ಹೀಗೆ ಜಾತ್ಯಾತೀತ ಶಕ್ತಿಗಳ ನಿರೀಕ್ಷೆಗಳಿಗೆ ದ್ರೋಹವೆಸಗಲಾಗಿದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹಾಗೆ ಕರಾವಳಿಯಲ್ಲಿ ಕಾಂಗ್ರೆಸ್ ಹಲವಾರು ನಿರ್ಣಾಯಕ ಹಾಗೂ ನಿತ್ಯದ ಸಂದರ್ಭಗಳಲ್ಲಿ ಕೋಮುವಾದಕ್ಕೆ ಮುಖಾಮುಖಿಯಾಗುವುದಿಲ್ಲ ಎಂಬ ಹಲವಾರು ನಿದರ್ಶನಗಳಿವೆ. ಇದು ಕಾಂಗ್ರೆಸ್‌ನ ಸಂದರ್ಭಸಾಧಕತನಕ್ಕೆ ಒಂದು ಹಸಿ ಉದಾಹರಣೆ ಅಷ್ಟೆ.

ಇನ್ನು 'ಜಾತ್ಯಾತೀತ' ಜನತಾದಳದ ಸ್ಥಿತಿಯೂ ಅಂತಹುದೇ. ಜೆಡಿ(ಎಸ್) ಪಕ್ಷ ಒಂದು ಬೂರ್ಶ್ವಾ ಪಕ್ಷವಾಗಿರುವಾಗಲೇ ಬಿಜೆಪಿ, ಕಾಂಗ್ರೆಸ್ ಪಕ್ಷಗಳಂತೆ ಅವುಗಳ ರಾಜಕೀಯ ವರ್ಗ ಶಕ್ತಿ ,ಗುಣಗಳಲ್ಲಿ ವ್ಯತ್ಯಾಸಗಳೂ ಇವೆಯೆಂಬುದನ್ನು ಗಮನಿಸುವಾಗಲೇ ಅದೂ ಸಹ ಇಂತಹ ಸಂದರ್ಭಸಾಧಕತೆಯಿಂದ ಹೊರತಲ್ಲ. ಕಾಂಗ್ರೆಸ್ ಅಥವಾ ಬಿಜೆಪಿ ಯಾವುದೂ ಆಗಬಹುದು ಎಂಬಂತಹ ಸ್ಥಿತಿ ಈಗಲೂ ಇದೆ.

ಹೀಗಿರುವಾಗಲೇ ರಾಜ್ಯದಲ್ಲಿ ಕೋಮುವಾದಿ ಬಿಜೆಪಿಯ ಶಕ್ತಿ ದುರ್ಬಲಗೊಳಿಸುವುದು ಅಷ್ಟೇ ಮುಖ್ಯವಾಗಿದೆ. ಅದಕ್ಕಾಗಿ ದೊರಕಿದ ಸಂದರ್ಭಗಳನ್ನು ದುಡಿವ ಜನರ ಪ್ರಜಾಸತ್ತಾತ್ಮಕ ಚಳುವಳಿಯ ಮುನ್ನಡೆಗೆ ಬಳಸುವುದು ಅಗತ್ಯವಿದೆ. ಅಂದರೆ ಸ್ವತಂತ್ರ ಕಾರ್ಯಾಚರಣೆ ಜೊತೆಗೆ.

ಗಣಿ ಲೂಟಿ - ಪುಟ 13ಕ್ಕೆ



ಹಾಸ್ಟೆಲ್ ವಿದ್ಯಾರ್ಥಿಗಳು ಅನುಭವಿಸುವ ಸಂಕಟಗಳು ಹಲವು.
ಎಸ್‌ಎಫ್‌ಐ ಹೋರಾಟ ಅದಕ್ಕೆ ದನಿಕೊಟ್ಟಿದೆ.

ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆಗಳ ವಿರುದ್ಧ ಎಸ್‌ಎಫ್‌ಐ ನೇತೃತ್ವದಲ್ಲಿ ವಿಧಾನಸೌಧ ಚಲೋ

ರಾಜ್ಯದಲ್ಲಿರುವ ಸಮಾಜಕಲ್ಯಾಣ ಇಲಾಖೆ ಹಾಗೂ ಬಿಸಿಎಂ ಇಲಾಖೆ ಅಡಿಯಲ್ಲಿ ನಡೆಯುತ್ತಿರುವ ಹಾಸ್ಟೆಲ್‌ಗಳಲ್ಲಿ ಸೌಲಭ್ಯಗಳಿಗಿಂತ ಸಮಸ್ಯೆಗಳೇ ಹೆಚ್ಚಾಗಿವೆ. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರವಿಲ್ಲದೇ ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. ಪೌಷ್ಠಿಕ ಆಹಾರದ ಕೊರತೆ, ಮೂಲ ಸೌಕರ್ಯ ಹಾಗೂ ಸರಿಯಾದ ಪ್ರಾಥಮಿಕ ವೈದ್ಯಕೀಯ ಚಿಕಿತ್ಸೆಯ ಕೊರತೆಯಿಂದ ಇತ್ತೀಚಿಗೆ.ಬೆಂಗಳೂರಿನ ಇಂಜಿನಿಯರಿಂಗ್ ವಿದ್ಯಾರ್ಥಿ, ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ 8ನೇ ತರಗತಿ ವಿದ್ಯಾರ್ಥಿನಿ ರಾಧಾ, ಗಂಗಾವತಿ ದಾವಣಗೆರೆಯಲ್ಲಿ ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ. ಇವು ರಾಜ್ಯ ಬಿಜೆಪಿ ಸರ್ಕಾರ ತಾತ್ಸಾರದಿಂದಾಗಿ ಆದ ಬಲಿಗಳು. ಅಪರಾಧ, ಕೊಲೆ, ಸಮಾಜಘಾತುಕ ಚಟುವಟಿಕೆಗಳನ್ನು ನಡೆಸಿ ಜೈಲಿನಲ್ಲಿರುವ ಖೈದಿಗಳಿಗೆ ದಿನವೊಂದಕ್ಕೆ 64 ರೂ.ಗಳಿಗಿಂತಲೂ ಹೆಚ್ಚು ಖರ್ಚು ಮಾಡುವ ಸರ್ಕಾರ ಶಾಲಾ, ಹಾಸ್ಟೆಲ್ ವಿದ್ಯಾರ್ಥಿಗಳಿಗೆ ರೂ.19 ಕಾಲೇಜು ಹಾಸ್ಟೆಲ್ ವಿದ್ಯಾರ್ಥಿಗಳಿಗೆ ರೂ.21.66 ರೂ.ಗಳನ್ನು ನೀಡುತ್ತಿರುವುದನ್ನು ನೋಡಿದರೆ, ಹಾಸ್ಟೆಲ್ ವಿದ್ಯಾರ್ಥಿಗಳನ್ನು ಖೈದಿಗಳಿಗಿಂತ ಕಡೆಯಾಗಿ ಕಾಣುತ್ತಿರುವುದು ಸ್ಪಷ್ಟವಾಗುತ್ತದೆ.

ಕನಿಷ್ಟ ಸ್ವಚ್ಛತೆ ಇಲ್ಲದೇ ಕೊಳೆತು ನಾರುವ ವಾಸನೆಯಲ್ಲಿ ಪ್ರಾಣಿಗಳ ವಾಸಕ್ಕೂ ಯೋಗ್ಯವಲ್ಲದ ರೀತಿಯಲ್ಲಿ ಹೊಟ್ಟೆ ತುಂಬ ಊಟವಿಲ್ಲದೆ ಜಾತಿವಾದಿ ಪಟ್ಟಭದ್ರರು (ಕೆಲವು ಕಡೆ ರೌಡಿಗಳು) ಹಾಗೂ ಅಧಿಕಾರಿ ವರ್ಗದ ಬೆದರಿಕೆಗಳ ಮಧ್ಯೆ ಹಾಸ್ಟೆಲ್ ವಿದ್ಯಾರ್ಥಿಗಳು ಮಾನಸಿಕ ಹಿಂಸೆ ಅನುಭವಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಗೆ ಎರಡೂ ಇಲಾಖೆಗಳ ಗಂಭೀರ ನಿರ್ಲಕ್ಷ್ಯ ಹಾಗೂ ಬಿಜೆಪಿ ಸರ್ಕಾರದ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ವಿದ್ಯಾರ್ಥಿ ವಿರೋಧಿ ನೀತಿಗಳೇ ಕಾರಣವಾಗಿವೆ.

ಇಂತಹ ಸಂದರ್ಭದಲ್ಲಿ ವೈಜ್ಞಾನಿಕ, ಪ್ರಗತಿಪರ ಶಿಕ್ಷಣ ವ್ಯವಸ್ಥೆಯ ಜಾರಿಗಾಗಿ ವಿದ್ಯಾರ್ಥಿಗಳನ್ನು ಸಂಘಟಿಸಿ ಅವಿರತವಾಗಿ ಶ್ರಮಿಸುತ್ತಿರುವ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸಂಘಟನೆ ರಾಜ್ಯದಲ್ಲಿರುವ ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕಾಗಿ ನಿರಂತರವಾಗಿ ಹೋರಾಟ ನಡೆಸುತ್ತಾ ಬಂದಿದೆ. ಇದರ ಭಾಗವಾಗಿ ನವೆಂಬರ್ 26 ರಂದು ಬೃಹತ್ ವಿಧಾನಸೌಧ ಚಲೋ' ನಡೆಸಲಾಯಿತು. ಸಾವಿರಾರು ವಿದ್ಯಾರ್ಥಿಗಳ ಪ್ರತಿಭಟನಾ ಮೆರವಣಿಗೆ ಬೆಂಗಳೂರಿನ ಬನ್ನಪ್ಪ ಪಾರ್ಕ್‌ನಿಂದ ಆರಂಭವಾಗಿ ವಿಧಾನಸೌಧದ ಹತ್ತಿರ ಚಾಲುಕ್ಯ ಸರ್ಕಲ್‌ನಲ್ಲಿ ಸಭೆಯಾಗಿ ಮಾರ್ಪಟ್ಟಿತು.




ಹೋರಾಟವನ್ನು ಬೆಂಬಲಿಸಿ ಎಸ್‌ಎಫ್‌ಐ ಸಂಸ್ಥಾಪನ ಮುಖಂಡರು, ಮಾಜಿ ಶಾಸಕರಾದ ಕಾಂ.ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡಿದರು. ಡಿವೈಎಫ್‌ಐ ರಾಜ್ಯಾಧ್ಯಕ್ಷರಾದ ಕಾಂ.ಎನ್.ಎಲ್. ಭರತ್‌ರಾಜ್ ಮಾತನಾಡಿದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ರಾಜ್ಯ ನಿಯೋಗ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿ ಒತ್ತಾಯಿಸಿತು. ಬೇಡಿಕೆಗಳನ್ನು ಈಡೇರಿಸಲು ಪ್ರತಿಭಟನೆಯ ಒತ್ತಡಕ್ಕೆ ಮಣಿದು ಸಮಾಜ ಕಲ್ಯಾಣ ಖಾತೆ ಸಚಿವ ಡಿ.ಸುಧಾಕರ್‌ರವರು ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರು.

ಬೇಡಿಕೆಗಳು

1. ಎಸ್‌ಸಿ/ಎಸ್‌ಟಿ ಮತ್ತು ಬಿ.ಸಿ.ಎಂ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ನೀಡಲಾಗುವ ಆಹಾರ ಭತ್ಯೆ ಕೇರಳ ಮಾದರಿಯಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಕನಿಷ್ಠ 1300, ಕಾಲೇಜು ವಿದ್ಯಾರ್ಥಿಗಳಿಗೆ ಕನಿಷ್ಠ ರೂ.1500 ಗಳನ್ನು ನೀಡಬೇಕು. ಗುಣಮಟ್ಟದ (ಮಾಂಸಾಹಾರ ಸೇರಿದಂತೆ) ಆಹಾರ ನೀಡಬೇಕು..



ಸಮಾಜ ಕಲ್ಯಾಣ ಸಚಿವರೊಂದಿಗೆ ಎಸ್‌ಎಫ್‌ಐ ನಿಯೋಗದ ಚರ್ಚೆ

2. ರಾಜ್ಯದಲ್ಲಿ ಬಾಕಿ ಇರುವ ಎಲ್ಲ ಹಂತದ ವಿದ್ಯಾ ವೇತನ ಬಿಡುಗಡೆಗೊಳಿಸಬೇಕು ಮ ವಿದ್ಯಾರ್ಥಿ ವೇತನದ ಪ್ರಮಾಣ ಹೆಚ್ಚಿಸಬೇ
3. ಅರ್ಜಿ ಹಾಕಿದ ಎಲ್ಲಾ ವಿದ್ಯಾರ್ಥಿಗಳಿ ಹಾಸ್ಟೆಲ್ ಸೌಲಭ್ಯ ಕಲ್ಪಿಸಬೇಕು, ಹಾಸ್ಟೆಲ್‌ಗ ಸ್ವಂತ ಕಟ್ಟಡ, ಗ್ರಂಥಾಲಯ, ಕಂಪ್ಯೂಟ ಪತ್ರಿಕೆಗಳು, ಶುದ್ಧ ಕುಡಿಯುವ ನೀ ಶೌಚಾಲಯ, ಕ್ರೀಡಾ ಸಾಮಗ್ರಿ, ಇತ ಮೂಲ ಸೌಲಭ್ಯ ಒದಗಿಸಬೇಕು.
4. ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ಮ ತಾಲ್ಲೂಕು ಮತ್ತು ಹೋಬಳಿ ಕೇಂದ್ರಗ ಎಸ್‌ಸಿ/ಎಸ್‌ಟಿ ಮತ್ತು ಓ.ಬಿ.ಸಿ ಹಾಸ್ಟೆಲ್‌ಗ ಪ್ರಾರಂಭಿಸಬೇಕು. ಹಾಸ್ಟೆಲ್‌ಗಳಿಗೆ ಅ ಇರುವ ನಿಲಯ ಪಾಲಕರು ಸೇರಿದ ಅಡುಗೆಯವರು, ಇತರೆ ಸಿಬ್ಬಂದಿ ಖಾಯಂ ನೇಮಕ ಮಾಡಿಕೊಳ್ಳಬೇಕು.
5. ವಿದ್ಯಾರ್ಥಿಗಳು, ಪಠ್ಯೇತರ ಚಟುವಟಿಕೆಗ ತೊಡಗದಂತೆ ತಡೆಯಲು ಹಾಜರಾತಿ ನೆಪವೊಡ್ಡಿ "ಬಯೋಮೆಟ್ರಿಕ್" ಯಂತ್ರ ಕೈಬಿಡಬೇಕು. ಈ ಯಂತ್ರಕ್ಕೆ ಬಳಸ ಕೋಟ್ಯಾಂತರ ರೂಪಾಯಿ ಹಣವ ಮೂಲಭೂತ ಸೌಲಭ್ಯಗಳಿಗಾಗಿ ಬಳಸಬೇ
6. ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗ ಬಿ.ಪಿ.ಎಲ್. ಕುಟುಂಬದವರಾಗಿರ ಬಡವರಾಗಿರುವುದರಿಂದ ಹಾಸ್ಟೆಲ್‌ಗ ಪಡಿತರ ವ್ಯವಸ್ಥೆ ಮೂಲಕ ಅಗತ್ಯವಿರುವ ಅಕ್ಕಿ (ರೂ.2 ಕೆ.ಜಿ.ಗೆ) ಬೇಳೆ ಕಾಳುಗ ಎಣ್ಣೆ, ಸೋಪು, ಬಟ್ಟೆ, ಪುಸ್ತಕ, ಪೆ ಇನ್ನಿತರ ವಸ್ತುಗಳನ್ನು ರಿಯಾಯಿತಿ ದರ ಸರಬರಾಜು ಮಾಡಬೇಕು.
7. ವಿದ್ಯಾರ್ಥಿ ವೇತನ ಪಡೆಯ ವಿದ್ಯಾರ್ಥಿಗಳು ಬಯಸುವಂತ ಬ್ಯಾಂಕ್‌ಗಳಲ್ಲಿ ಉಚಿತವಾಗಿ ಸರ್ಕಾ ಜವಾಬ್ದಾರಿ ವಹಿಸಿ ಉಚಿತವಾಗಿ ಖ ಮಾಡಿಸಲು ಕ್ರಮ ಕೈಗೊಳ್ಳಬೇಕು.

■ ಹುಳ್ಳಿ ಉಮೇ

ಗುಟುಕು ಗಂಜಿಗೂ ಪರದಾಟ

ಪುಟ 2 ರಿಂದ

ಮಹಿಳೆಯರು, ಗಂಡಸರು ತೊಡುವ ಹತ್ತಾರು ಚೀಲ ಬಟ್ಟೆಗಳನ್ನು ಸಂಗ್ರಹಿಸಿ, ಜೊತೆಗೆ ಆರು ಸಾವಿರಗಳನ್ನು ಒಟ್ಟುಗೂಡಿಸಿ ಟಾಟಾ ಸುಮೋವೊಂದರಲ್ಲಿ ತುಮಕೂರಿಗೆ ತೆರಳಿ ಸಿಪಿಎಂ ಜಿಲ್ಲಾ ಸಮಿತಿಗೆ ತಲುಪಿಸುವ ಮೂಲಕ ಉತ್ತರ ಕರ್ನಾಟಕದ ಜನರೊಟ್ಟಿಗೆ ನಾವಿದ್ದೇವೆನ್ನುವ ಸಂದೇಶವನ್ನು ಸಾರಿದ್ದಾರೆ. ಇದಿಷ್ಟು ಸಾಧ್ಯವಾಗಿದ್ದು ಜನರನ್ನು ಬಾಧಿಸುತ್ತಿರುವ ರೇಷನ್ ಅವ್ಯವಸ್ಥೆಯ ವಿರುದ್ಧ ಸ್ತ್ರೀಶಕ್ತಿ, ಸ್ವಸಹಾಯ ಗುಂಪಿನ ಮಹಿಳೆಯರನ್ನು ಸಹಸ್ರಾರು ಸಂಖ್ಯೆಯಲ್ಲಿ ಅಣಿನೆರೆಸಿ, ಒಂದು ಸಣ್ಣ ಗೆಲುವು ಪಡೆದದ್ದು ದೊಡ್ಡ ಹೊಸಹಳ್ಳಿ ಗ್ರಾಮದ ರೈತ ಕೂಲಿಕಾರರು ಯುವಜನ ಮತ್ತು ಮಹಿಳೆಯರನ್ನು ಈ ಹೋರಾಟದಲ್ಲಿ ಒಟ್ಟುಗೂಡಿಸಲು ಸಾಧ್ಯವಾಯಿತು.

ಸತ್ತವರ ಪಟ್ಟಿಗೆ ಬದುಕಿದ್ದವರು

"ಬದುಕಿದ್ದ ನಿಂಗಮ್ಮನ್ನ ಸತ್ತವರ ಪಟ್ಟಿಗೆ ಸೇರಿಸಿ, ಅನ್ನ ಕಿತ್ಕೊಂಡಿದ್ದ ಆಹಾರ ಇಲಾಖೆ ಅಧಿಕಾರಿಗಳಿಗೆ ಛೀಮಾರಿ ಹಾಕಿದ ಮೇಲ್ರೆ ನಿಂಗಮ್ಮನಿಗೆ ಅಕ್ಕಿ ಕಾರ್ಡ್ ವಾಪಸ್ ಕೊಟ್ರು. ಇದೇ ರೀತಿ ಎಷ್ಟೋ ಜನರಿಗೆ ಅನ್ಯಾಯ ಆಗಿದೆ. ಮೇಡಂ. ನಾವೆಲ್ಲರೂ ನಮ್ಮ ಸುತ್ತಮುತ್ತ ಹಳ್ಳಿಗಳಿಗೆ ತಿಳಿಸಿ ಅವರ್ನೂ ಸಂಘಕ್ಕೆ ಮೆಂಬ್ರು ಮಾಡಿ ಕಮಿಟಿ ಮಾಡಿ ಇನ್ಮುಂದೆ ಇನ್ನೂ ಹೆಚ್ಚಿಗೆ ಹೋರಾಟಗಳಿಗೆ ಬರ್ತೀವಿ ಅಂದ್ರು. ಮಧುಗಿರಿ ತಾಲ್ಲೂಕಿನ ವಿವಿಧ ಹಳ್ಳಿಗಳಿಂದ ಸ್ವತಃ ಖರ್ಚಿನಲ್ಲಿ ನಾಲ್ಕಾರು ವಾಹನಗಳನ್ನು ಮಾಡ್ಕೊಂಡು ನವೆಂಬರ್ 25 ರ ಬೃಹತ್ ಸಭೆಯಲ್ಲಿ ಬಂದು ಪಾಲ್ಗೊಂಡರು. ತುಮಕೂರು ಜಿಲ್ಲೆಯ, ಕೊರಟಗೆರೆ, ಪಾವಗಡ, ಗುಬ್ಬಿ, ಕುಣಿಗಲ್, ತಿಪಟೂರು ತಾಲ್ಲೂಕುಗಳಿಂದ ಸ್ತ್ರೀಶಕ್ತಿ, ಸ್ವಸಹಾಯ ಗುಂಪಿನ ಮಹಿಳೆಯರು, ರೈಲು ಮತ್ತು ಬಸ್ಸಿನಲ್ಲಿ ಬಂದಿಳಿದು ಸಭೆಯಲ್ಲಿ ಸೇರ್ಕೊಂಡ್ರು.

ಹಾಗೇ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು ತಾಲ್ಲೂಕುಗಳಿಂದ ಸ್ತ್ರೀಶಕ್ತಿ, ಎಸ್‌ಎಸ್‌ಜಿ ಮಹಿಳೆಯು ಸಾವಿರಾರು ಸಂಖ್ಯೆಯಲ್ಲಿ ಬಂದು ಫ್ರೀಡಂ ಪಾರ್ಕ್‌ನ ಒಳ ಹೊರಗೂ ಸೇರಿದ್ದ ಜನಸಾಗರವನ್ನು ನೋಡಿ ತುಂಬಾ ಖುಷಿ ಆಯಿ ಮೇಡಂ. ಇಷ್ಟೊಂದು ಜನ ಇದ್ದಾರೆ. ನಾವು ನ ತಾಲ್ಲೂಕುಗಳಲ್ಲಿ ಇನ್ನೂ ಮುಂದೆ ಇನ್ನೂ ಜೋ ಜನರನ್ನು ತರ್ತೀವಿ ಅಂದ್ರು.

ನವೆಂಬರ್‌ರ 25ರ ರ್‍ಯಾಲಿಗೂ ಮುನ್ನ ನಡೆ ತಾಲ್ಲೂಕುವಾರು ಆಹಾರ ಸಮಾವೇಶ ಮತ್ತು ಸ್ತ್ರೀ ಸ್ವಸಹಾಯ ಗುಂಪುಗಳ ಪಂಚಾಯ್ತಿವಾ ಸಮಾವೇಶಗಳಲ್ಲಿ ಹಾಗೂ ಜಾಥಾ ಸಂದರ್ಭದ ಬಡಕೂಲಿಕಾರರು ಮುಗಿಲು ಮುಟ್ಟಿದ ಬೆಲೆ ಏ ಹಾಗೂ ರೇಷನ್‌ಕಾರ್ಡ್ ಮತ್ತು ಪಡಿತರ ವಿತರ ಅವ್ಯವಸ್ಥೆಯಿಂದ ರೋಸಿಹೋಗಿದ್ದ ಜನ, ಕೇಂ ರಾಜ್ಯ ಸರ್ಕಾರಗಳ. ಜನವಿರೋಧಿ ನೀತಿ ಹಿಡಿಶಾಪ ಹಾಕಿದರು.

ಕರ್ನಾಟಕ ಪ್ರಾಂತ ರೈತ ಸಂಘ

ಅವಿಭಜಿತ ಕೋಲಾರ ಜಿಲ್ಲಾ 15ನೇ ಸಮ್ಮೇಳನ

ಖಾಸಗಿ ಲೇವಾದೇವಿಗಾರರಿಂದ ಮುಕ್ತಿಗೊಳಿಸಲು ಆಗ್ರಹ

• ವಿಶ್ರುತ್

...ಕೋಲಿಡಿ ...ಇನಾಮತಿಯಂಥ ಪಾಳೇಗಾರಿ ...ಮಾಲಿಕ ಪದ್ಧತಿ ವಿರುದ್ಧ ನಿರ್ಣಾಯಕ ಸಂಘರ್ಷ ...ಟಿಸಿದ, ಕರ್ನಾಟಕದಲ್ಲಿ ರೈತ ಹೋರಾಟಗಳ ...ಹಾಸದಲ್ಲಿ ವಿಶೇಷ ಸ್ಥಾನ ಪಡೆದಿರುವ ಅವಿಭಜಿತ ...ಲಾರ ಜಿಲ್ಲೆಯ ಕರ್ನಾಟಕ ಪ್ರಾಂತ ರೈತ ಸಂಘದ ...ಆರ್‌ಎಸ್) 15ನೇ ಸಮ್ಮೇಳನ 2009 ನವೆಂಬರ್ ... ಹಾಗೂ ಡಿಸೆಂಬರ್ 20 ರಂದು ಕೋಲಾರದಲ್ಲಿ ...ಯಿತು. ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಲ್ಲಿ ...ರಾಟಗಳಿಗೆ ಸಮರ್ಥ ನಾಯಕತ್ವ ನೀಡುತ್ತಾ ...ಮೀಣ ಜನರಲ್ಲಿ ಹುರುಪು ಮೂಡಿಸುತ್ತಲೇ ...ಾತ್ತನೆ ಅನಾರೋಗ್ಯದಿಂದ ಮಡಿದ ಸಂಗಾತಿ ...ಳೂರು ಶಂಕರರ ಹೆಸರನ್ನು ಸಮ್ಮೇಳನದ ...ರಾಂಗಣಕ್ಕೆ ಇಡಲಾಗಿತ್ತು. ಸಮ್ಮೇಳನ ಉದ್ಘಾಟಿಸಿದ ...ಆರ್‌ಎಸ್ ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆ ...ಗೊಂಡಂತೆ ಹಲವು ಮುಖಂಡರು, ...ರ್ಯಕರ್ತರಿಗೆ ಶಂಕರರ ನೆನಪು ಕಾಡಿತು. ಅವರು ...ತ್ತಿ ಹಿಡಿದ ಕೆಂಬಾವುಟವನ್ನು ಇನ್ನಷ್ಟು ...ಕದಿಂದ ಮುಂದಕ್ಕೊಯ್ಯುವ ಪ್ರತಿಜ್ಞೆ ಮಾಡುವ ...ುವೆಯೇ ಶಂಕರಗೆ ಅರ್ಹ ಗೌರವವೆನ್ನುವ ...ತಿಯಲ್ಲಿ 'ಒಡನಾಡಿ' ಎಂಬ ಪುಸ್ತಕವನ್ನು ...ಮ್ಮೇಳನದಲ್ಲಿ ಬಿಡುಗಡೆ ಮಾಡಿದ್ದು ಸಕಾಲಿಕವೂ ...ರ್ಥಪೂರ್ಣವೂ ಆಗಿತ್ತು. ಪತ್ರಕರ್ತ ವಿಶ್ವ ...ಂದಾಪುರ ಈ ಕೃತಿಯನ್ನು ಸಂಪಾದಿಸಿದ್ದಾರೆ.

...ಲ್ಲಾವಾರು ವಿಭಜನೆ

'ಸಯಾಮಿ'ಯನ್ನು ಬೇರ್ಪಡಿಸುವಂಥ ...ನಿವಾರ್ಯ ನೋವನ್ನು ಅತ್ಯಂತ ಸ್ಫೂರ್ತಿಯಿಂದಲೇ ... ಸಮ್ಮೇಳನ ಅನುಭವಿಸಿತು. ಅಂದರೆ, ಕೋಲಾರ ಜಿಲ್ಲೆ ಎರಡು ಕಂದಾಯ ಜಿಲ್ಲೆಗಳಾಗಿ ಕೋಲಾರ ಮತ್ತು ಚಿಕ್ಕಬಳ್ಳಾಪುರಗಳಾಗಿ ವಿಭಜನೆಗೊಂಡಿರುವುದರಿಂದ ಕೆಪಿಆರ್‌ಎಸ್ ಎರಡು ಪ್ರತ್ಯೇಕ ಜಿಲ್ಲಾ ಸಮಿತಿಗಳನ್ನು ಆಯ್ಕೆ ಮಾಡುವ ಕ್ಷಣವೂ ಸಮ್ಮೇಳನದಲ್ಲಿ ದಾಖಲಾಯಿತು. ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಗಂಗಿರೆಡ್ಡಿ ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನಕ್ಕೆ ಚಾಲನೆ ದೊರೆಯಿತು. ಸಮ್ಮೇಳನವನ್ನು ಉದ್ಘಾಟಿಸಿದ ಕೆಪಿಆರ್‌ಎಸ್ ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆ, ಜಾಗತೀಕರಣ, ಉದಾರೀಕರಣದಿಂದ ಉದ್ಭವಿಸಿರುವ ಕೃಷಿ ಬಿಕ್ಕಟ್ಟಿನ ಕರಿ ನೆರಳು ಕೋಲಾರ ಜಿಲ್ಲೆಯನ್ನೂ ಬಾಧಿಸದೇ ಬಿಟ್ಟಿಲ್ಲ ಎಂದು ನುಡಿದರು. ಸರಕಾರಗಳು ರೈತರ ನೆರವಿಗೆಂದು ಹಲವಾರು ಪ್ಯಾಕೇಜ್‌ಗಳನ್ನು ಪ್ರಕಟಿಸಿದರೂ ನೇಗಿಲಯೋಗಿಗಳ, ಅನ್ನದಾತರ ಸಂಕಷ್ಟ ನಿವಾರಣೆಯಾಗಿಲ್ಲ. ಗ್ರಾಮೀಣ ಭಾಗಗಳಲ್ಲಿ ರೈತರು, ಬಡವರು ಇನ್ನೂ ಖಾಸಗಿ ಲೇವಾದೇವಿದಾರರ ಕಪಿಮುಷ್ಟಿಯಲ್ಲಿ ಇರುವುದೇ ಇದಕ್ಕೆ ಕಾರಣ ಎಂದವರು ವಿಶ್ಲೇಷಿಸಿದರು.



ಬಡ್ಡಿ ಮೇಲೆ ಬಡ್ಡಿ ಹೇರಿ ಗ್ರಾಮೀಣ ಜನರ ಬದುಕನ್ನು ಹಿಂಡಿ ಹಿಪ್ಪೆ ಮಾಡುತ್ತಿರುವ ಖಾಸಗಿ ಲೇವಾದೇವಿಗಾರರ ಮೇಲೆ ನಿಯಂತ್ರಣ ಹೇರಲು ಪರಿಣಾಮಕಾರಿ ಕಾನೂನನ್ನು ರೂಪಿಸಿ ಎಂಬ ಕೆಪಿಆರ್‌ಎಸ್ ಸಲಹೆಯನ್ನು ಗಮನಿಸಲು ಹಸಿರು ಶಾಲನ್ನು 'ಕಡ' ತಂದು ರೈತರ ಹೆಸರಲ್ಲಿ ಪ್ರಮಾಣ ಸ್ವೀಕರಿಸಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪರಿಗೆ ಪುರುಸೊತ್ತಿಲ್ಲ ಎಂದು ಮಾನ್ಪಡೆ ವ್ಯಂಗ್ಯವಾಡಿದರು.

ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರೂ ಆದ ಕೋಲಾರ ಜಿಲ್ಲಾ ಪಂಚಾಯತ್ ಅಧ್ಯಕ್ಷ ಎಂ.ಶ್ರೀನಿವಾಸನ್ ಮಾತನಾಡಿ, ಜಿಲ್ಲೆಯಲ್ಲಿ ಹಲವು ಜನಪರ ಸರಕಾರಿ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾಗುವಲ್ಲಿ ಅಧಿಕಾರಶಾಹಿ ಹಾಗೂ ಅನೇಕ ಜನಪ್ರತಿನಿಧಿಗಳೇ ಅಡ್ಡಿಯಾಗಿದ್ದಾರೆ ಎಂದು ಆಪಾದಿಸಿದರು. ಸಿಐಟಿಯು ನಾಯಕ ಗಾಂಧಿನಗರ ನಾರಾಯಣಸ್ವಾಮಿ, ಜೆಎಂಎಸ್ ನಾಯಕಿ ವಿ.ಗೀತಾ, ರೈತಮುಖಂಡ ರಮೇಶ್ ಉದ್ಘಾಟನೆ ಸಮಾರಂಭದ ವೇದಿಕೆಯಲ್ಲಿದ್ದರು.

ಹೋರಾಟ ಅಗತ್ಯ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ಸಾಂಕೇತಿಕ ಪ್ರತಿಭಟನೆಗಳ ಜತೆ ಜತೆಯಲ್ಲೇ ನಿರ್ಣಾಯಕ ಹೋರಾಟಗಳನ್ನು ಸಂಘಟಿಸುವುದು ಅಗತ್ಯ ಎಂದು ಪ್ರತಿಪಾದಿಸಿದರು. ಜನರ ಪ್ರತಿಭಟನೆಗಳಿಗೆ ಗೌರವ ಕೊಡದಿರುವ, ಸ್ಪಂದಿಸದಿರುವ ಕಿವುಡು ಸರಕಾರಗಳನ್ನು ಎಚ್ಚರಿಸಿ ನೀತಿಗಳಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ತೀಕ್ಷ್ಣ ನಿರ್ಣಾಯಕ ಚಳವಳಿಗಳನ್ನು ರೂಪಿಸಬೇಕಾಗಿದೆ ಎಂದವರು ಹೇಳಿದರು.

ರೈತರು ಬೆಳೆದ ಬೆಳೆಗಳಿಗೆ ಲಾಭದಾಯಕ ಬೆಲೆ ನೀಡಿದರೆ ಅದುವೇ ರೈತರಿಗೆ ಮಾಡುವ ಮಹದುಪಕಾರವಾಗುತ್ತದೆ ಎಂದು ಪದೇ ಪದೇ ತಾನು 'ಮಣ್ಣಿನ ಮಗ', ರೈತನ ಮಗ' ಎಂದು ಘೋಷಿಸಿಕೊಳ್ಳುವ ಅಂದಿನ ಪ್ರಧಾನಿ ಎಚ್.ಡಿ.ದೇವೇಗೌಡರಿಗೆ ಹಲವು ಬಾರಿ ಸಲಹೆ ನೀಡಿದ್ದನ್ನು ನೆನಪಿಸಿಕೊಂಡ ಶ್ರೀರಾಮರೆಡ್ಡಿ, ಯಾರೂ ಇತ್ತ ಗಮನಹರಿಸಿಲ್ಲ ಎಂದು ವಿಷಾದಿಸಿದರು.


ಹೋರಾಟಗಳಿಗೆ ನಿರ್ಧಾರ

ಜಿಲ್ಲೆಯ ತೋಟಗಾರಿಕೆ ಬೆಳೆಗಳಿಗೆ ಮಾರುಕಟ್ಟೆ ಹಾಗೂ ಶಿತಲೀಕರಣ ಸೌಲಭ್ಯ ಒದಗಿಸಬೇಕು, ರೇಷ್ಮೆ ಹಾಗೂ ಹೈನುಗಾರಿಕೆ ಉದ್ಯಮವನ್ನು ಉಳಿಸಲು ಕ್ರಮ ಕೈಗೊಳ್ಳಬೇಕು, ನದಿ ನಾಲೆಗಳಿಲ್ಲದೆ ಕೃಷಿಗಾಗಿ ಅಂತರ ಜಲವನ್ನೇ ನೆಚ್ಚಿಕೊಂಡಿರುವ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸಮರ್ಪಕ ವಿದ್ಯುತ್ ಪೂರೈಸಬೇಕು ಎಂದು ಆಗ್ರಹಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಬಡಪೀಡಿತವಾದ ಎರಡೂ ಜಿಲ್ಲೆಗಳಲ್ಲಿ ಸೂಕ್ತ ಬರಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು ಹಾಗೂ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದೂ ಆಗ್ರಹಿಸಿದ ಸಮ್ಮೇಳನ, ಈ ಬೇಡಿಕೆಗಳ ಆಧಾರದಲ್ಲಿ ಮುಂದಿನ ದಿನಗಳಲ್ಲಿ ಹೋರಾಟಗಳನ್ನು ಸಂಘಟಿಸಲು ನಿರ್ಧರಿಸಿತು.

ಹೊಸ ಸಮಿತಿಗಳು

ಕೋಲಾರ ಜಿಲ್ಲಾ ಸಮಿತಿ : ಪಿ.ಆರ್.ಸೂರ್ಯನಾರಾಯಣ ಅಧ್ಯಕ್ಷ, ಎಂ.ರಾಮಚಂದ್ರ, ಟಿ.ಕೃಷ್ಣೇಗೌಡ ಉಪಾಧ್ಯಕ್ಷರು, ಟಿ.ಎಂ.ವೆಂಕಟೇಶ್ ಪ್ರಧಾನ ಕಾರ್ಯದರ್ಶಿ, ಗಂಗಮ್ಮ, ಪಿ.ಆರ್.ನವೀನ್‌ಕುಮಾರ್ ಸಹ ಕಾರ್ಯದರ್ಶಿಗಳು ಹಾಗೂ ಒಂಬತ್ತು ಮಂದಿ ಕಾರ್ಯಕಾರಿ ಸಮಿತಿ ಸದಸ್ಯರು.

ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ : ಗಂಗಿರೆಡ್ಡಿ ಅಧ್ಯಕ್ಷ, ಸಿ.ಗೋಪಿನಾಥ ಪ್ರಧಾನ ಕಾರ್ಯದರ್ಶಿ ○



ಹೋಳೂರು ಶಂಕರ್ ನೆನಪಿನ ಪುಸ್ತಕ 'ಒಡನಾಡಿ'

ಇತ್ತೀಚೆಗೆ ನಿಧನರಾದ ಕೋಲಾರ ಜಿಲ್ಲೆಯ ಪ್ರಮುಖ ರೈತ ಹಾಗೂ ಜನಪರ ಹೋರಾಟಗಳ ಮುಖಂಡರಾದ ಹೋಳೂರು ಶಂಕರ್ ಕುರಿತು ಪತ್ರಕರ್ತ, ಲೇಖಕ ವಿಶ್ವ ಕುಂದಾಪುರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಒಡನಾಡಿ' ಕೃತಿಯನ್ನು ಸಮ್ಮೇಳನದಲ್ಲಿ ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಬಿಡುಗಡೆ ಮಾಡಿದರು.

ಕರ್ನಾಟಕ ವಿಧಾನಸಭೆಯ ಮಾಜಿ ಸ್ಪೀಕರ್ ಕೆ.ಆರ್.ರಮೇಶ್‌ಕುಮಾರ್ ಮತ್ತು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಅವರು ಪ್ರಸ್ತುತ ಸಾಮಾಜಿಕ ಸನ್ನಿವೇಶ ಮತ್ತು ಹೋರಾಟಗಳು, ಸಾಗಬೇಕಾದ ಹಾದಿಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

ಕಳೆದೆರಡು ದಶಕಗಳಿಂದ ಶಂಕರ್ ಜತೆ ಒಡನಾಡಿದ ಹಿರಿಯ ಸಿಪಿಐ(ಎಂ) ಧುರೀಣ ಜಿ.ವಿ.ಶ್ರೀರಾಮರೆಡ್ಡಿ, ಕೆಪಿಆರ್‌ಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಜನವಾದಿ ಮಹಿಳಾ ಸಂಘಟನೆಯ ನಾಯಕಿ ವಿ.ಗೀತಾ, ರೇಗಾ ಜಾರಿ ಸಮಿತಿಯ ಮುಖಂಡ ಟಿ.ಎಂ.ವೆಂಕಟೇಶ್ ಮೊದಲಾದವರು ದಿವಂಗತ ಶಂಕರ್ ಸವೆಸಿರುವ ಸಂಘರ್ಷದ ಹಾದಿಯನ್ನು ತಮ್ಮ ಬರಹಗಳಲ್ಲಿ ವಿವರಿಸಿದ್ದಾರೆ. ಕೆಪಿಆರ್‌ಎಸ್ ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆ ಕೃತಿಗೆ ಆಶಯ ನುಡಿ ಬರೆದಿದ್ದಾರೆ. ○

ಆಹಾರ ಭದ್ರತೆಗಾಗಿ ತೀವ್ರಗೊಳ್ಳುತ್ತಿರುವ ಹೋರಾಟ

ಕೊಪ್ಪಳ ಜಿಲ್ಲೆಯಲ್ಲಿ 'ಉದ್ಯೋಗ ಖಾತ್ರಿ' ಸ್ಥಿತಿಗತಿ ಹೇಗಿದೆ? ಪಡಿತರ, ಪ್ರವಾಹ ಪರಿಹಾರ ಕಾರ್ಯ ಇತ್ಯಾದಿ ಹೇಗಿವೆ? ಒಂದು ನೋಟ.

ಕೂಲಿ - ಉದ್ಯೋಗಕ್ಕಾಗಿ ಸೆಣಸಾಟ

ಗಂಗಾಧರಸ್ವಾಮಿ

ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಭತ್ತದ ಖಣಜವೆಂದು ಪ್ರಸಿದ್ಧಿಯಾಗಿತ್ತು. ಎಷ್ಟೋ ಜನ ಕೂಲಿಕಾರರು ಜೀವನೋಪಾಯಕ್ಕಾಗಿ ಒಣ ಬೇಸಾಯದ ಪ್ರದೇಶಗಳಿಂದ ಬಂದು ಇಲ್ಲಿ ನೆಲೆಸಿ ಜೀವನ ಕಂಡುಕೊಂಡಿದ್ದರು. ಆದರೆ ಈಗ ಈ ನಾಡಿನಲ್ಲಿ ಕೂಲಿಕಾರರ ಸಂಖ್ಯೆ ಹೆಚ್ಚುತ್ತಿದೆ. ಭತ್ತದ ಗದ್ದೆಗಳಲ್ಲಿ ಕೂಲಿಕಾರರಿಗೆ ಹೆಚ್ಚು ದಿನ ಕೆಲಸಗಳು ಸಿಗುತ್ತಿದ್ದವು. ಈಗ ಕೆಲಸದ ದಿನಗಳು ಕಡಿಮೆಯಾಗಿವೆ. ಭತ್ತ ಕಟಾವು ಯಂತ್ರಗಳು (ಹಾರ್ವೆಸ್ಟರ್) ಪ್ರತಿ ಹಳ್ಳಿಗಳಲ್ಲಿ ಕೆಲಸ ನಿರ್ವಹಿಸುತ್ತಿವೆ. ಕೂಲಿಕಾರರಿಗೆ ಸಿಗುವ ತುತ್ತು ಅನ್ನವನ್ನು ಈ ದೈತ್ಯ ಯಂತ್ರಗಳು ಕಸಿದುಕೊಳ್ಳುತ್ತಿವೆ. ಕೂಲಿಕಾರರಿಗೆ ಕೆಲಸ ಎಲ್ಲೂ ಸಿಗದಾಗಿದೆ.

'ಉದ್ಯೋಗ ಖಾತ್ರಿ' ಇಲ್ಲ ಬರಿ ವಂಚನೆ

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕಾಯಿದೆ ಕೊಪ್ಪಳ ಜಿಲ್ಲೆಯಲ್ಲಿ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಸರಕಾರದ ನಿರ್ದೇಶನದಂತೆ ಪ್ರತಿ ತಾಲ್ಲೂಕು, ಪ್ರತಿ ಗ್ರಾಮ ಪಂಚಾಯತ್‌ಗಳು ನಿಗದಿಪಡಿಸಿದ ಹಣವನ್ನು ಈ ಕಾಯಿದೆ ಅಡಿಯಲ್ಲಿ ಖರ್ಚು ಮಾಡಬೇಕು. ಕೂಲಿಕಾರರಿಗೆ ಕೆಲಸ ಒದಗಿಸಬೇಕು ಎನ್ನುವ ನೀತಿ, ನಿಯಮಗಳನ್ನು ಗಾಳಿಗೆ ತೂರಿ ಚುನಾಯಿತ ಪ್ರತಿನಿಧಿಗಳ ಬೆಂಬಲಿಗರ ಪಾಲಾಗುತ್ತಿದೆ. ಕೆಲವು ಭೂಮಾಲಿಕರು ಸೇರಿಕೊಂಡು ಗುಂಪುಗಳನ್ನು ರಚಿಸಿಕೊಂಡು ಪಂಚಾಯತ್‌ಗಳಲ್ಲಿ ಉದ್ಯೋಗ ಚೀಟಿ ಪಡೆದುಕೊಂಡು ತಮ್ಮ ತಮ್ಮ ಭೂಮಿಯಲ್ಲಿ ಯಂತ್ರಗಳಿಂದ ಕಾಮಗಾರಿ ಮಾಡಿಸಿ ಮಾಡಿಸಿದ ಕೆಲಸವನ್ನು ಜನರಿಂದ ಮಾಡಿಸಿದಂತೆ ಫೋಟೋ ತೆಗೆಯಿಸಿ ಸಂಬಂಧಿಸಿದ ನೋಡೆಲ್ ಅಧಿಕಾರಿ (ಅಭಿಯಂತರರು) ಗಳಿಂದ (ದುಡ್ಡುಕೊಟ್ಟು ಹಣವನ್ನು) ಲೂಟಿ ಮಾಡಲಾಗುತ್ತಿದೆ. ಹೀಗೆ ಗುರಿ ನಿಗದಿಪಡಿಸಿದ ಹಣವನ್ನು ಖರ್ಚು ಮಾಡುವ ನೀತಿ ಇಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ. ಇವರಿಗೆ ಸ್ಪಂದಿಸಿ ಕೆಲವು ಅಧಿಕಾರಿಗಳು ಹಣ ಸಂಪಾದನೆ ಮಾಡುತ್ತಿದ್ದಾರೆ.

ಗಂಗಾವತಿ ತಾಲ್ಲೂಕಿನ ಕೂಲಿಕಾರರ ಬವಣೆ

ರಾಜ್ಯದಲ್ಲಿ ಎಲ್ಲ ತಾಲ್ಲೂಕು ಕೇಂದ್ರಗಳಿರುವಂತೆ ಇಲ್ಲಿಯೂ ತಾಲ್ಲೂಕು ಕೇಂದ್ರ, ತಾಲ್ಲೂಕು ಪಂಚಾಯತ್ ಕಾರ್ಯಾಲಯವಿದೆ. ಅದಕ್ಕೆ ಒಬ್ಬ ಕಾರ್ಯ ನಿರ್ವಾಹಕ ಅಧಿಕಾರಿ ಇದ್ದಾರೆ. ಸುಳ್ಳು ಹೇಳುವುದಕ್ಕೆ ಪ್ರಶಸ್ತಿ ಏನಾದರೂ ಇದ್ದರೆ ಗಂಗಾವತಿ ತಾಲ್ಲೂಕಿನ ಇ.ಒ. ಅವರಿಗೆ ನೀಡಬೇಕು. ತಾಲ್ಲೂಕಿನಲ್ಲಿ ಗುಂಡೂರು ಎನ್ನುವ ಗ್ರಾಮ ಪಂಚಾಯತ್ ಇದ್ದು ಅದೇ ಗ್ರಾಮದ ಕೂಲಿಕಾರರು ಜುಲೈ ತಿಂಗಳಲ್ಲಿ ಕೆಲಸ ಮಾಡಿದ್ದು ಇರುತ್ತದೆ. ಈ ಪಂಚಾಯತ್ ಕಾರ್ಯದರ್ಶಿಗಳಿಗೆ ಸ್ವಲ್ಪ ಕಾಲ ಬುದ್ದಿಭ್ರಮಣೆಯಾಗಿದೆ ಎಂದು ಅಲ್ಲಿಯ ಸಿಬ್ಬಂದಿಗಳಿಂದ ಕಾಮಗಾರಿ ಆರಂಭಗೊಂಡವು. ಇಲ್ಲಿ 364 ಕುಟುಂಬಗಳು (3658 ಮಾನವ ದಿನಗಳು) ಹತ್ತು ದಿವಸ ಕೆಲಸ ಮಾಡಿದವು. ಸಂಬಂಧಿಸಿದ ನೋಡೆಲ್ ಅಧಿಕಾರಿ ಇವರು ಎರವಲು ಸೇವೆಗೆ ನಿಯೋಜಿತಗೊಂಡವರು ಕೆಲಸ ನಡೆದಾಗ ಬರಲಿಲ್ಲ. ಯಾವ ಕೆಲಸಕ್ಕೆ ಎಷ್ಟು ಕೆಲಸದ ಆಳುಗಳಿಗೆ, ಎಷ್ಟು ಹಣ ಎಂದು ಏನೂ



ಹೇಳಲಿಲ್ಲ. ಕೆಲಸ ಪೂರ್ಣಗೊಳಿಸಿ ಕೂಲಿ ಕೇಳಿದರೆ ಕಾರ್ಯದರ್ಶಿಗಳಿಲ್ಲ. ಹೊಸದಾಗಿ ಬಂದವರು ನಮಗೆ ಸಂಬಂಧವಿಲ್ಲ. ಹಿಂದಿನ ಕಾರ್ಯದರ್ಶಿಗಳನ್ನು ಕೇಳಿರಿ ಎಂದು ಹೇಳುತ್ತಾರೆ. ಹಿಂದಿನ ಕಾರ್ಯದರ್ಶಿಗಳು ಹಣಕಾಸಿನ ಅವ್ಯವಹಾರದ ಸಂಬಂಧವಾಗಿ ಅಮಾನತುಗೊಂಡಿದ್ದಾರೆ. 3 ತಿಂಗಳಲ್ಲಿ 4 ಜನ ಕಾರ್ಯದರ್ಶಿಗಳು ಬದಲಿಯಾದರೂ ಕೂಲಿಕಾರರಿಗೆ ಕೂಲಿ ಸಿಗಲಿಲ್ಲ. ಕೂಲಿಕಾರ ಸಂಘ ಮಧ್ಯಪ್ರವೇಶ ಮಾಡಿದಾಗ ನೋಡೆಲ್ ಅಧಿಕಾರಿ ಕೆಲಸ ನೋಡಲು ಬಂದರು. ಇತ್ತೀಚೆಗೆ ಸುರಿದ ಭಾರಿ ಮಳೆಯಿಂದ ಮಾಡಿದ ಕೆಲಸಗಳು ಕಾಣಸಿಗುತ್ತಿಲ್ಲ. ಅದಕ್ಕಾಗಿ ಈ ಅಧಿಕಾರಿ ಇಲ್ಲಿ ಕೂಲಿಕಾರರು ಕೆಲಸ ಮಾಡಿಲ್ಲವೆಂದು ಹೇಳುತ್ತಾರೆ. ಕೂಲಿ ಕೊಡುವುದು ಆಗುವುದಿಲ್ಲವೆಂದು ಹೇಳುತ್ತಾರೆ. ಇವರಿಗೆ ತಿನ್ನಲಿಕ್ಕೆ ಏನಾದರೂ ಗೊಬ್ಬರ (ಸಗಣಿ.... ಅಂದರೆ ಲಂಚ) ಕೊಟ್ಟರೆ ನಿಮ್ಮ ಕೂಲಿಕಾರರಿಗೆ ಹಣ ಕೊಡಿಸುವುದಾಗಿ ತಾಲ್ಲೂಕು ಪಂಚಾಯತ್ ಸಿಬ್ಬಂದಿಗಳಲ್ಲಿ ಕೆಲವರು ಹೇಳುತ್ತಿದ್ದಾರೆ. ಆದರೆ ಇದಕ್ಕೆ ಯಾವುದಕ್ಕೂ ಸೊಪ್ಪು ಹಾಕದೇ ಕೂಲಿಕಾರರು ಸಂಘಟಿತರಾಗಿ ತಾಲ್ಲೂಕು ಪಂಚಾಯತ್ ಮುಂದೆ ಅನಿರ್ಧಿಷ್ಟ ಕಾಲದ ಧರಣಿ ನಡೆಸುವ ತೀರ್ಮಾನ ಮಾಡಿದ್ದಾರೆ. ಅದೇ ರೀತಿ, ಹೇರೂರು, ಕೇಸರಹಟ್ಟಿ, ಹೊಸ ಕೇರಾ ಹೀರೇಖೇಡ ಇನ್ನೂ ಅನೇಕ ಗ್ರಾಮ ಪಂಚಾಯತ್‌ಗಳಲ್ಲಿ ಕೂಲಿ ಕೊಟ್ಟಿರುವುದಿಲ್ಲ. ಹೀಗೆ ಕೂಲಿಕಾರರಿಗೆ ಈ ಕಾಯಿದೆಯ ಬಗ್ಗೆ ನಿರಾಶೆ ಮೂಡಿದೆ. ಫಾರಂ. ನಂ.6 ಕೆಲಸ ಪಡೆಯಲು ಹೋರಾಟ, ಕೂಲಿ ಕೇಳಲು ಹೋರಾಟ, ಹೀಗೆ ಪ್ರತಿಯೊಂದಕ್ಕೂ ಮೇಲಿನ ಅಧಿಕಾರಿಗಳು ನಿರ್ಲಕ್ಷ್ಯ ಭಾವನೆ ಹೊಂದಿರುವುದೇ ಕಾರಣವಾಗಿದೆ. ಇಷ್ಟೆಲ್ಲಾ ಕಷ್ಟಗಳಿದ್ದರೂ ಕೂಲಿಕಾರರ ಸಂಘದ ನೇತೃತ್ವದಲ್ಲಿ ಈ ಹೋರಾಟ ನಿರಂತರವಾಗಿ ನಡೆಯುತ್ತಲೇ ಇದೆ.

ಆಹಾರಕ್ಕಾಗಿ ತೀವ್ರಗೊಂಡ ಹೋರಾಟ

ಬಣ್ಣ ಬದಲಾಯಿಸುವ ನೆಪದಲ್ಲಿ ಬಡವರಿಗೆ ಪಡಿತರ ಚೀಟಿ ಸಿಗಲಿಲ್ಲ. ಎಪಿಎಲ್ ಮತ್ತು ಬಿಪಿಎಲ್ ಎಂತದ್ದೇ ಆದರೂ ಒಂದು ಕಾರ್ಡ್ ಆದರೂ ಸಿಗಲಿಲ್ಲ. ತಾತ್ಕಾಲಿಕವಾಗಿಯಾದರೂ ಸಿಗಲಿಲ್ಲ. ಹೀಗೆ ಕೂಲಿಕಾರರು ಪಡಿತರ ಚೀಟಿಯಿಂದ ವಂಚಿತರಾಗಿದ್ದಾರೆ. ಇತ್ತೀಚೆಗೆ 20.11.2009 ರಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯಿಂದ ಸಾವಿರಾರು ಕೂಲಿಕಾರರು ತಮಗೆ ಪಡಿತರ ಚೀಟಿ ಕೊಡಬೇಕು, ಪ್ರತಿ ತಿಂಗಳಿಗೆ 2 ರೂ. ದರದಲ್ಲಿ 35 ಕೆ.ಜಿ. ಅಕ್ಕಿ ಕೊಡಬೇಕೆಂದು ಸರಕಾರಕ್ಕೆ ಒತ್ತಾಯಿಸಿದರು. ಇದಕ್ಕೆ ತಾಲ್ಲೂಕು ಅಧಿಕಾರಿಗಳು ಹಾರಿಕೆ ಉತ್ತರ ಕೊಡುತ್ತಿದ್ದಾರೆ. ರಾಜ್ಯಕೇಂದ್ರದಿಂದ ನಮಗೆ ಅಧಿಕೃತವಾಗಿ ಮಾಹಿತಿ ಬಂದರೆ ಮಾತ್ರ ನಿಮಗೆ ಕಾರ್ಡುಗಳನ್ನು ನೀಡಲು ಸಾಧ್ಯವಾಗುತ್ತದೆ. ಅದರಂತೆ ಆಹಾರಧಾನ್ಯವನ್ನು ಪೂರೈಸಲು ಸಾಧ್ಯವಾಗುತ್ತದೆಂದು ಹೇಳುತ್ತಾರೆ. ಇಲ್ಲಿಯ ರೈತ ಕೂಲಿಕಾರರು ಸ್ವಂತ ವಾಹನಗಳನ್ನು ಮಾಡಿಕೊಂಡು ನವೆಂಬರ್ 25 ರ ಬೆಂಗಳೂರ ಚಲೋ ಕಾರ್ಯಕ್ರಮಕ್ಕೆ ಸಾವಿರಾರು ಸಂಖ್ಯೆಯ ಆಗಮಿಸಿದ್ದಾರೆ. ತಿನ್ನುವ ಅನ್ನಕ್ಕೂ ಪರದಾಡುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ ಈ ರಾಜ್ಯ ಬಿ.ಜೆ.ಪಿ ಸರಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ.

ಗ್ರಾಮ ಪಂಚಾಯತ್ ಆಡಳಿತ ಹಿಡಿಯುವ ಲೆಕ್ಕಾಚಾರ

ಜನರಿಗೆ ಕೆಲಸವಿಲ್ಲ, ಆಹಾರವಿಲ್ಲ, ಆದರೂ ಇಂತಹ ಸಂದರ್ಭದಲ್ಲಿ ಶಾಸಕರ, ಸಚಿವರ ಬೆಂಬಲಿಗರು ಹಳ್ಳಿಗಳಲ್ಲಿ ತುಂಡು ಗುತ್ತಿಗೆ ಆಧಾರದಲ್ಲಿ ಕೆಲಸಗಳನ್ನು ಮಾಡಿಸುವ ನೆಪದಲ್ಲಿ ಹಣ ಜಮಾಯಿಸುತ್ತಿದ್ದಾರೆ. ಏಕೆಂದರೆ ಇನ್ನೂ 3 ರಿಂದ 4 ತಿಂಗಳುಗಳಲ್ಲಿ ಗ್ರಾಮ ಪಂಚಾಯತ್‌ಗಳಿಗೆ ಚುನಾವಣೆ ನಡೆಯುವ ಸಾಧ್ಯತೆಗಳಿವೆ. ಅದಕ್ಕಾಗಿ ಅಕ್ರಮವಾಗಿ ಹಣ ಸಂಪಾದಿಸಿಕೊಂಡು ಪಂಚಾಯತ್ ಆಡಳಿತ ತಮ್ಮ ಕೈವಶ ಮಾಡಿಕೊಂಡು ಉದ್ಯೋಗ ಖಾ ಯೋಜನೆಗೆ ಬಂದ ಹಣವನ್ನು ಲೂಟಿ ಮಾಡಲು ಸಂಚು ನಡೆಸಿದ್ದಾರೆ. ಆಗಲೇ ಚುನಾವಣೆ ತಯಾ ನಡೆಸಿದ್ದಾರೆ. ಸಂಬಂಧಿಸಿದ ಶಾಸಕರು, ಸಚಿವರು ತಮ್ಮ ಆಪ್ತರಿಗೆ (ಬಾಲಬಡುಕರಿಗೆ) ಗುತ್ತೇದಾರಿಕೆಯ ಪರವಾನಗಿ ಇಲ್ಲದಿದ್ದರೂ ಅವರಿಗೆ ಲಕ್ಷಾಂತರ ರೂಪಾಯಿಗಳ ಕಾಮಗಾರಿ ನೀಡಿ ಈ ಹಿಂದೆ ತಮಗೆ ಮಾಡಿದ ಉಪಕಾರಕ್ಕೆ (ಮತ ಹಾಕಿಸಿದ್ದು) ಈ ರೀತಿ ಋಣ ತೀರಿಸಿಕೊಳ್ಳುತ್ತಿದ್ದಾರೆ. ಹೀಗೆ ಪ್ರತಿ ಹಳ್ಳಿಮಟ್ಟದಲ್ಲಿ ಭ್ರಷ್ಟಾಚಾರ ಹೆಚ್ಚುತ್ತಿದೆ. ಜನತೆ ಆತಂಕಕ್ಕೊಳಗಾಗಿದ್ದಾರೆ. ಚುನಾಯಿತ ಸರಕಾರ ಹೀಗೆ ದುಡಿಯುವ ವರ್ಗದ ಜನರನ್ನು ಕಡೆಗಣಿಸಿದರೆ ಮುಂದಿನ ದಿನದಲ್ಲಿ ಈ ಸರ್ಕಾರಗಳಿಗೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಇಲ್ಲಿ ಯಶಸ್ವಿಯಾಗುತ್ತಿರುವ ರೇಗಾ

ಕೊಪ್ಪಳ ಜಿಲ್ಲೆಯ ಹಿಂದುಳಿದ ತಾಲ್ಲೂಕುಗಳಲ್ಲೊಂದಾದ ಕುಷ್ಟಗಿ ತಾಲ್ಲೂಕು ಪೈಕಿ ಸಂಗನಾಳ ಗ್ರಾಮ ಪಂಚಾಯತ್‌ನಲ್ಲಿ 2009 ಮತ್ತು 10 ನೇ ಸಾಲಿಗಾಗಿ ಈಗಾಗಲೇ 80 ಲಕ್ಷ ರೂ. ಕಾಮಗಾರಿ ನಡೆದಿವೆ. ಈ ಪಂಚಾಯತ್‌ಗೆ ಸಂಬಂಧಿಸಿದ 11 ಗ್ರಾಮಗಳಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ಕಾರ್ಯಕರ್ತರು ಹಗಲು, ರಾತ್ರಿ ಶ್ರಮಿಸುತ್ತಿದ್ದಾರೆ. ಡಿ.ಶಂಕರಪ್ಪನವರ ನೇತೃತ್ವದಲ್ಲಿ ಮುದಕನಗೌಡ ಗೌಡ್ರ, ಮಹಾಂತೇಶ ಮಾದನಶೆಟ್ಟಿ, ಬಾಲಸಾಬನದಾಫ್, ಸೋಮಣ್ಣ ಮೆರಿನಾಳ, ಮಂಜುನಾಥ ನಾಯಕ ಕೆಲಸ ನಿರ್ವಹಿಸುತ್ತಿದ್ದು ಕರೆ ನಿರ್ಮಾಣ ಕರಗೇರಿ ಮರಡಿ ಹತ್ತಿರ, ಕನ್ನಾಳದಲ್ಲಿ ಬದು ನಿರ್ಮಾಣ, ಗಂಗನಾಳ, ಪುರ ಹಿರೇತೆಮ್ಮಿನಾಳ, ಮೆತ್ತಿನಾಳ ಸಂಗನಾಳ ಹೀಗೆ ಕೃಷಿ ಹೊಂಡ, ಅರಣ್ಯೀಕರಣ, ಸಸಿ ಬೆಳೆಸುವಿಕೆ ಇಂಗುಗುಂಡಿ, ರಸ್ತೆ ನಿರ್ಮಾಣ ಹೀಗೆ ಕೆಲಸಗಳು ಪ್ರಗತಿಯಲ್ಲಿದೆ.

ಬಾಬ್ರಿ ಮಸೀದಿ ಧ್ವಂಸ ಸಂಘ ಪರಿವಾರದ ಸಂಪೂರ್ಣ ಪೂರ್ವಯೋಜಿತ ಹೀನ ಕೃತ್ಯ ಎಂದು ಈಗ ಸಾಬೀತಾಗಿದ್ದರೂ ಯಾವುದೇ ಪಶ್ಚಾತ್ತಾಪ, ನಾಚಿಕೆಯ ಲವಲೇಶವೂ ಇಲ್ಲದೆ ಅವರು ತಮ್ಮನ್ನು ಸಮರ್ಥಿಸಿಕೊಳ್ಳುತ್ತಲೇ ಇದ್ದಾರೆ. ಲಿಬರ್ಹಾನ್ ಆಯೋಗದ ಶಿಫಾರಸುಗಳ ಆಧಾರದಲ್ಲಿ ಈಗಲಾದರೂ ಯುಪಿಎ ಸರಕಾರ ಕ್ರಮ ಕೈಗೊಳ್ಳುತ್ತದೆಯೆ? ಇದು ಕಾಂಗ್ರೆಸ್ ನೇತೃತ್ವದ ಯುಪಿಎ ಗೆ ಒಡ್ಡಿರುವ ಒಂದು ಪರೀಕ್ಷೆ.

ಬಾಬ್ರಿ ಮಸೀದಿ ಧ್ವಂಸಕಾರರಿಗೆ ಶಿಕ್ಷೆ ಯುಪಿಎ ಸರ್ಕಾರಕ್ಕೊಂದು ಪರೀಕ್ಷೆ

ಲಿಬರ್ಹಾನ್ ಆಯೋಗದ ವರದಿಯ ಮೇಲೆ ಸಂಸತ್ತಿನ ಎರಡೂ ಸದನಗಳಲ್ಲಿ ಚರ್ಚೆ ನಡೆದಿದೆ. ಆರೆಸ್ಸೆಸ್/ಬಿಜೆಪಿ ತಮ್ಮ ಕಬಂಧ ಬಾಹುಗಳು ನಡೆಸಿದ ಬಾಬ್ರಿ ಮಸೀದಿ ಧ್ವಂಸದ ನೀತಿಗೆಟ್ಟ ಕೆಲಸವನ್ನು ಯಾವುದೇ ನಾಚಿಕೆಯಿಲ್ಲದೆ ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದವು. ಈ ಕೃತ್ಯದ ಬಗ್ಗೆ ಪಶ್ಚಾತ್ತಾಪ ಪಡುವ ಬದಲು, ಖೇದ ವ್ಯಕ್ತಪಡಿಸುವ ಬದಲು, ಈಗಲೂ ಅವರು ಬಾಬ್ರಿ ಮಸೀದಿ ಧ್ವಂಸದ ಬಗ್ಗೆ ಹೆಮ್ಮೆ ಪಡುತ್ತಿದ್ದಾರೆ. ತಮ್ಮ ಅಪರಾಧವನ್ನು ಮುಚ್ಚಿಕೊಳ್ಳಲು ಅವರು ಲಿಬರ್ಹಾನ್ ವರದಿಯಲ್ಲಿ ಅಸಂಗತತೆಗಳಿವೆ ಎಂದು ತೋರಿಸಲು ಶ್ರಮ ಪಟ್ಟರು. ಆದರೆ ಯಾವ ಆಧಾರದಲ್ಲಿ ಆಯೋಗ ತೀರ್ಮಾನಕ್ಕೆ ಬಂದಿದೆಯೋ ಹಾಗೂ ಆಮೂಲಕ ಶಿಫಾರಸುಗಳನ್ನು ಮಾಡಿದೆಯೋ ಅದಕ್ಕೂ ಸಂಘ ಪರಿವಾರದವರು ಹೇಳುವ ಅಸಂಗತತೆಗಳಿಗೂ ಏನೂ ಸಂಬಂಧವಿಲ್ಲ.



ವರದಿಯ ಪುಟ 917ರ ಪರಿಚ್ಛೇದ 158.10 ರಲ್ಲಿ ಆಯೋಗ ತಾನು ಕಂಡುಕೊಂಡ ಸಂಗತಿಗಳ ಮತ್ತು ತನ್ನ ತೀರ್ಮಾನಗಳ ಸಾರಾಂಶವನ್ನು ಹೀಗೆ ಕೊಟ್ಟಿದೆ:

"ಆಂದೋಲನಗಳ ಮುಖಂಡರು ಹಾಗೂ ರಾಜಕೀಯ ಮತ್ತು ಸಾಮಾಜಿಕ ಸಂಘಟನೆಗಳ ಪ್ರತಿಮಾಸ್ವರೂಪರು ಹೇಳಿಕೊಂಡಿರುವಂತೆ ಧ್ವಂಸಕಾರ್ಯವನ್ನು ಕರಸೇವಕರು ಸ್ವಯಂಸ್ಫೂರ್ತಿಯಿಂದ, ಕ್ರೋಧ ಮತ್ತು ಭಾವಾವೇಶಗಳಿಗೆ ಒಳಗಾಗಿ ಮಾಡಿದರು ಎಂಬ ತೀರ್ಮಾನಕ್ಕೆ ಬರುವುದು ಸರಿಯೆನಿಸದು. ದಾಳಿಯ ವಿಧಾನ, ಧ್ವಂಸಕಾರ್ಯ ನಡೆಸಿದ ಕರಸೇವಕರ ಸಂಖ್ಯೆ, ಬಹಳಷ್ಟು ಜನಗಳಿಗೆ ಅವಕಾಶವಿರದ ಸ್ಥಳದ ಮಿತಿಗಳು, ಗುಮ್ಮಟಗಳನ್ನು ಪ್ರವೇಶಿಸಿದ ಕರಸೇವಕರ ಗುರುತು ಸಿಗದಂತೆ ಮುಸುಕು ಹಾಕಿಕೊಂಡದ್ದು, ಗುಮ್ಮಟಗಳ ಅಡಿಯಿಂದ ಮೂರ್ತಿಗಳನ್ನು ಮತ್ತು ಹಣದ ಪೆಟ್ಟಿಗೆಗಳನ್ನು ತೆಗೆದದ್ದು, ನಂತರ ಅದನ್ನು ತಾತ್ಕಾಲಿಕ ದೇವಸ್ಥಾನದಲ್ಲಿ ಸ್ಥಾಪಿಸಿದ್ದು, ತಾತ್ಕಲಿಕ ದೇವಸ್ಥಾನದ ನಿರ್ಮಾಣ, ಧ್ವಂಸಕಾರ್ಯಕ್ಕೆ ಮತ್ತು ತ್ವರಿತವಾಗಿ ದೇವಸ್ಥಾನ ಕಟ್ಟುವುದಕ್ಕೆ ಸಲಕರಣೆಗಳ,ಸಾಮಗ್ರಿಗಳ ಲಭ್ಯತೆ ಧ್ವಂಸಕಾರ್ಯವನ್ನು ಬಹಳ ಶ್ರಮಪಟ್ಟು ನಡೆಸಿದ ಮಹಾಸಿದ್ಧತೆ ಮತ್ತು ಪೂರ್ವಯೋಜನೆಯಿಂದ ಮಾಡಲಾಗಿದೆ ಎಂಬ ಖಚಿತ ತೀರ್ಮಾನಕ್ಕೆ ನಮ್ಮನ್ನು ಒಯ್ಯುತ್ತವೆ."

ಕುತರ್ಕವೇ ಸಾಕ್ಷಿ

ಆ ದಿನದಿಂದಲೇ, 1992ರ ಡಿಸೆಂಬರ್ 6ರಿಂದಲೇ ಇಡೀ ದೇಶ ಈ ಘಟನೆಯನ್ನು ಅಂತರ್ಗತ ಮಾಡಿಕೊಂಡಿರುವುದು ಹೀಗೆಂದೇ ತಾನೇ? ಅತ್ತ ಆರೆಸ್ಸೆಸ್/ಬಿಜೆಪಿ ಮಾತ್ರವೇ ತಾವೇನೂ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿಲ್ಲ, ಅಲ್ಲಿ ನೆರೆದ ಕರಸೇವಕರ ಸಿಟ್ಟು ಮತ್ತು ಹತಾಶೆಯಿಂದ ಹಾಗಾಯಿತು ಎಂದು ಹೇಳಿಕೊಂಡೇ ಬಂದರು. ಹಾಗಿದ್ದರೆ ಅವರು ಈ ಧ್ವಂಸ ಕೃತ್ಯವನ್ನು ಖಂಡಿಸಲು, ದೂಷಿಸಲು ನಿರಾಕರಿಸುತ್ತಿದ್ದುದೇಕೆ? ಅವರು ಹೇಳಿಕೊಳ್ಳುವಂತೆ ಹೀಗಾಗಬಾರದಿತ್ತು ಎಂಬುದು ಅವರ ನಿರೀಕ್ಷೆಯೂ ಆಗಿದ್ದರೆ ಈ ಬಗ್ಗೆ ಒಂದು ಖೇದದ ಮಾತೂ ಅವರಿಂದ ಬರಲಿಲ್ಲವೇಕೆ? ಇದೇ ಅವರಿಗೆ ಈ ಬಗ್ಗೆ ಏನೊಂದೂ ಪಶ್ಚಾತ್ತಾಪ ಇಲ್ಲ ಎಂಬುದನ್ನು ತೋರಿಸುತ್ತದೆ. ಇಂತಹ ಕುತರ್ಕವೇ ಒಂದು ಮೊದಲೇ ನಿಖರವಾಗಿ ಯೋಜಿಸಿದ್ದ ಕೆಲಸವನ್ನು ನಿಖರವಾಗಿ ಈಡೇರಿಸಿದ ಅವರ ಅಪರಾಧವನ್ನು ಸಾಬೀತು ಮಾಡುತ್ತದೆ. ಬಾಬ್ರಿ ಮಸೀದಿ ಧ್ವಂಸದ ಕೆಲವೇ ದಿನಗಳ ನಂತರ ಆಗ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಕಲ್ಯಾಣ ಸಿಂಗ್ ಕೊಲ್ಕತ್ತಾದಲ್ಲಿ ಒಂದು ಭಾಷಣದಲ್ಲಿ ಹೀಗೆಂದೇ ಹೆಮ್ಮೆಯಿಂದ ಹೇಳಿಕೊಂಡರು- "ಈ ಕೆಲಸವನ್ನು ಕಮಟ್ರಾಕ್ಟರುಗಳಿಗೆ ಕೊಟ್ಟಿದ್ದರೆ ಅವರಿಗೆ ಎಷ್ಟೋ ದಿನಗಳು ಬೇಕಾಗುತ್ತಿತ್ತು, ಆದರೆ ತಮ್ಮ ಕರಸೇವಕರು ಅದನ್ನು ಐದೇ ಗಂಟೆಗಳಲ್ಲಿ ಮಾಡಿದರು" ಎಂದಾತ ಹೇಳಿಕೊಂಡರು.

ಲಿಬರ್ಹಾನ್ ಆಯೋಗ ಆಗಿನ ಪಿ.ವಿ.ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರಕಾರವನ್ನು ದುರ್ಬಲ ರೀತಿಯಲ್ಲಿ ಸಮರ್ಥಿಸಿಕೊಂಡಿರುವುದಕ್ಕೆ ಎಲ್ಲಾ ಕಡೆಗಳಿಂದ ಟೀಕೆ ಬಂತು. ಕಾಂಗ್ರೆಸೇನೋ ತಾವು ಒಂದು ಪಕ್ಷವಾಗಿ, ಅಗಿನ ಸರಕಾರದ ನಿಷ್ಕ್ರಿಯತೆಗೆ ಕ್ಷಮೆ ಕೇಳಿದ್ದೇವೆ, ಬಾಬ್ರಿ ಮಸೀದಿಯನ್ನು, ಆಮೂಲಕ ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ರಕ್ಷಿಸುವ ಹೊಣೆಯನ್ನು ನಿಭಾಯಿಸದಿದ್ದುದಕ್ಕೆ ತಾವು ಭಾರೀ ರಾಜಕೀಯ ಬೆಲೆಯನ್ನೂ ತೆತ್ತಿದ್ದೇವೆ ಎಂದು ಈಗ ಹೇಳುತ್ತಿದ್ದಾರೆ. ಇರಲಿ, ಈಗಲಾದರೂ ಈ ಆಯೋಗ ಕಂಡುಕೊಂಡಿರುವ ಸಂಗತಿಗಳ ಆಧಾರದಲ್ಲಿ ಕ್ರಮಗಳನ್ನು ಕೈಗೊಂಡು ಜಾತ್ಯಾತೀತತೆ ಕುರಿತಂತೆ ತಮ್ಮ ಪ್ರಾಮಾಣಿಕತೆಯನ್ನು ಸಾಬೀತು ಮಾಡಬಹುದು. ಆದರೆ ಈ ನಿಟ್ಟಿನಲ್ಲಿನ ಅನುಭವ ಶೋಚನೀಯವೇ.

ಮುಂಬೈ ಗಲಭೆಗಳ ಕುರಿತ ಶ್ರೀಕೃಷ್ಣ ಆಯೋಗದ ವರದಿಯ ಗತಿಯೇನಾಯಿತು ಎಂಬುದನ್ನು ಇಡೀ ದೇಶ ಕಂಡಿದೆ. ದಿಲ್ಲಿಯ ಸಿಖ್-ವಿರೋಧಿ ಗಲಭೆಗಳ ವಿಚಾರಣೆ ಮಾಡಿದ ನಾನಾವಟಿ ಆಯೋಗದ ವರದಿಗಾದ ಗತಿಯನ್ನೂ ನೋಡಿದ್ದೇವೆ. ಕಳೆದ ನಲ್ವತ್ತು ವರ್ಷಗಳಲ್ಲಿ 1969ರ ಅಹಮದಾಬಾದ್ ಹಿಂಸಾಚಾರದ ಬಗ್ಗೆ ನ್ಯಾಯಮೂರ್ತಿ ಜಗನ್ಮೋಹನ ರೆಡ್ಡಿ ಆಯೋಗದ ವರದಿ, 1970ರ ಭಿವಂಡಿ ಹಿಂಸಾಚಾರದ ಮೆಲಿನ ನ್ಯಾಯಮೂರ್ತಿ ಡಿಪಿ ಮದನ್ ಆಯೋಗ, ದೇಶದಲ್ಲಿ ಸಂಭವಿಸಿದ ವಿವಿಧ ಕೂಮುಗಲಭೇಗಳನ್ನು ಕುರಿತ ನ್ಯಾಯಮೂರ್ತಿ ವಿಥ್ಯಾತಿಲ್ ಆಯೋಗ, ನ್ಯಾಯಮೂರ್ತಿ ಜಿತೇಂದ್ರ ನಾರಾಯಣ ಆಯೋಗ, ನ್ಯಾಯಮೂರ್ತಿ ವೇಣುಗೋಪಾಲ ಆಯೋಗ ಮುಂತಾದವುಗಳ ವರದಿಗಳ ಗತಿಯೇನಾಯಿತು ಎಂಬುದನ್ನೂ ನೋಡಿದ್ದೇವೆ. ಇಂತಹ ಪ್ರತಿಯೊಂದು ಸಂದರ್ಭದಲ್ಲಿಯೂ ತಪ್ಪಿತಸ್ಥರ ಮೇಲೆ ಯಾವುದೇ ಪರಿಣಾಮಕಾರಿ ಕ್ರಮವನ್ನು ಕೈಗೊಳ್ಳಲಿಲ್ಲ. ಕೋಮು ಗಲಭೆಗಳನ್ನು ಕುರಿತ ಈ ಎಲ್ಲಾ ವರದಿಗಳಲ್ಲೂ ಆರೆಸ್ಸೆಸ್ ಪ್ರಧಾನ ಪಾತ್ರಧಾರಿ ಎಂದೇ ಹೇಳಲಾಗಿದೆ ಎಂಬುದನ್ನು ಗಮನಿಸಬೇಕು.

ಪುಟ 15 ಕ್ಕೆ

ಕಾಂಗ್ರೆಸ್ಸಿನ ಇಬ್ಬಂದಿತನದಿಂದ ತೆಲಂಗಾಣದಲ್ಲಿ ಉದ್ವಿಗ್ನ ಪರಿಸ್ಥಿತಿ - ರಾಘವುಲು

ಆಂಧ್ರದ ತೆಲಂಗಾಣ ಪ್ರದೇಶದಲ್ಲಿ ಈಗಿನ ಉದ್ವಿಗ್ನ ಮತ್ತು ಗಂಭೀರ ಪರಿಸ್ಥಿತಿ ಕಾಂಗ್ರೆಸ್ ಪಕ್ಷದ ಇಬ್ಬಂದಿತನ ಮತ್ತು ವಂಚಕತನದ ಫಲಿತಾಂಶ. ಕಾಂಗ್ರೆಸ್ ಪಕ್ಷದ ಕಾಲಹರಣ ಧೋರಣೆ ಈ ಸಮಸ್ಯೆ ಗಂಭೀರ ಸ್ವರೂಪ ಪಡೆಯುವಂತೆ ಮಾಡಿದೆ ಎಂದು ಸಿಪಿಐ(ಎಂ) ಆಂಧ್ರಪ್ರದೇಶ ರಾಜ್ಯ ಕಾರ್ಯದರ್ಶಿ ಬಿ.ವಿ.ರಾಘವುಲು ಹೇಳಿದ್ದಾರೆ.

ತೆಲಂಗಾಣ ಸಮಸ್ಯೆಗೆ ತಿದಿಯೂದಿದ್ದು ಕಾಂಗ್ರೆಸ್ ಪಕ್ಷವೇ. ಆದ್ದರಿಂದ ಅದನ್ನು ಪರಿಹರಿಸುವ ಹೊಣೆ ಅದರ ಹೆಗಲ ಮೇಲೆಯೇ ಇದೆ. ಉಪವಾಸ ನಿರತ ಟಿಆರ್‌ಎಸ್ ಮುಖಂಡ ಕೆ. ಚಂದ್ರಶೇಖರ ರಾವ್ ಅವರಿಗೆ ಏನಾದರೂ ಆದರೆ ಅದಕ್ಕೆ ರಾಜ್ಯ ಸರಕಾರವೇ ಹೊಣೆ ಎಂದೂ ಅವರು ಹೇಳಿದ್ದಾರೆ. ಉಸ್ಮಾನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮೇಲೆ ಪೋಲೀಸ್ ಅತ್ಯಾಚಾರಗಳನ್ನು ನಡೆಸಿತೆಂದು ಅವರು ಬಲವಾಗಿ ಖಂಡಿಸಿದ್ದಾರೆ. ನಮ್ಮ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಹೋರಾಟ ನಡೆಸುವ ಹಕ್ಕಿದೆ. ಅದನ್ನು ಹೊಸಕಿ ಹಾಕುವ ಗುರಿ ನಿಂದನೀಯ. ಪ್ರತ್ಯೇಕ ತೆಲಂಗಾಣ ರಾಜ್ಯಕ್ಕಾಗಿ ಚಳುವಳಿ ನಡೆಸುವವರೊಂದಿಗೆ ಸಂವಾದ ಆರಂಭಿಸಲು ರೋಸಯ್ಯ ಸರಕಾರಕ್ಕೆ ಏನಡ್ಡಿಯಿತ್ತು ಎಂದು ಅರ್ಥವಾಗುವುದಿಲ್ಲ ಎಂದಿರುವ ರಾಘವುಲು ರಾಜ್ಯ ವಿಧಾನ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಲು ನಿರಾಕರಿಸಿರುವುದು ಕೂಡಾ ತಪ್ಪು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ವಿಷಯದಲ್ಲಿ ಸಿಪಿಐ(ಎಂ)ನ ನಿಲುವಿನಲ್ಲಿ ಯಾವ ಬದಲಾವಣೆಯೂ ಇಲ್ಲ ಎಂದು ಅವರು ಪುನರುಚ್ಚರಿಸಿದರು. ಸಿಪಿಐ(ಎಂ) ಕೇಂದ್ರ ಸಮಿತಿ ಹೊಸ ರಾಜ್ಯಗಳ ರಚನೆಯ ಪ್ರಶ್ನೆಯನ್ನು ಪರಿಶೀಲಿಸಲು ನೇಮಿಸಿದ ಪ್ರಣಬ್ ಮುಖರ್ಜಿ ಸಮಿತಿಗೆ ಸಲ್ಲಿಸಿದ ಲಿಖಿತ ಟಿಪ್ಪಣಿಯಲ್ಲಿ ಭಾಷಾವಾರು ಆಧಾರದಲ್ಲಿ ರಚಿಸಿದ ರಾಜ್ಯಗಳನ್ನು ವಿಭಜಿಸುವುದನ್ನು ವಿರೋಧಿಸಿದೆ. ಪ್ರತ್ಯೇಕ ಆಂಧ್ರ ರಚನೆಗಾಗಿ ನಡೆದ ಚಳುವಳಿಯನ್ನು ಕೂಡಾ ಸಿಪಿಐ(ಎಂ) ವಿರೋಧಿಸಿದೆ ಎಂಬುದನ್ನು ರಾಘವುಲು ನೆನಪಿಸಿದರು. ತಮ್ಮ ಪಕ್ಷ ಎಂದೂ ವಿಭಜನಕಾರಿ ಆಂದೋಲನವನ್ನು ಬೆಂಬಲಿಸುವುದಿಲ್ಲ, ಸಣ್ಣ ರಾಜ್ಯಗಳ ರಚನೆ ದೇಶದ ಒಕ್ಕೂಟ ರಚನೆಗೆ ಹಾನಿಯುಂಟು ಮಾಡುತ್ತದೆ ಎಂದು ಅವರು ಒತ್ತಿ ಹೇಳಿದರು. ಭಾವೋದ್ವೇಗಗಳನ್ನು ಬಡಿದೆಬ್ಬಿಸಬೇಡಿ, ಶಾಂತಿಯುತವಾಗಿ ಬದುಕುತ್ತಿರುವ ಜನಗಳ ನಡುವೆ ಒಡಕು ತರಬೇಡಿ, ಈ ಸಮಸ್ಯೆಗೆ ಒಂದು ಪರಿಹಾರ ಕಂಡು ಹಿಡಿಯಿರಿ ಎಂದು ಅವರು ಮನವಿ ಮಾಡಿಕೊಂಡಿದ್ದಾರೆ.



ಯುಪಿಎ-2 ಸರಕಾರ ಎಡಪಕ್ಷಗಳ 'ಹಂಗು' ಇಲ್ಲದ್ದರಿಂದ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದೀಗ ಎಲ್ಲರ ಮುಂದಿದೆ. ಜಾಗತಿಕ ಹಿಂಜರಿತ ವಿಶ್ವದಲ್ಲೆಲ್ಲಾ ಜನಗಳನ್ನು ಹಿಂಡಿ ಹಿಪ್ಪೆ ಮಾಡುತ್ತಿರುವಾಗ, ಅದಕ್ಕೆ ಕಾರಣವಾದ ನವ-ಉದಾರವಾದಕ್ಕೇ ಅಂಟಿಕೊಂಡು, ಅದರಿಂದ ದುರ್ಬಲವಾಗಿರುವ ಅಮೆರಿಕಾದ ಹಂಗಿಗೊಳಗಾಗಿ ಇನ್ನಷ್ಟು ದೈನ್ಯತೆಯಿಂದ ನಿಲ್ಲುವಂತೆ ಮಾಡಿರುವ ದಾರಿಯಿದು.

ಹಂಗಿನರಮನೆಯಲ್ಲಿ

ಯುಪಿಎ II ಸರ್ಕಾರದ ಸಂಭ್ರಮ

ಪ್ರಧಾನ ಮಂತ್ರಿ ಮನಮೋಹನ ಸಿಂಗ್ ಕಳೆದ ಐದು ವರ್ಷಗಳಲ್ಲಿ ಎರಡನೇ ಬಾರಿ ಅಮೆರಿಕಾ ಭೇಟಿ ನೀಡಿ ಬಂದಿದ್ದಾರೆ. ಜುಲೈ 2005ರಲ್ಲಿ ಬುಶ್ ಅಧ್ಯಕ್ಷಗಿರಿ ನಡೆಯುತ್ತಿದ್ದಾಗ ನೀಡಿದ ಮೊದಲ ಭೇಟಿಯ ಪರಿಣಾಮವಾಗಿ ಭಾರತ-ಅಮೆರಿಕಾ ಸಾಮರಿಕ ಸಂಬಂಧ ಬೆಸೆಯಲಾರಂಭಿಸಿತು. ಸಹಜವಾಗಿಯೇ ಇದೊಂದು ಅಸಮಾನ ಸಂಬಂಧ. ಇದರ ಪರಿಣಾಮವಾಗಿ ಭಾರತವನ್ನು ಅಮೆರಿಕಾದ 'ಅಡಿಯಾಳು ಮಿತ್ರ'ನಾಗಿಸುವ ಪ್ರಕ್ರಿಯೆ ಆರಂಭವಾಯಿತು. ಈ ದೀನಭಾವ ಈ ಭೇಟಿಯ ನಂತರ ಇನ್ನಷ್ಟು ಆಳಗೊಂಡಿದೆ.

ಯುಪಿಎ ಮತ್ತೆ ಅಧಿಕಾರಕ್ಕೆ ಬಂದ ದಿನದಿಂದಲೇ ಈ ನಿಟ್ಟಿನಲ್ಲಿ ಕಾಂಗ್ರೆಸ್ ನೇತೃತ್ವದ ಈ ಸರಕಾರ ತನ್ನ ಪಯಣ ಮುಂದುವರೆಸಿತು. ಈ ಬಾರಿ ಎಡಪಕ್ಷಗಳ ಬೆಂಬಲದ 'ಹಂಗು' ಇಲ್ಲದಿರುವುದು ಭಾರತದ ಆಳುವ ವರ್ಗಗಳ ನಿರೀಕ್ಷೆಯನ್ನು ಮುಗಿಲು ಮುಟ್ಟಿಸಿತ್ತು. ಯುಪಿಎ-2 ಸರಕಾರವೂ ಅವರ ನಿರೀಕ್ಷೆಗಳನ್ನು ಈಡೇರಿಸಲು ಕಟಿಬದ್ಧವಾಗಿತ್ತು.

ಯುಪಿಎ-2 ಕಾರ್ಯತಂತ್ರ

ಆದರೂ ಹಿಂದಿನ ಅಧಿಕಾರಾವಧಿಯ ಅನುಭವವನ್ನು, ಎಡಪಕ್ಷಗಳ ಸಂಗ ಮತ್ತು ಅದರ ಪರಿಣಾಮವಾಗಿ ಬಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಶಾಸನ(ರೇಗಾ) ನೀಡಿದ ಚುನಾವಣಾ ಲಾಭವನ್ನು ಅದು ಮರೆಯುವಂತಿರಲಿಲ್ಲ. ಆದ್ದರಿಂದ ಒಂದೆಡೆ ಜನ-ವಿರೋಧಿಯಾಗಿರುವ ನವ-ಉದಾರವಾದಿ ನೀತಿಗಳನ್ನು ಪೂರ್ಣ ಪ್ರಮಾಣದಲ್ಲಿ ಈ ಬಾರಿ ಎಡಪಕ್ಷಗಳ ಯಾವುದೇ 'ಅಡಚಣೆ'ಯಿಲ್ಲದೆ ಅನುಸರಿಸುವುದು ಮತ್ತು ಇನ್ನೊಂದೆಡೆ ಈ ಧೋರಣೆಗಳ ಕರಾಳ ಪರಿಣಾಮಗಳನ್ನು ಮೆದುಗೊಳಿಸಲು ರೇಗಾದಂತಹ ಕೆಲವು ಪರಿಹಾರಗಳನ್ನು, ಸಾಮಾಜಿಕ ಕಲ್ಯಾಣ ಕ್ರಮಗಳನ್ನು ಕೈಗೊಳ್ಳುವ ಕಾರ್ಯತಂತ್ರವನ್ನು ಅದು ಅಂಗೀಕರಿಸಿತು.

ಯುಪಿಎ-2 ಸರಕಾರ ಪ್ರಕಟಿಸಿದ ಮೊದಲ ನೂರು ದಿನಗಳ ಕಾರ್ಯಕ್ರಮ ಈ ಕಾರ್ಯತಂತ್ರವನ್ನು ಬಿಚ್ಚಿಟ್ಟಿತು. ವಿವಿಧ ವಲಯಗಳಲ್ಲಿ ವಿದೇಶಿ ನೇರ ಹೂಡಿಕೆಯನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳಲಾಗುವುದು, ಲಾಭ ಗಳಿಸುತ್ತಿರುವ ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಮಾರಾಟ ನಡೆಸಲಾಗುವುದು ಎಂದು ಸಾರಲಾಯಿತು. ಆರ್ಥಿಕ ಸರ್ವೇಕ್ಷಣೆ ಎಲ್ಲಾ ರಂಗಗಳಲ್ಲಿ ನವ-ಉದಾರವಾದಿ ನೀತಿಗಳನ್ನು ದೊಡ್ಡ ಪ್ರಮಾಣದಲ್ಲಿ ಮುಂದೊತ್ತಬೇಕು ಎಂದು ಪ್ರತಿಪಾದಿಸಿತು. ದೇಶದೊಳಗೆ ವಿದೇಶಿ ಶಿಕ್ಷಣ ಸಂಸ್ಥೆಗಳಿಗೆ ಅವಕಾಶ ನೀಡುವ ಶಾಸನವನ್ನು



ತರುವುದಾಗಿಯೂ ಅದು ಭರವಸೆ ನೀಡಿತು. ಅದೇ ವೇಳೆಗೆ ಒಂದು ಆಹಾರ ಭದ್ರತಾ ಕಾನೂನು ತರಲಾಗುವುದು, ಶಿಕ್ಷಣದ ಹಕ್ಕು ಕಾನೂನನ್ನು ತರಲಾಗುವುದು ಎಂದೂ ಅದು ಪ್ರಕಟಿಸಿತು.

ಈ ರೀತಿ ತನ್ನ ಶ್ರೀಮಂತ-ಪರ ನೀತಿಗಳನ್ನು ಅಬಾಧಿತವಾಗಿ ಮುಂದುವರೆಸಿಕೊಂಡು ಹೋಗಬಹುದೆಂಬ ಲೆಕ್ಕಾಚಾರದಿಂದ ಮನಮೋಹನ ಸಿಂಗ್ ಸರಕಾರ ತನ್ನ ಎರಡನೇ ಆವೃತ್ತಿಯನ್ನು ಆರಂಭಿಸಿತು. ಕಳೆದ ಆರು ತಿಂಗಳಲ್ಲಿ ಈ ನಿಟ್ಟಿನಲ್ಲಿ ಅದು ಕೈಗೊಂಡಿರುವ ಕ್ರಮಗಳನ್ನು ದಾಖಲಿಸಲು ಈ ಪತ್ರಿಕೆ 'ಯುಪಿಎ-2 ದರ್ಬಾರಿನಲ್ಲಿ' ಅಂಕಣದಲ್ಲಿ ಪ್ರಯತ್ನಿಸಿರುವುದನ್ನು ನಮ್ಮ ಓದುಗರು ಗಮನಿಸಿರಬಹುದು. ಅವುಗಳಲ್ಲಿ ಕೆಲವನ್ನು ಇಲ್ಲಿ ನೆನಪಿಸಿಕೊಳ್ಳೋಣ:

ನವ-ಉದಾರವಾದಿ ಒತ್ತು:

ಕೇರಳ, ಕರ್ನಾಟಕ ಸೇರಿದಂತೆ ಕರಾವಳಿ ರಾಜ್ಯಗಳ ಮೀನುಗಾರರ ಮತ್ತು ಚಹಾ, ಮೆಣಸು, ತಾಳೆ ಮುಂತಾದ ಹಣದ ಬೆಳೆಗಳ ರೈತರ ಜೀವನಾಧಾರಕ್ಕೆ ಏಟು ನೀಡುವ ಆಗ್ನೇಯ ಏಶ್ಯಾ ದೇಶಗಳ ಸಂಘ(ಆಸಿಯಾನ್)ದ ಜತೆ ಸಮುದ್ರ ಆಹಾರ ಮತ್ತು ಮಸಾಲೆ ಸಾಮಗ್ರಿಗಳ ಆಮದು ಕುರಿತಂತೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಕೇಂದ್ರ ಸಂಪುಟ ಜುಲೈ 23ರಂದು ನಿರ್ಧರಿಸಿತು. ಸಂಪುಟದಲ್ಲಿಯೇ ಕೇರಳದ ಮತ್ತು ಕರ್ನಾಟಕದ ಮಂತ್ರಿಗಳು ಆತಂಕ ವ್ಯಕ್ತಪಡಿಸಿದರೂ ಪ್ರಧಾನಿಗಳ ಮಧ್ಯಪ್ರವೇಶದಿಂದ ಈ ನಿರ್ಧಾರ ವಾಗಿದೆಯಂತೆ. ಲೋಕಸಭೆಯಲ್ಲಿ ಇದನ್ನು ವಿರೋಧಿಸುವಲ್ಲಿ ಎಡಪಕ್ಷಗಳ ಸದಸ್ಯರೊಂದಿಗೆ ಕಾಂಗ್ರೆಸ್ ಸದಸ್ಯರೂ, ವಿಶೇಷವಾಗಿ ಕೇರಳದವರು ಸೇರಿಕೊಂಡರು.

ಜುಲೈ 31ರಂದು ಯುಪಿಎ ಸರಕಾರ ಎಲ್ಐಸಿ(ತಿದ್ದುಪಡಿ) ಮಸೂದೆ, 2009ನ್ನು ಲೋಕಸಭೆಯಲ್ಲಿ ಮಂಡಿಸಿತು. ಯುಪಿಎ-1 ಸರಕಾರ ಎಡಪಕ್ಷಗಳು ಪರಮಾಣು ವ್ಯವಹಾರದ ವಿಷಯದಲ್ಲಿ ಬೆಂಬಲ ಹಿಂತೆಗೆದುಕೊಂಡ ಸಂದರ್ಭದಲ್ಲಿ ಈ ಮಸೂದೆಯನ್ನು ಮಂಡಿಸಿತ್ತು. ಆ ಲೋಕಸಭೆಯ ಕಾಲಾವಧಿ ಮುಗಿಯುವುದರೊಂದಿಗೆ ಆ ಮಸೂದೆ ರದ್ದಾಗಿ ಹೋಗಿತ್ತು. ಯುಪಿಎ-2 ಹಣಕಾಸ ಬಂಡವಾಳಿಗರ ಒತ್ತಡಕ್ಕೆ ತಲೆಬಾಗಿ ಅದಕ್ಕೆ ಮರು ಜೀವ ಕೊಟ್ಟಿತು. ಇದು 26 ಕೋಟಿ ಪಾಲಿಸಿದಾರರನ್ನು ಹೊಂದಿರುವ ದೇಶದ ಬೃಹತ್ ಹಣಕಾಸು ಸಂಸ್ಥೆಯನ್ನು ಖಾಸಗಿಯವರ ಕೈಗಿಡುವತ್ತ ಮೊದಲ ಹೆಜ್ಜೆ.

ಇತ್ತೀಚೆಗೆ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಬಂಡವಾಳ ಸೇರಿಸುವುದಕ್ಕೆಂದು ವಿಶ್ವಬ್ಯಾಂಕಿನಿಂದ 200ಕೋಟಿ ಡಾಲರುಗಳ ಸಾಲ ಪಡೆಯಲಾಗಿದೆ. ಇದು ಈ ಬ್ಯಾಂಕುಗಳ ಶೇರುಗಳನ್ನು ಖಾಸಗಿಯವರಿಗೆ ಮಾರುವ ಹುನ್ನಾರದ ಕ್ರಮ.

ದೇಶದ ಸಾರ್ವಜನಿಕ ವಲಯದ 'ನವರತ್ನ'ಗಳಲ್ಲಿ ಒಂದಾದ ರಾಷ್ಟ್ರೀಯ ತಾಪ ವಿದ್ಯುತ್ ನಿಗಮ(ಎನ್‌ಟಿಪಿಸಿ)ದ 5ಶೇ. ಶೇರುಗಳನ್ನು ಮಾರಾಟ ಮಾಡಲು ಯುಪಿಎ ಸರಕಾರ ನಿರ್ಧರಿಸಿತು. ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿದ್ದ ಯುಪಿಎ-1 ಸರಕಾರ 'ನವರತ್ನ' ಕಂಪನಿಗಳ ಶೇರು ಮಾರಾಟ ಇಲ್ಲ ಎಂದು ಮಾತು ಕೊಟ್ಟಿ ಎಡಪಕ್ಷಗಳ ವಿರೋಧದಿಂದಾಗಿ ಶೇರು ಮಾರಾಟ ಪ್ರಕ್ರಿಯೆ ನಡೆಸಲು ಆಗ ಸಾಧ್ಯವಾಗಿರಲಿಲ್ಲ. ಈಗ "ಜನತೆಯ ಒಡೆತನ" ಎಂಬ ಹೆಸರಲ್ಲಿ ಬಹಳಷ್ಟು ಲಾಭಗಳಿಸುತ್ತಿರುವ ಈ "ನವರತ್ನ"ಗಳಲ್ಲೇ ಸ್ವಲ್ಪ-ಸ್ವಲ್ಪವಾಗಿ ಶೇರು ಮಾರಾಟ ನಡೆಸಿ, ಅವಕಾಶ ಸಿಕ್ಕಾಗ ಅವನ್ನು ಪೂರ್ಣವಾಗಿ ಖಾಸಗೀಕರಿಸುವ ತಂತ್ರವನ್ನು ಯುಪಿಎ-2 ಸರಕಾರ ಅನುಸರಿಸುವುದನ್ನು ಆರಂಭಿಸಿದೆ.

ಅಮೆರಿಕಾದ ಒತ್ತಡಗಳಿಗೆ ಮತ್ತೆ ಶರಣು:

ಆಗಸ್ಟ್ ತಿಂಗಳಲ್ಲಿ ಅಮೆರಿಕಾದ ವಿದೇಶಾಂಗ ಸಚಿವರ ಭೇಟಿಯ ಸಂದರ್ಭದಲ್ಲಿ ಸ್ವತಃ ನಮ್ಮ ದೇಶದ ಸಶಸ್ತ್ರ ಪಡೆಗಳೇ ಖಾಸಗಿಯಾಗಿ ಮತ್ತು ಬಹಿರಂಗವಾಗಿ ಸಂದೇಹ ವ್ಯಕ್ತ ಪಡಿಸಿದರೂ ಯುಪಿಎ-2 ಸರಕಾರ ಇಯುಎಂ ಅಂದರೆ ಅಮೆರಿಕಾದಿಂದ ಪಡೆದ ರಕ್ಷಣಾ ಉಪಕರಣಗಳನ್ನು ಅಂತಿಮವಾಗಿ ಹೇಗೆ ಬಳಸಲಾಗುತ್ತಿದೆ ಎಂಬುದನ್ನು ಪರೀಕ್ಷಿಸಲು ಅಮೆರಿಕಾಕ್ಕೆ ಅವಕಾಶ ಕೊಡು ಒಪ್ಪಂದಕ್ಕೆ ಸಹಿ ಹಾಕಿತು. ಬೇರೆ ಯಾವ ಪ್ರಮುಖ ವಿದೇಶೀ ಸರಕಾರವೂ ಇಂತಹ ಒಪ್ಪಂದ ಬೇಕೆಂದು ಕೇಳಿಲ್ಲ. ಆದರೆ ಭಾರತ ಸರಕಾರ ಈಗ ಒಪ್ಪಂದಕ್ಕೆ ಸಹಿ ಹಾಕಿರುವುದರಿಂದ ಇನ್ನು ಮುಂದೆ ಅವೂ ಕೇಳಬಹುದು.

ಅಲ್ಲದೆ ಅಮೆರಿಕಾದ ಪರಮಾಣು ಸ್ಥಾವರಗಳ ಸ್ಥಾಪನೆಗೆ ಎರಡು ಪರಮಾಣು ಪಾರ್ಕುಗಳನ್ನು ಗುರುತಿಸಬೇಕೆಂಬ ಅಮೆರಿಕಾದ ಆಗ್ರಹಕ್ಕೂ ಯುಪಿಎ ಸರಕಾರ ತಲೆಬಾಗಿತು. ಅಮೆರಿಕಾವೂ ಸೇರಿರುವ ಜಿ-8 ಗುಂಪು ಎನ್‌ಪಿಟಿಗೆ ಸಹಿ ಹಾಕದ ದೇಶಗಳಿಗೆ ಸಂಬಂಧಪಟ್ಟ ತಂತ್ರಜ್ಞಾನಗಳನ್ನು ಕೊಡಬಾರದು ಎಂಬ ನಿಯಮವನ್ನು ರೂಪಿಸಲು ಮುಂದಾಗಿದೆ. ಆದರೂ ಇದು ಭಾರತಕ್ಕೆ ಅನ್ವಯವಾಗುವುದಿಲ್ಲೆಂದು ನಂಬಿಸುವ ಪ್ರಯತ್ನವನ್ನು ಯುಪಿಎ ಸರಕಾರದ ಪ್ರಮುಖರು ಮಾಡುತ್ತಿದ್ದಾರೆ. ಅಮೆರಿಕಾದ ಮಿಲಿಟರಿ ವ್ಯವಸ್ಥೆ ಪೆಂಟಗನ್ ಅಮೆರಿಕಾದಲ್ಲಿ ನೀಡಿದ್ದ ಹೇಳಿಕೆ ಇದಕ್ಕೆ ವ್ಯತಿರಿಕ್ತವಾಗಿದೆ.

ಪುಟ 10ಕ್ಕೆ

'ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯಬೇಕಾಗಿದೆ'

11ನೇ ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಪಕ್ಷ ಮತ್ತು ಕಾರ್ಮಿಕ ಪಕ್ಷಗಳ ಸಭೆಯ ಸರ್ವಾನುಮತದ ನಿರ್ಣಯ

ಮನುಷ್ಯನಿಂದ ಮನುಷ್ಯನ ಮೇಲೆ ನಡೆಯುವ ಎಲ್ಲ ಬಗೆಯ ಶೋಷಣೆ, ಅನ್ಯಾಯವನ್ನು ನಿವಾರಿಸಿ, ಶೋಷಣಾಮುಕ್ತ ಸಮಾಜವೊಂದನ್ನು ನಿರ್ಮಿಸುವ ನಿಟ್ಟಿನಲ್ಲಿ ಹಾಗೂ ನಾಗರೀಕತೆಯ ವಿಕಾಸದಲ್ಲಿ ಒಂದು ಮಹಾನ್ ಮುನ್ನೆಗೆತ, ಒಂದು ದೊಡ್ಡ ಉನ್ನತಿಯಾಗಿದ್ದ ಸೋವಿಯತ್ ಒಕ್ಕೂಟದ ಸಮಾಜವಾದಿ ವ್ಯವಸ್ಥೆ 1990 ರ ದಶಕದ ಆರಂಭದಲ್ಲಿ ಕುಸಿದು ಬಿದ್ದಾಗ ಜಗತ್ತಿನಾದ್ಯಂತ ಬಂಡವಾಳಶಾಹಿಯ ವಕ್ತಾರರು ಡೋಲು ಬಾರಿಸಿಕೊಂಡು ಬಂಡವಾಳಶಾಹಿಯೇ ಮಾನವ ಸಮಾಜದ ಅಂತಿಮ ಘಟ್ಟ, ಸಮಾಜವಾದಕ್ಕೆ ಭವಿಷ್ಯವೇ ಇಲ್ಲ. ಇನ್ನು ಅಳಿದುಳಿದ ಕೆಲವು ರಾಷ್ಟ್ರಗಳಲ್ಲಿಯೂ ಸಮಾಜವಾದಿ ವ್ಯವಸ್ಥೆ ಕುಸಿದು ಕಮ್ಯೂನಿಸ್ಟ್ ಸಿದ್ಧಾಂತ ಸಮಾಧಿ ಸೇರಲಿದೆಯೆಂದು ಕೇಕೆ ಹಾಕಿದರು.

ಜಗತ್ತು ಅಂದಿನವರೆಗೂ ಕಂಡು ಕೇಳಿಲ್ಲದಿದ್ದ ಹೊಸ ದುರ್ಗಮ ಹಾದಿ ಸಮಾಜವಾದಿ ದೇಶಗಳದ್ದಾಗಿತ್ತು. ಸಹಜವಾಗಿಯೇ ಹಲವು ತಪ್ಪುಗಳಾದವು, ಮನುಕುಲದ ಮಹಾನ್ ಚಿಂತಕರಾದ ಮಾರ್ಕ್ಸ್, ಏಂಗೆಲ್ಸ್ ಹಾಗೂ ಲೆನಿನ್ ಅವರು ಭವಿಷ್ಯದ ನಡೆಗೆ ಹಾಕಿಕೊಟ್ಟ ಮಾರ್ಗದರ್ಶನದ ನಿರ್ಲಕ್ಷ್ಯವೂ ಆಯಿತು. ಕೊನೆಗೆ ಮಾರ್ಕ್ಸ್‌ವಾದ, ಲೆನಿನ್‌ವಾದಗಳನ್ನೇ ಕೈಬಿಟ್ಟ ತತ್ವಭ್ರಷ್ಟತೆಯ ಹಾದಿಗೆ ಹೊರಳಿದ ಮೇಲೆ ಸಮಾಜವಾದಿ ವ್ಯವಸ್ಥೆ ಉಳಿಯುವುದು ಸಾಧ್ಯವೇ ಇರಲಿಲ್ಲ.

ಪತ್ರಿಕೆ, ಟಿ.ವಿ. ಪಠ್ಯಪುಸ್ತಕ, ಅಂತರ್‌ಜಾಲ ಎಲ್ಲೆಲ್ಲೂ ವಿಷ ಪ್ರಚಾರದ ಅಬ್ಬರ.

ಸಮಾಜವಾದದ ಹಾದಿಯಲ್ಲಿ ಎದುರಾದ ಹಿತಡೆ-ಹಿನ್ನಡೆಗೆ ಮಾರ್ಕ್ಸ್‌ವಾದ, ಲೆನಿನ್‌ವಾದದ ವಿಜ್ಞಾನದ ಬೆಳಕಿನಲ್ಲೇ ಕಾರಣ ಹುಡುಕುವುದು ಸಾಧ್ಯವಿತ್ತು. ಆದರೆ ಕೆಲವು ದೇಶದಲ್ಲಿ ಕಮ್ಯೂನಿಸ್ಟ್ ಪಕ್ಷಗಳು ಮಾರ್ಕ್ಸ್‌ವಾದದ ವಿಜ್ಞಾನವನ್ನೇ ಕೈಬಿಟ್ಟರು. ಕೆಲವೆಡೆ ಕಮ್ಯೂನಿಸ್ಟ್ ಪಕ್ಷಗಳನ್ನೇ ವಿಸರ್ಜಿಸಲಾಯಿತು. ಕೆಂಬಾವುಟವನ್ನು ಕೆಳಗಿಳಿಸಲಾಯಿತು. ಕೆಲವೆಡೆ ಕಮ್ಯೂನಿಸ್ಟ್ ಪಕ್ಷಗಳು ಸೋಷಿಯಲ್ ಡೆಮಾಕ್ರಟಿಕ್ ಪಕ್ಷಗಳಾಗಿ ಬೋರ್ಡ್ ಬದಲಿಸಿಕೊಂಡವು.

ದಶಕಗಳ ಕಾಲ ಅತ್ಯುನ್ನತ ಗೌರವವನ್ನು ಪಡೆದ ಲೆನಿನ್‌ರ ಪ್ರತಿಮೆಗಳನ್ನು ಕೆಡವಿ ನೆಲಕ್ಕುರುಳಿಸುವ ಹೊತ್ತಿನಲ್ಲಿ ಸಮಾಜವಾದಕ್ಕೆ ಆದ ಹಿನ್ನಡೆಯ ವೈಜ್ಞಾನಿಕ ಕಾರಣಗಳೇನೆಂದು ಅದೇ ಮಾರ್ಕ್ಸ್‌ವಾದ, ಲೆನಿನ್‌ವಾದದ ಬೆಳಕಿನಲ್ಲಿ ಕಂಡುಕೊಳ್ಳುವ ಪ್ರಯತ್ನ ನಡೆದವು. ಅದು ಭಾರತದಲ್ಲೂ ನಡೆಯಿತು.

ಬಂಡವಾಳಶಾಹಿ ವ್ಯವಸ್ಥೆ ಅಂತಿಮ. ಅದೇ ಇತಿಹಾಸದ ಕೊನೆ ಎನ್ನುತ್ತಾ ಕೇಕೆ ಹಾಕಿ ಕುಣಿದವರು ಬಂಡವಾಳಶಾಹಿಯ ಪ್ರಸ್ತುತ ಗಂಭೀರ ಬಿಕ್ಕಟ್ಟು ಆರಂಭವಾದ ಮೇಲೆ ತೆಪ್ಪಗಾಗಿದ್ದಾರೆ. ಕೆಂಬಾವುಟದ ನೇತೃತ್ವದ ಹೋರಾಟ, ಸಂಘರ್ಷಗಳು ಜಗತ್ತಿನಾದ್ಯಂತ ಗರಿಗೆದರುತ್ತಿವೆ. ಇತ್ತೀಚೆಗೆ ಭಾರತದ ದೆಹಲಿಯಲ್ಲಿ 11ನೇ ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಪಕ್ಷ ಮತ್ತು ಕಾರ್ಮಿಕರ ಪಕ್ಷಗಳ ಸಭೆ ನಡೆಯಿತು. ಅದರ ಹಿನ್ನೆಲೆ ಚಿಂತನ, ಮಂಥನಗಳ ಸಾರ ಇಲ್ಲಿದೆ.



ಒಂದೆಡೆ ಕಲೆತು

ಜನವರಿ 1992 ರಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 14ನೇ ಮಹಾಧಿವೇಶನ ಈ ವಿಚಾರದ ಕುರಿತು ಆಳವಾದ ಚಿಂತನೆ ನಡೆಸಿತು. ಅಂತರರಾಷ್ಟ್ರೀಯವಾಗಿ ಕಮ್ಯೂನಿಸ್ಟ್ ಪಕ್ಷಗಳು ಮತ್ತು ಗುಂಪುಗಳು ಮತ್ತೆ ಒಗ್ಗೂಡುವುದು ಆ ಸನ್ನಿವೇಶದ ಒಂದು ಅಗತ್ಯವಾಗಿತ್ತು. ಸಿಪಿಐ(ಎಂ) ಪಕ್ಷ ಅಂತಹ ಒಂದು ಪ್ರಯತ್ನವನ್ನು ಆರಂಭಿಸಿತು. ಫಲವಾಗಿ 'ಮಾರ್ಕ್ಸ್‌ವಾದ, ಲೆನಿನ್‌ವಾದದ ಪ್ರಸ್ತುತತೆ' ಕುರಿತು ಕೊಲ್ಕೊತ್ತಾ ನಗರದಲ್ಲಿ ಅಂತರ ರಾಷ್ಟ್ರೀಯ ವಿಚಾರ ಸಂಕಿರಣ ಮೇ 1993ರಲ್ಲಿ ಜರುಗಿತು. ಜಗತ್ತಿನ 25 ಕಮ್ಯೂನಿಸ್ಟ್ ಪಕ್ಷಗಳು ಈ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡವು.

ಆ ನಂತರ ಸಹೋದರ ಕಮ್ಯೂನಿಸ್ಟ್ ಪಕ್ಷಗಳೊಂದಿಗೆ ಸರಣಿ ಚರ್ಚೆಗಳು ನಡೆದು ಕೆಲವು ನಿರ್ಧಿಷ್ಟ ವಿಷಯಗಳ ಕುರಿತು ಚಿಂತನೆ, ಚರ್ಚೆ ಕೈಗೊಳ್ಳಲು ಪ್ರತಿವರ್ಷವೂ ವಾರ್ಷಿಕ ಸಭೆ ನಡೆಸುವ ಬಗೆಗೆ ಒಂದು ಅಂತರರಾಷ್ಟ್ರೀಯ ಕ್ರಿಯಾ ಗುಂಪನ್ನು ರಚಿಸಲಾಯಿತು.

ಗ್ರೀಸ್ ಕಮ್ಯೂನಿಸ್ಟ್ ಪಕ್ಷ ಸತತ ಏಳು ವರ್ಷಗಳ ಕಾಲ ಅಥೆನ್ಸ್‌ನಲ್ಲಿ ಇಂತಹ ವಾರ್ಷಿಕ ಸಭೆಗಳನ್ನು ಸಂಘಟಿಸಿತು. ಆಮೇಲೆ ಪೋರ್ಚುಗಲ್, ಆಮೇಲೆ ರಷ್ಯಾ ದೇಶದ ಬೆಲಾರಸ್‌ನಲ್ಲಿ 10ನೇ ವಾರ್ಷಿಕ ಕೂಟ. ಬ್ರೆಜಿಲ್‌ನಲ್ಲಿ, ಹನ್ನೊಂದನೆಯ ಕೂಟ. ಇದೀಗ 12ನೆಯ ಕೂಟ ಭಾರತದ ರಾಜಧಾನಿ ನವದೆಹಲಿಯಲ್ಲಿ.

ದೆಹಲಿ ಕೂಟದ ವಿಷಯವಸ್ತು -ಹಿನ್ನೆಲೆ

ಪೂರ್ವ ಮತ್ತು ಪಶ್ಚಿಮ ಜರ್ಮನಿಗಳ ನಡುವೆ ಇದ್ದ 'ಬರ್ಲಿನ್' ಗೋಡೆ ಬಿದ್ದು 20 ವರ್ಷಗಳಾದ ಸಂದರ್ಭವನ್ನು ಬಳಸಿ ಕಮ್ಯೂನಿಸಂ ವಿರುದ್ಧ ಆಕ್ರಮಣಕಾರಿ ಉನ್ಮಾದವನ್ನು ಸೃಷ್ಟಿಸಲು ಪಶ್ಚಿಮಾತ್ಯ ದೇಶಗಳಲ್ಲಿ ಪ್ರಯತ್ನಿಸಲಾಯಿತು. ಜಾಗತಿಕ ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟನ್ನು ಹಾಗೂ ಅದು ಸೃಷ್ಟಿಸಿರುವ ಭೀಕರ ನಿರುದ್ಯೋಗ, ದಿವಾಳಿತನ ಇತ್ಯಾದಿ ಸಮಸ್ಯೆಗಳಿಂದ ಜನರ ಗಮನವನ್ನು ದೂರ ಸೆಳೆಯಲೂ ಈ ಸಂದರ್ಭವನ್ನು ಬಳಸಿಕೊಳ್ಳಲಾಯಿತು. ಕಮ್ಯೂನಿಸಂ ಹಾಗೂ ಮನುಷ್ಯ ವಿರೋಧಿ, ಜೀವ ವಿರೋಧಿ ಫ್ಯಾಸಿಸಂಗಳೆರಡೂ ಒಂದೇ ಎಂದೂ ಸಮೀಕರಿಸಲಾಯಿತು.

ಎರಡನೇ ವಿಶ್ವ ಮಹಾಯುದ್ಧದ ಕಾಲಘಟ್ಟದಲ್ಲಿ ಘೋರ ಮಿಲಿಟರಿ ಆಕ್ರಮಣಗಳ ಮೂಲಕ ಇಡೀ ಜಗತ್ತನ್ನು ತನ್ನ ದುಷ್ಟ ಸರ್ವಾಧಿಕಾರಿ ಹಿಡಿತದ ತೆಕ್ಕೆಗೆ ತೆಗೆದುಕೊಳ್ಳಲು ಹೊರಟಿದ್ದ ನಾಜಿ ಹಿಟ್ಲರ್ ಮತ್ತು ಫ್ಯಾಸಿಸ್ಟ್ ಶಕ್ತಿಗಳನ್ನು ಸದೆಬಡಿದು ಬರ್ಲಿನ್‌ನ ರೈಕ್‌ಸ್ಟಾಗ್(ಜರ್ಮನಿಯ ಸಂಸತ್ ಭವನ) ಮೇಲಿಂದ ಫ್ಯಾಸಿಸಂ ವಿರುದ್ಧ, ಹಿಟ್ಲರ್‌ನ ವಿರುದ್ಧ ವಿಜಯವನ್ನು ಘೋಷಿಸಿದ್ದು ಸಮಾಜವಾದಿ ಸೋವಿಯತ್ ಒಕ್ಕೂಟದ ಕೆಂಪು ಸೈನ್ಯ. ಅದು ಫ್ರಾನ್ಸ್‌ನ ಅಥವಾ ಬ್ರಿಟನ್ ಅಥವಾ ಅಮೇರಿಕಾ ಸೈನ್ಯ ಅಲ್ಲ ಎಂಬ ಐತಿಹಾಸಿಕ ಸತ್ಯವನ್ನೇ ಮುಸುಕು ಮಾಡುವ ಪ್ರಯತ್ನ ನಡೆಯಿತು. ಇಂತಹ ಸನ್ನಿವೇಶದಲ್ಲಿ ಕಮ್ಯೂನಿಸ್ಟ್ ವಿರೋಧಿ ವಿಷ ಪ್ರಚಾರಗಳಿಗೆ ತಕ್ಕ ಉತ್ತರ ನೀಡಿ ಬಂಡವಾಳಶಾಹಿ ವ್ಯವಸ್ಥೆಯ ನೈಜ ಮುಖವನ್ನು ಅನಾವರಣಗೊಳಿಸುವ ಉದ್ದೇಶದೊಂದಿಗೆ ನಡೆಯಿತು ಈ ಬಾರಿಯ ಕೂಟ.

ಬಿಕ್ಕಟ್ಟು, ಹೋರಾಟ ಪರ್ಯಾಯ

ಈ ಬಾರಿಯ ಕೂಟದ ನಿರ್ದಿಷ್ಟ ವಿಷಯ "ಅಂತರ ರಾಷ್ಟ್ರೀಯ ಬಂಡವಾಳಶಾಹಿ ಬಿಕ್ಕಟ್ಟು ಹಾಗೂ ಕಾರ್ಮಿಕರ, ಜನತೆಯ ಹೋರಾಟಗಳು, ಕಮ್ಯೂನಿಸ್ಟ್ ಮತ್ತು ಕಾರ್ಮಿಕ ವರ್ಗದ ಚಳುವಳಿಯ ಪರ್ಯಾಯಗಳು" ನವೆಂಬರ್ 20 ರಿಂದ 22, 2009 ರ ವರೆಗೆ ಕೂಟ. ಒಟ್ಟು 57 ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳು ಒಟ್ಟಾರೆ 48 ದೇಶಗಳನ್ನು ಪ್ರತಿನಿಧಿಸಿ ಈ ಸಭೆಯಲ್ಲಿ ಪಾಲ್ಗೊಂಡಿದ್ದವು. ಈ ಸಭೆಗೆ 87 ದೇಶಗಳ 111 ಪಕ್ಷಗಳನ್ನು ಆಹ್ವಾನಿಸಲಾಗಿತ್ತು. 1993 ರಲ್ಲಿ ಕೋಲ್ಕತ್ತಾದಲ್ಲಿ ನಡೆದ ಸಭೆ, ವಿಚಾರ ಸಂಕಿರಣದಲ್ಲಿ 25 ದೇಶಗಳನ್ನು ಪ್ರತಿನಿಧಿಸಿ ಪಾಲ್ಗೊಂಡಿದ್ದರು ಎಂಬುದನ್ನು ನೆನಪಿಸಿಕೊಳ್ಳಬಹುದು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಕಮ್ಯೂನಿಸ್ಟ್ ಪಕ್ಷಗಳು ಕಾರ್ಮಿಕ ಪಕ್ಷಗಳ ನಡುವೆ ರಾಜಕೀಯ ಸೈದ್ಧಾಂತಿಕ ಪ್ರಶ್ನೆಗಳ ಮೇಲೆ ಸಹಮತ ಮೂಡುತ್ತಾ ಈ ಗುಂಪಿನ ಐಕ್ಯತೆ ಬಲಗೊಳ್ಳುತ್ತಿದೆ. ಸೈದ್ಧಾಂತಿಕವಾಗಿ ಮಾತ್ರವಲ್ಲ ಸಂಘಟನಾತ್ಮಕವಾಗಿಯೂ ಈ ಶಕ್ತಿಗಳು ಬಲಗೊಳ್ಳುತ್ತಿವೆ.

● 11ನೇ ಅಂತರಾಷ್ಟ್ರೀಯ ಕೂಟವು ತನ್ನ 4 ದಿನಗಳ ಚರ್ಚೆಯ ಅಂತ್ಯದಲ್ಲಿ ಹಲವು ನಿರ್ಣಯಗಳನ್ನು ಕೈಗೊಂಡಿದೆ. ನಿರ್ಣಯಗಳ ಸಾರ ಈ ಕೆಳಗಿನಂತಿದೆ.

ಪ್ರಸಕ್ತ ಜಾಗತಿಕ, ಆರ್ಥಿಕ ಬಿಕ್ಕಟ್ಟು ಬಂಡವಾಳಶಾಹಿ ವ್ಯವಸ್ಥೆಯ ಚಾರಿತ್ರಿಕ ಮಿತಿಯನ್ನು ತೋರಿಸುತ್ತದೆ ಮತ್ತು ಈ ವ್ಯವಸ್ಥೆಯನ್ನು ಕಿತ್ತೊಗೆಯಬೇಕಾದ ಕ್ರಾಂತಿಕಾರಿ ಅಗತ್ಯದ ಕುರಿತು ಸಾರುತ್ತಿದೆ. ಈ ಬಿಕ್ಕಟ್ಟು ಬಂಡವಾಳಶಾಹಿಯೊಳಗಿನ ಆಂತರಿಕ ವೈರುಧ್ಯವನ್ನು ಎತ್ತಿ ತೋರಿಸುತ್ತಿದೆ. ಬಂಡವಾಳ ಮತ್ತು ಶ್ರಮದ ನಡುವಿನ ನಿವಾರಿಸಲಾಗದ ವೈರುಧ್ಯವೇ ಬಿಕ್ಕಟ್ಟಿನ ತಿರುಳಾಗಿದೆ. ವಿಶ್ವಬ್ಯಾಂಕ್, ಡಬ್ಲ್ಯು.ಟಿ.ಒ, ಐಎಂಎಫ್‌ಗಳ ಮೂಲಕ ಜಾರಿಗೊಳಿಸಲಾಗುತ್ತಿರುವ 'ಪರಿಹಾರಗಳು' ಬಂಡವಾಳಶಾಹಿ ಶೋಷಣೆಯನ್ನು ತೀವ್ರಗೊಳಿಸುತ್ತವೆ. ಮಾತ್ರವಲ್ಲ ಪರಸ್ಪರ ಸಾಮ್ರಾಜ್ಯಶಾಹಿಗಳ ನಡುವಿನ ತಿಕ್ಕಾಟವನ್ನು ಹರಿತಗೊಳಿಸುತ್ತದೆ. ಇಂತಹ ಸನ್ನಿವೇಶದಲ್ಲಿ ಆಳುವ ಸರ್ಕಾರಗಳು ಆಕ್ರಮಣಕಾರಿಗಳಾಗುತ್ತಿವೆ. ಕಾರ್ಮಿಕ ಸಂಘಟನೆ, ಜನರ ಪ್ರಜಾಪ್ರಭುತ್ವ ಹಕ್ಕುಗಳು,

ಪುಟ 12ಕ್ಕೆ



ಯುಪಿಎ II ಸರ್ಕಾರದ ಸಂಭ್ರಮ...

ಪುಟ 8 ರಿಂದ

ಶ್ರೀಮಂತ ದೇಶಗಳ ಹಠಮಾರಿತನದಿಂದಾಗಿ ನಿಂತು ಹೋಗಿದ್ದ ವಿಶ್ವ ವ್ಯಾಪಾರ ಸಂಘಟನೆಯ ದೋಹಾ ಸುತ್ತಿನ ಮಾತುಕತೆಗಳನ್ನು ಮನರಾರಂಭಿಸುವ ಪ್ರಯತ್ನವನ್ನು ನಡೆಸಲು ಭಾರತ ಮುಂದಾಯಿತು. ದೇಶದಲ್ಲಿ ಬರಗಾಲ ರೈತರನ್ನು ಹಣ್ಣುಗಾಯಿ ಮಾಡಿರುವಾಗ ಆ ಬಗ್ಗೆ ತುರ್ತು ಕ್ರಮಗಳನ್ನು ಕೈಗೊಳ್ಳದ ಸರಕಾರ ತರಾತುರಿಯಲ್ಲಿ ಈ ಸಭೆ ಏರ್ಪಡಿಸಿತು. ನಮ್ಮ ವಾಣಿಜ್ಯ ಮಂತ್ರಿಗಳು ಅಮೆರಿಕನ್ ವ್ಯಾಪಾರ ಪ್ರತಿನಿಧಿಯನ್ನು ಭೇಟಿಯಾದ ಫಲವಾಗಿ ಈ ಸಭೆ ಏರ್ಪಾಟಾಯಿತು. ತಮ್ಮ ರೈತರಿಗೆ ನೀಡುವ ಅಪಾರ ಸಬ್ಸಿಡಿಗಳನ್ನು ನಿಲ್ಲಿಸುವುದು ಇತ್ಯಾದಿ ವಿಚಾರಗಳ ಬಗ್ಗೆ ಶ್ರೀಮಂತ ದೇಶಗಳ ನಿಲುವು ಸ್ವಲ್ಪವೂ ಬದಲಾಗದಿರುವಾಗ ಸರಕಾರದ ಈ ಪ್ರಯತ್ನ ಅಮೆರಿಕಾದೊಡನೆ ಪರಮಾಣು ವ್ಯವಹಾರದ ಮತ್ತೊಂದು "ಫಲ" ಎಂಬುದು ಸ್ಪಷ್ಟ.

ಇಸ್ರೇಲಿಗೆ 4000ಕೋಟಿ ರೂ.ಗಳ ರಕ್ಷಣಾ ಕಂಟ್ರಾಕ್ಟ್ :

ಭಾರತದ ರಕ್ಷಣಾ ಸಚಿವಾಲಯ ಸೇನಾಪಡೆಗೆ "ನೆಲದಿಂದ ಆಕಾಶ ಕ್ಷಿಪಣಿ"ಗಳ ಪೂರೈಕೆಗಾಗಿ 4000 ಕೋಟಿ ರೂ.ಗಳ ಒಂದು ಕಾಂಟ್ರಾಕ್ಟನ್ನು ಇಸ್ರೇಲಿನ ಕಂಪನಿಗಳಿಗೆ ನೀಡಲು ನಿರ್ಧರಿಸಿತು. ಐಎಐ ಮತ್ತು ರೇಫೆಲ್ ಎಂಬ ಈ ಎರಡು ಕಂಪನಿಗಳನ್ನು 1160 ಕೋಟಿ ರೂ.ಗಳ ಬಾರಕ್-1 ಹಗರಣದಲ್ಲಿ ಸಿಬಿಐ ಹೆಸರಿಸಿತ್ತು. ಆದರೆ ರಕ್ಷಣಾ ಸಚಿವಾಲಯ ಇವನ್ನು ಕಪ್ಪು ಪಟ್ಟಿಗೆ ಸೇರಿಸಿದರೆ ಅವರೊಂದಿಗೆ ವ್ಯವಹಾರದಲ್ಲಿ ತೊಂದರೆಯಾಗುತ್ತದೆ ಎಂದು ಹಿಂದೇಟು ಹಾಕುತ್ತಿತ್ತು.

ಲಾಭದ ಮೇಲೆ ತೆರಿಗೆ ಕೇಳಿದ್ದಕ್ಕೆ ಪಾಶ್ಚಿಮಾತ್ಯ ರಾಯಭಾರಿಗಳ ಪ್ರತಿಭಟನೆ:

ಎರಡು ವರ್ಷಗಳ ಹಿಂದೆ ಭಾರತದ ಅತಿ ದೊಡ್ಡ ಎಫ್‌ಡಿಐ ವ್ಯವಹಾರ ಒಂದು ನಡೆಯಿತು. ವೊಡಫೋನ್ ಆಗ ಭಾರತದಲ್ಲಿ ಮೊಬೈಲ್ ಸೇವೆ ಒದಗಿಸುತ್ತಿದ್ದ ಹಚಿನ್‌ಸನ್(ಹಚ್) ಕಂಪನಿಯ ವ್ಯವಹಾರಗಳನ್ನು ವಹಿಸಿಕೊಂಡಿತು. ಭಾರತದ ತೆರಿಗೆ ನಿಯಮಗಳ ಪ್ರಕಾರ ಈ ವ್ಯವಹಾರದಲ್ಲಿ ಅದು ಗಳಿಸಿದ ಲಾಭದ ಮೇಲೆ 200ಕೋಟಿ ಡಾಲರು ತೆರಿಗೆ ಕಟ್ಟಬೇಕಾಗಿತ್ತು. ಆದರೆ ಈ ವ್ಯವಹಾರ ವಿದೇಶದಲ್ಲಿ ನಡೆದುದರಿಂದ ಹಾಗೂ ಹಚ್ ಆದಾಗಲೇ ನಮ್ಮ ದೇಶ ಬಿಟ್ಟು ಹೋಗಿದ್ದರಿಂದ ಈ ತೆರಿಗೆ ವಸೂಲಿಯ ಪ್ರಶ್ನೆಯಲ್ಲಿ ವೊಡಫೋನ್‌ನ್ನು ಭಾರತ ಸರಕಾರದ ತೆರಿಗೆ ಅಧಿಕಾರಿಗಳು ಕೇಳಿದರು. ಇದು ಮೊದಲು ಭಾರತ ಮತ್ತು ಬ್ರಿಟನ್ ನಡುವಿನ ವಿವಾದವಾಗಿ ಈಗ ಬ್ರಿಟನ್ ಅಲ್ಲದೆ ಇತರ ಆರು ಶ್ರೀಮಂತ ದೇಶಗಳಾದ ಅಮೆರಿಕಾ, ನೆದರ್ಲೆಂಡ್,ಸ್ಪೇನ್, ಆಸ್ಟ್ರೇಲಿಯ. ಸ್ವಿಟ್ಜರ್‌ಲೆಂಡ್ ರಾಯಭಾರಿಗಳು ಮತ್ತು ಯುರೋಪಿಯನ್ ಕಮಿಶನ್ ಮುಖ್ಯಸ್ಥರು ಹಣಕಾಸು ಮಂತ್ರಿಗಳಿಗೆ "ಪ್ರತಿಭಟನ್" ಸಲ್ಲಿಸಿದರು. ಹೀಗೆ ಮಾಡಿದರೆ(ಭಾರತದಲ್ಲಿ ಗಿಟ್ಟಿಸಿದ ಲಾಭಗಳ ಮೇಲೆ ತೆರಿಗೆ ಕೇಳಿದರೆ) ವಿದೇಶಿ ಹೂಡಿಕೆದಾರರ ವಿಶ್ವಾಸವನ್ನು ಕಳಕೊಳ್ಳಬೇಕಾಗುತ್ತದೆ ಎಂದು ಬೆದರಿಸಲಾಯಿತು.

ವಾತಾವರಣ ಬದಲಾವಣೆ ಮಾತುಕತೆಯಲ್ಲೂ ಅಮೆರಿಕ ಪರ ತಿಪ್ಪರಲಾಗದ ಪ್ರಯತ್ನ:

ವಾತಾವರಣವನ್ನು ವಿಷಾನಿಲಗಳಿಂದ ಕಲುಷಿತಗೊಳಿಸುವಲ್ಲಿ ಅಭಿವೃದ್ಧಿ ಹೊಂದಿದ ದೇಶಗಳದ್ದೇ ದೊಡ್ಡ ಪಾತ್ರವಾದ್ದರಿಂದ ಅದನ್ನು ತಡೆಯುವಲ್ಲಿ ಅವುಗಳೇ ಹೆಚ್ಚಿನ ಶರತ್ತುಗಳನ್ನು ಪಾಲಿಸಬೇಕು, ಅವುಗಳ ತಪ್ಪಿಗೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ದಂಡ ತೆರುವಂತಾಗಬಾರದು ಎಂಬುದು ಈಗ ನಡೆಯುತ್ತಿರುವ ವಾತಾವರಣ ಬದಲಾವಣೆ ಕುರಿತ ಮಾತುಕತೆಗಳಲ್ಲಿ ಭಾರತವೂ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಿಲುವು. ಆದರೆ ಭಾರತ ಈ ನಿಲುವನ್ನು ಬಿಟ್ಟು ಅಮೆರಿಕಾ ಮತ್ತಿತರ ಅಭಿವೃದ್ಧಿ ಹೊಂದಿರುವ ದೇಶಗಳ ನಿಲುವಿನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬ ಕೇಂದ್ರ ಪರಿಸರ ಮಂತ್ರಿಗಳ ಸೂಚನೆಗೆ ದೇಶಾದ್ಯಂತ ವಿರೋಧ ವ್ಯಕ್ತವಾಯಿತು. ಭಾರತದ ಪರ ಮಾತುಕತೆಗಳಲ್ಲಿ ಭಾಗವಹಿಸುವ ನಿಯೋಗದ ಸದಸ್ಯರೊಬ್ಬರು ರಾಜೀನಾಮೆ ನೀಡುವ ಬೆದರಿಕೆಯೂ ಬಂದ ಹಿನ್ನೆಲೆಯಲ್ಲಿ ಯುಪಿಎ ಸರಕಾರ ಇದು ಸೂಚನೆಯಷ್ಟೇ ಸರಕಾರದ ನಿಲುವು ಅಲ್ಲ ಎಂದು ಸ್ಪಷ್ಟಪಡಿಸಿದರೂ ಈ ಮಂತ್ರಿವರ್ಯರ ಇಂತಹ ವರ್ತನೆ ಮುಂದುವರೆದಿದೆ.

ಇದಲ್ಲದೆ ಇತ್ತೀಚೆಗೆ ಬಿಟಿ ಬದನೆಗೆ ಮಂಜೂರಾತಿ ಯುಪಿಎ-2 ಸರಕಾರ ಮೊನ್ಸಾಂಟೊದಂತಹ ದೈತ್ಯ ಕೃಷಿವ್ಯಾಪಾರ ಕಂಪನಿಗಳ ತಾಳಕ್ಕೆ ಕುಣಿಯಲು ನಿರ್ಧರಿಸಿದೆ ಎಂಬುದನ್ನು ತೋರಿಸುತ್ತದೆ. ಇತ್ತೀಚೆಗೆ ಪ್ರಕಟಿಸಿರುವ ತೆರಿಗೆ ನೀತಿಯ ಕರಡು ಶ್ರೀಮಂತರ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡುವ, ಈ ಮೂಲಕ ಸಾಮಾಜಿಕ ಕಲ್ಯಾಣ ಕ್ರಮಗಳಿಗೆ ಸಂಪನ್ಮೂಲಗಳನ್ನು ಕಡಿತ ಮಾಡುವ ಪ್ರವೃತ್ತಿಯನ್ನು ಬಿಂಬಿಸಿದೆ. ಉನ್ನತ ಶಿಕ್ಷಣದ ಖಾಸಗೀಕರಣಕ್ಕೆ, ವಿದೇಶಿ ನೇರ ಹೂಡಿಕೆಗೆ ಅವಕಾಶ ಕಲ್ಪಿಸಲು ಒಂದು ಕಾನೂನು ರೂಪಿಸುವುದಾಗಿ ಮತ್ತು ಒಂದು ಭಾರತ-ಅಮೆರಿಕಾ ಶಿಕ್ಷಣ ಮಂಡಳಿಯನ್ನು ರಚಿಸುವುದಾಗಿ ಯುಪಿಎ-2 ಸರಕಾರ ಹೇಳುತ್ತಿದೆ. ಅಮೆರಿಕಾದ ಶಸ್ತ್ರಾಸ್ತ್ರಗಳನ್ನು ಖರೀದಿಸಬೇಕೆಂಬ ಒತ್ತಡಕ್ಕೂ ಸರಕಾರ ತಲೆಬಾಗುತ್ತಿದೆ. 50000ಕೋಟಿ ರೂ.ಗಳನ್ನು ತೆತ್ತು 126 ಯುದ್ಧವಿಮಾನಗಳನ್ನು ಅಮೆರಿಕಾದ ಖಾಸಗೀ ಕಂಪನಿಗಳಿಂದ ಖರೀದಿಸಬೇಕಾಗಿದೆ.

ಯುಪಿಎ ಸರಕಾರ ಭಾರತ-ಅಮೆರಿಕಾ ಪರಮಾಣು ವ್ಯವಹಾರದ ಭಾಗವಾಗಿ ಒಂದು ನಾಗರಿಕ ಪರಮಾಣು ಹೊಣೆಗಾರಿಕೆ ಮಸೂದೆಯನ್ನು ತರಲಿದೆಯಂತೆ. ಇದರ ಪ್ರಕಾರ ಯಾವುದೇ ಪರಮಾಣು ಅಪಘಾತ ಸಂಭವಿಸಿದಲ್ಲಿ ಪರಿಹಾರ ಮೊತ್ತ 45ಕೋಟಿ ಡಾಲರುಗಳನ್ನು (ಸುಮಾರು 200ಕೋಟಿ ರೂ.) ಮೀರಬಾರದು. ಪರಮಾಣು ಅಪಘಾತಗಳ ಬೃಹತ್ ಸ್ವರೂಪಕ್ಕೆ ಹೋಲಿಸಿದರೆ ಈ ಪರಿಹಾರ ತೀರಾ ಅಲ್ಪ. ಇಷ್ಟೇ ಅಲ್ಲ, ಈ ಪರಿಹಾರವನ್ನು ಕೊಡಬೇಕಾದವರು ಪರಮಾಣು ಸ್ಥಾವರವನ್ನು ಹಾಕಿ ಕೋಟಿಗಟ್ಟಲೆ ಲಾಭ ಮಾಡಿಕೊಳ್ಳುವ ಅಮೆರಿಕನ್ ಕಂಪನಿಗಳಲ್ಲ, ಬದಲಾಗಿ ಭಾರತದ ಪರಮಾಣು ವಿದ್ಯುತ್ ನಿಗಮ!

ಭಾರತಕ್ಕೆ ದಕ್ಕಿದ್ದು ಏನೂ ಇಲ್ಲ

ಪ್ರಧಾನ ಮಂತ್ರಿಗಳ ನಾಲ್ಕು ದಿನಗಳ ವಾಷಿಂಗ್ಟನ್ ಭೇಟಿ, ಅಲ್ಲಿ ನಡೆದ ಮಾತುಕತೆಗಳು ಮತ್ತು ಪ್ರಧಾನ ಮಂತ್ರಿಗಳ ಭಾಷಣಗಳು ಕೂಡಾ ಯುಪಿಎ ಸರಕಾರ ಈ ಶರಣಾಗತಿಯನ್ನು ಇನ್ನಷ್ಟು ವ್ಯಾಪಕಗೊಳಿಸಲು ಸಿದ್ಧವಾಗಿರುವ ಸಂಕೇತ ಕೊಟ್ಟಿವೆ. ದೇಶೀ ಖಾಸಗಿ ರಕ್ಷಣಾ ಸಾಮಗ್ರಿ ಪೂರೈಕೆದಾರರಿಗೆ 26ಶೇ. ದಷ್ಟು ವಿದೇಶಿ ಹೂಡಿಕೆ ಹೊಂದಲು ಅವಕಾಶ ನೀಡಿದ್ದೇವೆ, ಇದರಿಂದ ನಿಮಗೆ ಬಹಳ ಪ್ರಯೋಜನವಾಗಲಿದೆ ಎಂದು ಭಾರತದ ಶಸ್ತ್ರಾಸ್ತ್ರ ಮಾರುಕಟ್ಟೆಯನ್ನೆಲ್ಲಾ ಬಾಚಿಕೊಳ್ಳುವ ಆತುರದಲ್ಲಿರುವ ಅಮೆರಿಕನ್ನರನ್ನು ಪ್ರಧಾನ ಮಂತ್ರಿಗಳು ಸಂತುಷ್ಟಗೊಳಿಸಲು ಪ್ರಯತ್ನಿಸಿದರು; ಅದೇ ರೀತಿ ಭಾರತದಲ್ಲಿ 'ಆರ್ಥಿಕ ಸುಧಾರಣೆ'ಗಳ ಬಗ್ಗೆ ನಿಮಗೆ ಸಂದೇಹವೇ ಬೇಡ ಎಂದು ಅಮೆರಿಕಾದ ದೊಡ್ಡ-ದೊಡ್ಡ ಬಂಡವಾಳಗಾರರಿಗೂ ಭರವಸೆ ಕೊಟ್ಟರು; ಬನ್ನಿ, ನಮ್ಮ ಕೃಷಿ ವ್ಯಾಪಾರದಲ್ಲಿ, ಕೃಷಿ ಮಾರುಕಟ್ಟೆಯಲ್ಲಿ, ಚಿಲ್ಲರೆ ಮಾರಾಟ ವಲಯದಲ್ಲಿ ಮತ್ತು ಗಣಿವಲಯದಲ್ಲೂ ವಿದೇಶಿ ಹಣಹೂಡಿಕೆ ಮಾಡಿ ಎಂದು ಮುಕ್ತವಾಗಿ ಆಹ್ವಾನಿಸಿದರು.

> **"ನಾವೀಗ ಭಾರತದಲ್ಲಿ ದೈನ್ಯತೆಯೇ ಒಂದು ಸದ್ಗುಣ ಎಂದು ಭಾವಿಸಿರುವ, ಅಡಿಯಾಳು ಮಿತ್ರನಾಗಿರುವುದಕ್ಕೇ ಸಂಭ್ರಮಿಸುತ್ತಿರುವ ಒಂದು ಸರಕಾರವನ್ನು ಪಡೆದಿರುವುದು ನಿಜವಾಗಿಯೂ ಒಂದು ಕೆಟ್ಟ ದಿನ"**
>
> **- ಪ್ರಕಾಶ್ ಕಾರಟ್**

ಇವೆಲ್ಲದಕ್ಕೂ ಪ್ರತಿಯಾಗಿ ಭಾರತ ಈ ಭೇಟಿಯಿಂದ ಪಡೆದದ್ದು ಏನೂ ಇಲ್ಲ. ಎಷ್ಟೇ ಪ್ರಯತ್ನಿಸಿದರೂ ಪರಮಾಣು ಇಂಧನ ಮರುಸಂಸ್ಕರಣೆ ಹಕ್ಕು ಕುರಿತಂತೆ ಒಪ್ಪಂದವನ್ನು ರೂಪಿಸಲು ಆಗಲೇ ಇಲ್ಲ. ಭಾರತದ ಅಣುಸ್ಥಾವರಗಳ ಒಳಹೊಕ್ಕು ತಪಾಸಣೆ ಮಾಡುವ ಹಕ್ಕು ಪಡೆಯದೆ ಅಮೆರಿಕ ಈ ಒಪ್ಪಂದಕ್ಕೆ ಬರಲಿಕ್ಕೂ ಇಲ್ಲ. ಪಾಕಿಸ್ತಾನಕ್ಕೆ ಅಮೆರಿಕಾ ಇನ್ನು ಮುಂದೆ ಹೆಚ್ಚು ಮಹತ್ವ ಕೊಡಲಿಕ್ಕಿಲ್ಲ ಎಂಬ ಭಾರತದ ಆಳುವ ವ್ಯವಸ್ಥೆಯಲ್ಲಿರುವ ಅಮೆರಿಕಾ ಪರಿಚಾರಕರ ನಿರೀಕ್ಷೆಯೂ ಈಡೇರುತ್ತಿಲ್ಲ. ಅಮೆರಿಕಾದ "ಭಯೋತ್ಪಾದನಾ-ವಿರೋಧಿ ಸಮರ"ದಲ್ಲಿ ಪಾಕಿಸ್ತಾನದ ಸ್ಥಾನಕ್ಕೆ ಸ್ವಲ್ಪವೂ ಚ್ಯುತಿ ಬಂದಿಲ್ಲ.

ದೈನ್ಯತೆಯನ್ನು ಹೆಚ್ಚಿಸಿದ ಭೇಟಿ

ಒಟ್ಟಿನಲ್ಲಿ ಭಾರತ- ಅಮೆರಿಕಾ ಸಾಮರಿಕ ಮೈತ್ರಿಯ ನಿಜಸ್ವರೂಪವನ್ನು ಈ ಭೇಟಿ ತೋರಿದೆ. ಭಾರತವನ್ನು ತನ್ನ ಮಿಲಿಟರಿ ವ್ಯೂಹದ ಸೆಳೆದುಕೊಂಡಿರುವ ಅಮೆರಿಕಾ ತನ್ನ ಶಸ್ತ್ರ ಕಂಪನಿಗಳಿಗೆ ಅಪಾರ ಲಾಭ ಗಿಟ್ಟಿಸಿಕೊಂಡಿ ಭಾರತದ ಅರ್ಥಿಕದ ವಿವಿಧ ವಲಯಗಳ ಅಮೆರಿಕಾದ ಬಂಡವಾಳಕ್ಕೆ ಬಲವಂತವಾ ತೆರೆಸಿಕೊಂಡಿದೆ; ಈಗ ಉನ್ನತ ಶಿಕ್ಷಣ, ಚಿ ವ್ಯಾಪಾರ ಮತ್ತು ಇತರ ಸೇವಾವಲಯಗಳಲ್ಲಿ ವಿದೇ ನೇರ ಹೂಡಿಕೆಗಳಿಗೆ ದೊಡ್ಡ ಅವಕಾಶ ನಿರೀಕ್ಷೆಯಲ್ಲಿದೆ. ಅಲ್ಲದೆ ವಿದೇಶಾಂಗ ವಲಯದ ಭಾರತ ಅಮೆರಿಕಾಕ್ಕೆ ಬೇಕಾದ ನಿಲುವುಗಳ ಹೊಂದುವಂತೆ ಮಾಡಲಾಗಿದೆ.

ಪ್ರಧಾನಿಗಳು ಈ ಭೇಟಿ ಮುಗಿ ಮರಳುತ್ತಿದ್ದಂತೆಯೇ ಇದರ 'ಫಲ' ಕಣ್ಣಿಗೆ ರಾಚಿತ ಅಂತರ್ರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯಲ್ಲಿ ಭಾರ ಇರಾನಿಗೆ ಛೀಮಾರಿ ಹಾಕುವ ಪಾಶ್ಚಿಮಾತ್ಯ ದೇಶ ನಿರ್ಣಯದ ಪರ ಮತ ನೀಡಿತು. ಅಲಿಪ್ತ ರಾಷ್ಟ್ರ ಇರಾನಿನ ಬೆಂಬಲಕ್ಕೆ ನಿಂತವು. ಇಜಿಪ್ಟ್, ಕ ದಕ್ಷಿಣ ಆಫ್ರಿಕ, ಬ್ರೆಝಿಲ್ ಮತ್ತು ಮಲೇಸ ನಿರ್ಣಯದ ವಿರುದ್ಧ ಮತ ನೀಡಿದವು ಅಥವಾ ಗೈ ಹಾಜರಾದವು. ಪಾಕಿಸ್ತಾನ ಮತ್ತ ಅಫಘಾನಿಸ್ತಾನ ಕೂಡ ಗೈರು ಹಾಜರಾದ ಆದರೆ ಭಾರತ ಹೇಗೆ ತಾನೇ ತನ್ನ ಹಿರಿ ಮಿತ್ರನ ವಿರೋಧ ಕಟ್ಟಿಕೊಳ್ಳಲು ಸಾಧ ಅದು ಕೂಡಾ ಪರಮಾಣು ಇಂಧ ಮರುಸಂಸ್ಕರಣೆಯ ಹಕ್ಕನ್ನು ಕುರಿತ ಒಪ್ಪಂ ಇನ್ನೂ ಅಂತಿಮಗೊಂಡಿರದಿರುವಾಗ?

ಇದಕ್ಕೆ ಮೊದಲು ಅಮೆರಿಕಾದ ಅಧ್ಯಕ್ಷ ಸಮ್ಮುಖದಲ್ಲಿ ನಮ್ಮ ಪ್ರಧಾನಿಗಳು ಇರಾ ಪರಮಾಣು ಶಸ್ತ್ರಾಸ್ತ್ರ ಹೊಂದಬಾರದು ಎಂ ತಾಕೀತು ಮಾಡಿದರು. ಆದರೆ ಅದೇ ಪಶ್ಚಿ ಏಶ್ಯಾದಲ್ಲಿ ಇಸ್ರೇಲ್ ಪರಮಾಣು ಶಸ್ತ್ರ ಹೊಂದಿರುವುದರ ಬಗ್ಗೆ ತುಟಿ ಪಿಟಕ್ಕೆನ್ನಲಿಲ್ಲ

ಪ್ರಧಾನಿಗಳ 2005ರ ಅಮೆರಿಕಾ ಭೇಟಿ ನಂತರವೂ ಕೆಲವೇ ವಾರಗಳಲ್ಲಿ ಭಾರತ ಇ ವಿರುದ್ಧ ಮೊದಲ ಬಾರಿ ಮತ ನೀಡಿತ್ತು. - ಬಾರಿಯ ಭೇಟಿಯ ನಂತರವೂ ಹಾಗೆಯೆ ಆಗಿದೆ-ಎರಡನೇ ಬಾರಿ. ಒಂದೇ ವ್ಯತ್ಯಾಸವೆಂದ ಆಗ ಯುಪಿಎ ಎಡಪಕ್ಷಗಳ 'ಹಂಗಿ'ನಲ್ಲಿತ್ತು, ಈ ಆ 'ಹಂಗು' ಇಲ್ಲವಾದ್ದರಿಂದ ಅಮೆರಿಕಾದ ಹಂಗ ಆಳಗೊಳಿಸುವಲ್ಲಿ ಯಾವ 'ಭಯ'ವೂ ಇಲ್ಲ!

"ನಾವೀಗ ಭಾರತದಲ್ಲಿ ದೈನ್ಯತೆಯೇ ಒಂ ಸದ್ಗುಣ ಎಂದು ಭಾವಿಸಿರುವ, ಅಡಿಯಾ ಮಿತ್ರನಾಗಿರುವುದಕ್ಕೇ ಸಂಭ್ರಮಿಸುತ್ತಿರುವ ಒಂ ಸರಕಾರವನ್ನು ಪಡೆದಿರುವುದು ನಿಜವಾಗಿಯ ಒಂದು ಕೆಟ್ಟ ದಿನ" ಎಂದು ಈ ಬಗ್ಗೆ ಸಿಪಿಐ(ಎ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್‌ರವ ಟೀಕೆಯನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ.

(ಪ್ರಕಾಶ್ ಕಾರಟ್‌ಅವರ ಲೇ ಹಾಗೂ ಸಿಪಿಐ(ಎಂ) ಕೇಂದ್ರ ಸಮಿತಿಯ ರಾಜಕೀಯ ನಿರ್ಣಯ ಆಧರಿ

ಮೊನ್ನೆ ಮೊನ್ನೆ ಟಿ.ವಿ.9 - ದೂರದರ್ಶನ ವಾಹಿನಿಯಲ್ಲಿ ಮಹಿಳಾ ಮೀಸಲಾತಿ ಕುರಿತ ಚರ್ಚೆ ನಡೆಯಿತು. ಮನುವಿನ ಅಪರಾವತಾರ ಎನ್ನುವಂತೆ ಸ್ತ್ರೀ ವಿರೋಧಿ, ಪ್ರಗತಿ ವಿರೋಧಿ ವಿಚಾರ ಮಂಡಿಸಿದ್ದು ಒಬ್ಬ ಎಂಬಿಬಿಎಸ್ ವೈದ್ಯ!! ಆತ ಮಾಡಿದ ವಾದವೇನು? ಯಾಕೆ ? ಏನು ಆತನ ಹಿನ್ನೆಲೆ? ಓದಿ....

ಮಹಿಳಾ ಮೀಸಲಾತಿಗೆ 'ಮನು' ಒಡ್ಡಿದ ವಿಘ್ನ

— ಕೆ.ಎಸ್.ವಿಮಲ —

ಸ್ಥಳೀಯ ಸಂಸ್ಥೆಗಳಲ್ಲಿ ಶೇ.50 ಮೀಸಲಾತಿ ಎಂದರೂ ಕಿರಿ ಕಿರಿ ಎನ್ನದ ಧ್ವನಿಗಳು ಮೇಲಿನ ಹಂತದಲ್ಲಿ ಶೇ.33 ಕೊಡಲೂ ಸಿದ್ಧರಿಲ್ಲ. ಇದು ಈ ದೇಶದಲ್ಲಿ ಕಳೆದ 13 ವರ್ಷಗಳಿಂದ ನಡೆಯುತ್ತಿರುವ ಕಥೆ.

ರಾಮಾಯಣದಲ್ಲಿ 14 ವರ್ಷಗಳ ವನವಾಸ ಮುಗಿಸಿದ ನಂತರ ರಾಮನಿಗೆ ಪಟ್ಟಾಭಿಷೇಕವಾಗುವುದೆಂದು ಕಥೆ ಹೇಳಿದ್ದೇವೆ. ಆದರೆ ಮಹಿಳಾ ಮೀಸಲಾತಿ ಮಸೂದೆ ಮಾತ್ರ ವನವಾಸದಿಂದ ಹೊರಬರುವ ಲಕ್ಷಣಗಳು ಕಾಣುತ್ತಿಲ್ಲ.

ಈ ಮಸೂದೆ ಬೆಳಕೆ ಕಾಣದಂತೆ ಮಾಡುವುದರಲ್ಲಿ ತನ್ನ ಸಿದ್ಧಾಂತಕ್ಕೆ ಅನುಗುಣವಾಗಿ ಪರಿವಾರ ಪ್ರಾರಂಭದಲ್ಲಿಯೇ ಪ್ರಹಾರ ನಡೆಸಿತು.

ಮಾಯಾ ಜಿಂಕೆಯ ವೇಷದ ಮಾರೀಚನಂತೆ ಕಾವಿ ವೇಷಧಾರಿ "ಸಾಧ್ವಿ" ಉಮಾಭಾರತಿ "ಪಾರಮಾರ್ಥ"ಕ್ಕೆ ಬದಲು ಪ್ರಲೋಭನೆಗೆ ಒಲವು ತೋರಿದವರು, ಮಹಿಳಾ ಮೀಸಲಾತಿಯ ಮಸೂದೆಗೆ ಪ್ರಥಮ ಅಡ್ಡಿಯಾಗಿ ಬಂದ ಬಂಡೆಗಲ್ಲು. ಸಿಕ್ಕ ಅವಕಾಶವನ್ನು ಬಹಳ ಸಮರ್ಥವಾಗಿ ಬಳಸಿಕೊಂಡ ಯಾದವ ದ್ವಯರದ್ದು, ಮುಲಾಯಂ ಸಿಂಗ್‌ರಂತವರು ನಂತರದ ಪ್ರತಿ ಸಂದರ್ಭದಲ್ಲಿಯೂ ಅದು ಮಂಡನೆಯೇ ಆಗದಂತೆ ತಡೆದರು. " ಬೀಸುವ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯಸ್ಸು" ಎನ್ನುವಂತೆ ಪ್ರತಿಯೊಂದು ಸಾರಿ ಮಸೂದೆಗೆ ಅಡ್ಡಿ ಬಂದಾಗಲೂ ಆಡಳಿತಾರೂಢ ಎನ್.ಡಿ.ಎ, ಯುಪಿಎ ಇತ್ಯಾದಿಗಳು ಬದುಕಿದೆ....... ಬಡಜೀವವೇ ಎಂದುಕೊಳ್ಳುತ್ತಿದ್ದವು. ಕಾರಣವೇನೆಂದರೆ ಕಾಂಗ್ರೆಸ್‌ಗಾಗಲಿ, ಬಿ.ಜೆ.ಪಿ.ಗಾಗಲಿ ಈ ಮಸೂದೆಯನ್ನು ಜಾರಿಗೆ ತರಬೇಕೆಂಬ ರಾಜಕೀಯ ಇಚ್ಛಾಶಕ್ತಿ ಖಂಡಿತ ಇಲ್ಲ. ದೇಶದ ಕಾರ್ಮಿಕ ವರ್ಗದ ಸಖತ್ ವಿರೋಧದ ನಡುವೆಯೂ ಉದಾರೀಕರಣದ ನೀತಿ, ಸಾರ್ವಜನಿಕ ಉದ್ದಿಮೆಗಳ ಹರಾಜು ಕೆಲಸಕ್ಕೆ ನಿರ್ವಿಕಾರದಿಂದ ಮುನ್ನಡೆಯುತ್ತಿರುವ ಕಾಂಗ್ರೆಸ್‌ಗಾಗಲಿ, ದೇಶದ ಜಾತ್ಯಾತೀತ ಸಂವಿಧಾನಕ್ಕೇ ಮಸಿ ಬಳಿಯುವಂತೆ ಬಾಬರಿ ಮಸೀದಿ ಉರುಳಿಸುವಲ್ಲಿ ದೃಢತೆ ತೋರಿದ ಬಿ.ಜೆ.ಪಿ.ಗಾಗಲಿ ಅದೇ ರೀತಿಯ ಬದ್ಧತೆ ಮಹಿಳಾ ಮೀಸಲಾತಿ ಮಸೂದೆ ಜಾರಿಯ ಕುರಿತು ಇಲ್ಲ.

ರಾಜಕೀಯ ನೆಲೆಯಲ್ಲಿ ಈ ರೀತಿಯ ಪುರುಷ ಪ್ರಧಾನ ಮನಃಸ್ಥಿತಿಯ ವಿರುದ್ಧ ನಮ್ಮ ಹೋರಾಟವೂ ನಿರಂತರ ನಡೆಯುತ್ತಿದೆ. ಆದರೆ ಸಂಘ ಪರಿವಾರದ ಛದ್ಮ ವೇಷಧಾರಿಗಳು ಯಾವುದೋ ಮೂಲೆಗಳಿಂದ ಹೇಗೆಲ್ಲ ಎದ್ದು ಬರುತ್ತಾರೆ ಮತ್ತು ಮಹಿಳಾ ಸಮಾನತೆಯ ಮೂಲ ಕಲ್ಪನೆಗೇ ಕೊಡಲಿ ಪೆಟ್ಟು ಹಾಕುವ ನಿರಂತರ ಪ್ರಯತ್ನ ನಡೆಯುತ್ತಲೇ ಇರುತ್ತದೆ ಎಂಬುದಕ್ಕೆ ಒಂದು ಜೀವಂತ ನಿದರ್ಶನಕ್ಕೆ ನಾನೇ ಮುಖಾಮುಖಿಯಾದಾಗಿನ ಸಂದರ್ಭ ಇಲ್ಲಿದೆ.

ಸಂದರ್ಭ :



ಚಾಮರಾಜನಗರದಲ್ಲಿ ಮಹಿಳಾ ಮೀಸಲಾತಿ ವಿರೋಧಿಸಿ ಪುರುಷರ ಹಕ್ಕುಗಳ ರಕ್ಷಣಾ ಸಂಘದಿಂದ ಪ್ರತಿಭಟನೆ. ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗದಂತೆ ದಯಾಮಯನಾದ ಭಗವಂತನ ಸಹಮತ ಬೆಂಬಲ ಕೋರಿ ಯಜ್ಞ ಯಾಗಾದಿಗಳು ಇದುವರೆಗೆ ವಿಶ್ವಶಾಂತಿಗಾಗಿ, ಮುಖ್ಯಮಂತ್ರಿಗಿರಿಗಾಗಿ, ಹೆಚ್1 ಎನ್1 ಜ್ವರ ಪರಿಹಾರಾರ್ಥ ಇತ್ಯಾದಿಗಾಗಿ ಯಜ್ಞ ಮಾಡುವುದು ಕೇಳಿಯಾಗಿತ್ತು. ಪಾಪ, ಹವಿಸ್ಸು ಸ್ವೀಕರಿಸುವ ದೇವತೆಗಳ ಪಾಡು ಯಾರಿಗೆ ಹೇಳಬೇಕು? ಕೊನೆಗೂ ಮಹಿಳಾ ಮೀಸಲಾತಿ ವಿರೋಧಿ ಯಜ್ಞವೂ ನಡೆದುಹೋಯಿತು.

ಪಾಪ ಪರದೇಶಿಗಳಾರೋ ಯಜ್ಞ ಮಾಡಿದ್ದರೆ ಅದಾದರೂ ಒಂದು ಲೆಕ್ಕ. ಆದರೆ ಯಜ್ಞ ಮಾಡಿಸಿದ ವ್ಯಕ್ತಿ ವೃತ್ತಿಯಲ್ಲಿ ವೈದ್ಯ ಎಂ.ಬಿ.ಬಿ.ಎಸ್ ಅಂತೆ! ಜೋಕಾಗಿ ಹೇಳುವುದಾದರೆ ನಮ್ಮ ಕಾಲೇಜ್ ದಿನಗಳಲ್ಲಿ ಅರ್ಧ ಓದು ಮುಗಿಸಿ, ಕೆಲಸವಿಲ್ಲದೇ ಅಲೆಯುವವರನ್ನು ಎಂ.ಬಿ.ಬಿ.ಎಸ್. ಎನ್ನುತ್ತಿದ್ದೆವು. ಹಾಗೆಂದರೆ 'ಮನೆ ಬಿಟ್ಟು ಬೀದಿ ಸುತ್ತು' ಅಂತ. ಅಂತಹುದೇ ಎಂ.ಬಿ.ಬಿ.ಎಸ್. ಇರಬಹುದೇ ಎಂಬ ಆನುಮಾನ ಈ ವ್ಯಕ್ತಿಯ ಬಗ್ಗೆ ಯಾರಿಗಾದರೂ ಬರುವುದೇ ಸರಿ.

ಆದರೆ ಈ ವ್ಯಕ್ತಿಯ ಚಹರೆ ಪಟ್ಟಿ ಹೇಳುವಾಗ ಹೆಸರೇ ಹೇಳಲಿಲ್ಲ. ಹೆಸರು ಕೇಳಿ ಏನಾಗಬೇಕಿದೆ. ಕೇಸರಿ, ಹಳದಿ ಯಾವುದೋ ಒಂದು.

ಈ ವ್ಯಕ್ತಿ ಟಿ.ವಿ.ಚಾನಲ್‌ನಲ್ಲಿ ನನ್ನ ಕೈಗೆ ಸ್ಸಾರಿ ಬಾಯಿಗೆ ಸಿಕ್ಕಿಕೊಂಡ. ಅಯ್ಯಯ್ಯೋ ತಿನ್ನಲಿಕ್ಕಲ್ಲ. ಮಾತಿಗೆ ತಪ್ಪು ತಿಳಿಯಬೇಡಿ ಮತ್ತೆ. ಆ ವ್ಯಕ್ತಿಯ ಹೇಳಿಕೆಗಳು ಮಹಿಳೆಯರು ಮನೆ ನೋಡಿಕೊಂಡು ಇರಲಿಕ್ಕೆ ಯೋಗ್ಯವಾದವರು. ಮಹಿಳೆಯರ ಬಗ್ಗೆ ನನಗೆ ತುಂಬ ಗೌರವವಿದೆ. ಅವರು ಪೂಜ್ಯರು ಇತ್ಯಾದಿ.... ಇತ್ಯಾದಿ.

ಪಾಪ ಆ ವ್ಯಕ್ತಿಗೆ ಎಷ್ಟು ಕಳಕಳಿ ಮಹಿಳೆಯರ ಕುರಿತು ಎಂದರೆ ಮಹಿಳೆಯರಿಗೆ ಮಗುವಿಗೆ ಹಾಲುಣಿಸುವ ಕೆಲಸ, ಮಾಸಿಕ ಋತುಸ್ರಾವದ ಸಮಸ್ಯೆ. ಈ ಎಲ್ಲ ಇರುವುದರಿಂದ ಅವರು ಮನೆಯಿಂದ ಹೊರಬರಬಾರದು ಎನ್ನುತ್ತಾರೆ. ಇವರೊಬ್ಬರು ನರ್ಸಿಂಗ್ ಹೋಂ ಹೊಂದಿರುವ ವೈದ್ಯರು. ಇನ್ನೂ ಮುಂದುವರೆದು ಹೇಳುತ್ತಾರೆ, ಮಹಿಳೆಯರು ಮನೆಯಿಂದ ಗಂಡನ ಜೊತೆ ಇಲ್ಲದೇ ಹೊರಬಂದರೆ ಶೀಲಭಂಗಕ್ಕೆ ಒಳಗಾಗುತ್ತಾಳೆ. ಹಾಗಾಗಿ ಅವಳು ಸುಕ್ಷೇಮವಾಗಿ ಮನೆಯೊಳಗೇ ಉಳಿದು ಬಿಡಲಿ ಎಂದು ಉದಾತ್ತ ಭಾವ. ಅವರ ಪ್ರಕಾರ ಈ ದೇಶದ ಸಂವಿಧಾನ ಪೂರ್ಣ ತಪ್ಪು. ಮನು ಧರ್ಮಶಾಸ್ತ್ರ ಸರ್ವ ಶ್ರೇಷ್ಠ. ಅಲ್ಲದೆ ಯಾವುದೇ ಗಂಡಸು [illegible] ಎಂದರೆ ಅವನೊಬ್ಬ "[illegible]" ([illegible] ಶಬ್ದಗಳನ್ನು ಬಳಕೆ ಮಾಡಬಾರದು ಎಂಬ ಕನಿಷ್ಠ ಪ್ರಜ್ಞೆಯೂ ಇಲ್ಲದ ವ್ಯಕ್ತಿ.

ಇಷ್ಟೆಲ್ಲಾ ಹೇಳುವ ಈ ವ್ಯಕ್ತಿಯ ನರ್ಸಿಂಗ್ ಹೋಂನಲ್ಲಿ ಮಹಿಳಾ ನರ್ಸ್‌ಗಳಿದ್ದಾರೆ. ಮಹಿಳಾ ವೈದ್ಯರಿದ್ದಾರೆ. "ನಿಮಗೆ ಆರ್ಥಿಕವಾಗಿ ಲಾಭ ಸಿಗುವ ಕಡೆ ಮಹಿಳೆಯರು ಕೆಲಸ ಮಾಡಬೇಕು. ಉಳಿದೆಡೆ ಅವರನ್ನು ಹೊರಗೆ ಬರಬಾರದೆನ್ನುವುದು" ಇಬ್ಬಗೆಯ ನೀತಿ ಅಲ್ಲವೇ ಎಂದರೆ ಕೆಲವು ಕಡೆ ಹೆಂಗಸರೇ ಕೆಲಸ ಮಾಡಬೇಕಾಗುತ್ತದೆ ಎನ್ನುತ್ತಾರೆ ಆ ವ್ಯಕ್ತಿ.

"ಅತ್ಯಾಚಾರ ಮಾಡುವವರು ಗಂಡಸರು. ನಮ್ಮ ಪ್ರಕಾರ ತಪ್ಪು ಮಾಡುವವರಿಗೆ ಶಿಕ್ಷೆಯಾಗಬೇಕು. ಹಾಗೆಂದರೆ ಮನಸ್ಸು, ಇಂದ್ರಿಯ, ಭಾವನೆಗಳ ಮೇಲೆ ನಿಯಂತ್ರಣವಿಲ್ಲದ ನೀವು ನಾಲ್ಕು ಗೋಡೆಯ ಒಳಗೆ ಇದ್ದು ಬಿಟ್ಟರೆ ಎಲ್ಲ ಹೆಂಗಸರಿಗೂ ಕ್ಷೇಮವಲ್ಲವೇ?" ಎಂದರೆ ಉತ್ತರವಿಲ್ಲ.

ಅತ್ಯಂತ ಇಂಟರೆಸ್ಟಿಂಗ್ ಸಂಭಾಷಣೆ ಎಂದರೆ ದೂರವಾಣಿಯಲ್ಲಿ ಮೈಸೂರಿನ ಜಮೀಲಾ ಕೇಳಿದ ಪ್ರಶ್ನೆ. ನಾನೊಬ್ಬಳು 4 ಮಕ್ಕಳ ತಾಯಿ. ಮನೆಯಲ್ಲಿ ಯಾರಾರೂ ಪುರುಷರಿಲ್ಲ. ನನ್ನ ಗಂಡ ತೀರಿಕೊಂಡಿದ್ದಾರೆ. ನಾನು ಕೂಲಿ ಮಾಡಿದರಷ್ಟೇ ನನ್ನ ಮಕ್ಕಳಿಗೆ ಹೊಟ್ಟೆಗೆ ಹಾಕಬಹುದು. ನನ್ನಂತವರು ಏನ್ ಮಾಡಬೇಕು? ಥಟ್ಟನೆ ಉತ್ತರವೇನು ಗೊತ್ತೆ?

ಇಂತವರಿಗೆಲ್ಲ ಸರ್ಕಾರ ಗಂಡು ಹುಡುಕಿ ಮದುವೆ ಮಾಡಬೇಕಂತೆ! ನಗುತ್ತೀರೋ, ಅಳುತ್ತೀರೋ?

ಸಂತೋಷದ ಸಂಗತಿ ಎಂದರೆ ಬಂದ ದೂರವಾಣಿ ಕರೆ (ಅಮೇರಿಕಾದಿಂದ ಕೂಡ) ಯಲ್ಲಿ ಒಂದನ್ನು ಬಿಟ್ಟರೆ (ಅದೂ ಕೂಡ ಮಹಿಳೆಯರಿಗೆ ಕೆಲಸ ಸಿಕ್ಕರೆ ಪುರುಷರು ನಿರುದ್ಯೋಗಿಗಳಾಗುತ್ತಾರೆ. ನಿರುದ್ಯೋಗಿ ಹುಡುಗನನ್ನು ಯಾವ ಹುಡುಗಿಯೂ ಮದುವೆಯಾಗಲು ಒಪ್ಪುವುದಿಲ್ಲ ಎಂಬ ಅಭಿಪ್ರಾಯ) ಮತ್ತೆಲ್ಲರೂ ಡಾ.ಆರ್ಯ ಕೇಸರಿಯವರಿಗೆ ಉಗಿದು ಉಪ್ಪು ಹಾಕಿದ್ದರು. ಅದರಲ್ಲಿ ಒಂದಿಬ್ಬರು ಸ್ವಾಮೀಜಿಗಳೂ ಇದ್ದರು ಎನ್ನುವುದು ಉಲ್ಲೇಖಾರ್ಹ. ಆದರೆ ಆ ವ್ಯಕ್ತಿಯ ಬಳಿ ಯಾವುದೇ ನಿರ್ದಿಷ್ಟ ಉತ್ತರವಿಲ್ಲ. ಸ್ಪಷ್ಟ ಆಧಾರಗಳಿಲ್ಲ. 'ಏನ ಕೇನ ಪ್ರಕಾರೇಣ ಪ್ರಸಿದ್ಧ ಪುರುಷೋಭವ' ಎಂಬ ನುಡಿ ಈ ವ್ಯಕ್ತಿಗೆ ಸರಿ ಹೊಂದುವುದೆಂದು ನಾವು ಅಂದುಕೊಂಡಿದ್ದೆ. ಆದರೆ ವಿಚಾರಿಸಿದಾಗ ತಿಳಿದದ್ದು, ಈ ವ್ಯಕ್ತಿಗೆ ಚಾಮರಾಜನಗರದ ಸಂಘ ಪರಿವಾರದ ನಂಟಿದೆ ಎಂದು.

ನೋಡಿ, ಮಹಿಳಾ ವಿರೋಧಿ ನೀತಿಯನ್ನು ಪ್ರಚುರಪಡಿಸಲು ಸಂಘ ಪರಿವಾರ ಏನೆಲ್ಲ ಮಾಡುತ್ತದೆ ಎಂದು. ಕಾವಿ ಬಟ್ಟೆಗೆ ಜನ ಮನ್ನಣೆ ನೀಡುತ್ತಾರೆಂಬ ಭ್ರಮೆಯಲ್ಲಿ ಈತ ಚರ್ಚೆ ಪ್ರಾರಂಭವಾಗುವವರೆಗೆ ಶ್ವೇತವಸನಧಾರಿ ಇದ್ದವನು ಕ್ಯಾಮೆರಾ ಆನ್ ಆಗುವಾಗ ಕಾವಿಧಾರಿಯಾಗಿ ಕುಳಿತುಬಿಟ್ಟಿದ್ದ ಪಾಪ!

'ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯಬೇಕಾಗಿದೆ'

ಪುಟ 9 ರಿಂದ

ನಾಗರೀಕ ಹಕ್ಕುಗಳು ಕಾರ್ಮಿಕರ ಕಾರ್ಮಿಕ ಸಂಘಟನೆಯ ಹಕ್ಕಿನ ಮೇಲೆ ಧಾಳಿಗಳಾಗುತ್ತಿವೆ.

● ಪ್ರಸಕ್ತ ಬಿಕ್ಕಟ್ಟು 1929 ರ ನಂತರದ ಅತ್ಯಂತ ತೀವ್ರತರ ಬಿಕ್ಕಟ್ಟು. ಇದು ಯಾವ ವಿಭಾಗವನ್ನು ತಟ್ಟದೇ ಬಿಟ್ಟಿಲ್ಲ. ಸಹಸ್ರಾರು ಕಾರ್ಖಾನೆಗಳು ಮುಚ್ಚಿವೆ. ಕೋಟ್ಯಾಂತರ ಸಂಖ್ಯೆಯ ರೈತರು ಕೃಷಿ ಕಾರ್ಮಿಕರ ಬದುಕನ್ನು ಬಡತನ ಸಂಕಷ್ಟಗಳ ಕೂಪಕ್ಕೆ ತಳ್ಳಿದೆ. ಕೋಟಿಗಟ್ಟಲೆ ಜನರು ಉದ್ಯೋಗಗಳನ್ನು, ಮನೆಗಳನ್ನು ಕಳೆದುಕೊಂಡಿದ್ದಾರೆ. ಈ ಸಂಖ್ಯೆ 5 ಕೋಟಿ ತಲುಪುವ ಅಂದಾಜಿದೆ. ಅಸಮಾನತೆ ಹೆಚ್ಚುತ್ತಿದೆ. ನೂರು ಕೋಟಿಗೂ ಹೆಚ್ಚು ಜನರು ಹಸಿವಿನಿಂದ ನರಳುವಂತಾಗಿದೆ. ಯುವಜನರು, ಮಹಿಳೆಯರು, ವಲಸೆ ಕಾರ್ಮಿಕರು ಈ ತೀವ್ರ ಸಂಕಷ್ಟಕ್ಕೆ ಸಿಲುಕುವ ಮೊದ ಮೊದಲ ವಿಭಾಗವಾಗಿದ್ದಾರೆ.

● ಈ ಬಿಕ್ಕಟ್ಟಿನ ನಿವಾರಣೆಯ ಹೆಸರಿನಲ್ಲಿ ಜನರ ತೆರಿಗೆ ಹಣದಿಂದ ದೊಡ್ಡ ದೊಡ್ಡ ಬಂಡವಾಳಗಾರ ಕಂಪನಿಗಳಿಗೆ ನೀಡಲಾಗುತ್ತಿರುವ ಪರಿಹಾರ ಪ್ಯಾಕೇಜ್‌ಗಳು ಕೆಲವೇ ಕೆಲವರಿಗೆ ಲಾಭ ತರುತ್ತಿವೆ. ಇಂತಹ ನೀತಿಯಿಂದಾಗಿ ಇದೀಗ ಬ್ಯಾಂಕ್‌ಗಳು ಮತ್ತು ಬೃಹತ್ ಹಣಕಾಸು ಸಂಸ್ಥೆಗಳು ಎಂದಿನಂತೆ ವಹಿವಾಟು ನಡೆಸುವಂತಾಗಿದ್ದು ಲಾಭ ಗಳಿಸುತ್ತಿವೆ. ಆದರೆ ದುಡಿಯುವ ವರ್ಗದ ನೈಜ ಆದಾಯ ಕುಸಿದಿದೆ.

● ಕೆಲವರ ದುರಾಸೆ ಅಥವಾ ಆರ್ಥಿಕತೆಯನ್ನು ಸರಿಯಾಗಿ ನಿರ್ವಹಿಸಲಾರದ ತಪ್ಪಿನಿಂದಾಗಿ ಇಂತಹ ಬಿಕ್ಕಟ್ಟು ಸೃಷ್ಟಿಯಾದದ್ದಲ್ಲ. ಬದಲಿಗೆ, ಗರಿಷ್ಟ ಲಾಭಗಳಿಸುವ ಬಂಡವಾಳಶಾಹಿಯ ಲಾಭಕೋರತನವು ಜಗತ್ತಿನಲ್ಲಿ ದೇಶ ದೇಶಗಳ ನಡುವೆ ಹಾಗೂ ದೇಶಗಳ ಮಿತಿಯೊಳಗೆ ಸಹ ಅತೀವ ಆರ್ಥಿಕ ಅಸಮಾನತೆಯನ್ನು ಸೃಷ್ಟಿಸಿವೆ. ಜಗತ್ತಿನ ದೊಡ್ಡ ಪ್ರಮಾಣದ ಜನರ ಕೊಂಡುಕೊಳ್ಳುವ ಶಕ್ತಿಯು ಕುಸಿದಿದ್ದರ ಪರಿಣಾಮವಾಗಿ ಇಂತಹ ಬಿಕ್ಕಟ್ಟು ಸ್ಫೋಟಿಸಿದೆ. ಇದೊಂದು ವ್ಯವಸ್ಥೆಯ ಬಿಕ್ಕಟ್ಟು. ಬಂಡವಾಳಶಾಹಿ ವ್ಯವಸ್ಥೆಯು ತನ್ನೊಳಗೆ ಬಿಕ್ಕಟ್ಟನ್ನು ಅಂತರ್ಗತವಾಗಿ ಹೊತ್ತುಕೊಂಡಿದೆ ಎಂಬ ಮಾರ್ಕ್ಸ್‌ರ ವಿಮರ್ಶೆ ನಿಜವೆಂದು ಮತ್ತೊಮ್ಮೆ ಸಾಬೀತಾಗಿದೆ. ಬಂಡವಾಳಶಾಹಿ ವ್ಯವಸ್ಥೆಯು ಎಂದಿಗೂ ನಿರುದ್ಯೋಗಿಗಳ ಬೃಹತ್ ಸೈನ್ಯವು ಉದ್ಯೋಗಕ್ಕಾಗಿ ಸರದಿ ಸಾಲಿನಲ್ಲಿ ನಿಲ್ಲುವುದನ್ನು ಬಯಸುತ್ತದೆ.

● ಸಮಾಜವಾದವೊಂದೇ ಬಂಡವಾಳಶಾಹಿಗೆ ಪರ್ಯಾಯ. ಅದಕ್ಕಾಗಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಹಾಗೂ ಏಕಸ್ವಾಮ್ಯ ಬಂಡವಾಳಶಾಹಿಯ ವಿರುದ್ಧ ಹೋರಾಟ ತೀವ್ರಗೊಳಿಸಬೇಕಾಗಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಮಾರುಕಟ್ಟೆಯ ಮೇಲೆ ತಮ್ಮ ಹಿಡಿತ ಸಾಧಿಸುವ ಮೂಲಕ ಹಾಗೂ ಭಾರವನ್ನು ಕಾರ್ಮಿಕರ ಹೆಗಲಿಗೆ ವರ್ಗಾಯಿಸುವ ಮೂಲಕ ಬಿಕ್ಕಟ್ಟಿನಿಂದ ಹೊರಬರಲು ಬಲಾಢ್ಯ ಸಾಮ್ರಾಜ್ಯಶಾಹಿ ಶಕ್ತಿಗಳು ಪ್ರಯತ್ನಿಸುತ್ತಿವೆ. ಮೊದಲು ಇದನ್ನು ದೋಹಾ ಸುತ್ತಿನ ಡಬ್ಲ್ಯು.ಟಿ.ಒ ಮಾತುಕತೆಗಳ ಮೂಲಕ ಸಾಧಿಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ. ಕೃಷಿ ಹಾಗೂ ಕೃಷಿಯೇತರ ಉತ್ಪನ್ನಗಳಿಗೂ ಅನ್ವಯವಾಗುವ ಅಸಮಾನತೆಯಿಂದ ಕೂಡಿದ ಆರ್ಥಿಕ ಒಪ್ಪಂದಗಳನ್ನು ಹೇರಲಾಗುತ್ತಿದೆ.

● ಜಗತ್ತಿನಲ್ಲಿ ಪರಿಸರ ನಾಶದ ಜವಾಬ್ದಾರಿ ಹೊರಬೇಕಾದದ್ದರಲ್ಲಿ ಪ್ರಥಮ ಸ್ಥಾನದಲ್ಲಿರುವುದು ಬಂಡವಾಳಶಾಹಿ. ಆದರೆ ಭೂಮಿಯನ್ನು, ಭೂಮಿಯ ಹವಾಮಾನವನ್ನು ರಕ್ಷಿಸಬೇಕಾದ ಹೊಣೆಗಾರಿಕೆಯನ್ನು ಅದು ಹೊರಲು ಸಿದ್ಧವಿಲ್ಲ. ಬದಲಿಗೆ ಕಾರ್ಮಿಕ ವರ್ಗದ ಹೆಗಲಿಗೆ ವರ್ಗಾಯಿಸಲು ಯತ್ನಿಸುತ್ತಿದೆ. ಪರಿಸರ ಸಂರಕ್ಷಣೆ ಹೆಸರಿನಲ್ಲಿ ಅದು ಪ್ರತಿಪಾದಿಸುತ್ತಿರುವ ಬದಲಾವಣೆಗಳು, ಪರಿಸರ ಸಂರಕ್ಷಣೆಗೆ ಹೆಚ್ಚೇನು ಸಂಬಂಧಿಸಿಲ್ಲ. 'ಹಸಿರು ಅಭಿವೃದ್ಧಿ', 'ಹಸಿರು ಆರ್ಥಿಕತೆ' ಎಂದು ಹೇಳುವುದೆಲ್ಲವೂ ಬಂಡವಾಳಶಾಹಿಯ ಲಾಭವನ್ನು ಗರಿಷ್ಟಗೊಳಿಸುವ ಹುನ್ನಾರಗಳನ್ನು ಹೊಂದಿವೆ.

● ಕಾರ್ಮಿಕ ವರ್ಗ ಹಾಗೂ ಜನತೆ ತಮ್ಮ ಹೋರಾಟವನ್ನು ತೀವ್ರಗೊಳಿಸುವುದೊಂದೇ ಸಮಸ್ಯೆಗೆ ಪರಿಹಾರವಾಗಿದೆ. ಕಾರ್ಮಿಕ ವರ್ಗವು ಅಣಿನೆರೆದು ತನ್ನ ಸಾಮರ್ಥ್ಯವನ್ನು ತೋರಿ ಪ್ರತಿರೋಧ ಒಡ್ಡಿದಾಗ ಯಶಸ್ಸು ಗಳಿಸುವುದು ಸಾಧ್ಯವೆಂದು ಅನುಭವಗಳು ಹೇಳುತ್ತಿವೆ. ಕಾರ್ಮಿಕರು ಬೇಡಿಕೆ ಈಡೇರುವವರೆಗೆ ಕಾರ್ಖಾನೆಯಲ್ಲೇ ಕುಳಿತುಬಿಡುವುದು. ಕಾರ್ಖಾನೆಯನ್ನು ವಶಕ್ಕೆ ತೆಗೆದುಕೊಳ್ಳುವುದು ಇಂತಹ ತೀವ್ರ ಹೋರಾಟಗಳು ಆಳುವ ವರ್ಗವನ್ನು ಮಣಿಯುವಂತೆ ಮಾಡಿವೆ. ಲ್ಯಾಟಿನ್ ಅಮೇರಿಕಾದ ಹಲವು ದೇಶಗಳು ಬೃಹತ್ ಕಾರ್ಮಿಕ ವರ್ಗದ ಹೋರಾಟ, ಅಣಿ ನೆರೆಯುವಿಕೆಯ ಪ್ರಯೋಗ ಶಾಲೆಯಂತಾಗಿದ್ದು ಹಕ್ಕುಗಳ ರಕ್ಷಣೆ ಹೇಗೆ ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿವೆ. ತುರ್ತು ಪರಿಹಾರಗಳನ್ನು ಮಾತ್ರವಲ್ಲ, ದೀರ್ಘಾವಧಿಯ ಬೇಡಿಕೆಗಳನ್ನು ಗೆಲ್ಲಲು ಹೋರಾಟಗಳನ್ನು ತೀವ್ರಗೊಳಿಸಬೇಕಾಗಿದೆ. ಶೋಷಿತ ಜನತೆಯನ್ನು ಅಣಿನೆರೆಸಬೇಕಾಗಿದೆ.

● ಸೋವಿಯತ್ ಒಕ್ಕೂಟದ ಕುಸಿತದ ನಂತರದ ಅವಧಿಯಿಂದ ಇತ್ತೀಚಿನ ಕುಸಿತದವರೆಗೆ ಬಂಡವಾಳಶಾಹಿಯು ಕಂಡ ಉಬ್ಬ್ರಾಯ ಸ್ಥಿತಿಯು ಕಾರ್ಮಿಕ ವರ್ಗದ ಹಕ್ಕುಗಳ ಮೇಲಿನ ತೀವ್ರ ದಾಳಿಗೆ ಕಾರಣವಾಯಿತು ಮತ್ತು ಕಮ್ಯೂನಿಸ್ಟ್ ವಿರೋಧಿ ತೀವ್ರ ಅಪಪ್ರಚಾರಕ್ಕೆ ಪ್ರೇರಣೆಯಾಯಿತು. ಆದರೂ ಅದರಿಂದ ಸಮಾಜವಾದವು ಆಧುನಿಕ ನಾಗರೀಕತೆಗೆ ನೀಡಿದ ಮಹಾನ್ ಕೊಡುಗೆಗಳನ್ನು ಮಸುಕು ಮಾಡಲು ಸಾಧ್ಯವಾಗಿಲ್ಲ. ಇಂತಹ ದಾಳಿಯನ್ನು ವಿರೋಧಿಸುತ್ತಾ ನಮ್ಮ ಹೋರಾಟವು ಇದುವರೆಗೆ ಈ ಹಿಂದೆ ಗಳಿಸಿಕೊಂಡಿದ್ದ ಹಕ್ಕುಗಳ ರಕ್ಷಣೆಗೆ ಸೀಮಿತವಾಗಿತ್ತು. ಆದರೆ ಇನ್ನು ಮುಂದಿನ ಹೋರಾಟವು ಹೊಸ ಹಕ್ಕುಗಳನ್ನು ಗಳಿಸಿಕೊಳ್ಳುವಂತಹ ಆಕ್ರಮಣಕಾರಿ ಹೋರಾಟವಾಗಿ ಮೂಡಿ ಬರಬೇಕಾಗಿದೆ. ಕೆಲವು ಬೇಡಿಕೆಗಳಿಗಾಗಿ ಮಾತ್ರವಲ್ಲ ಬಂಡವಾಳಶಾಹಿ ಆಳ್ವಿಕೆಗೆ ಪರ್ಯಾಯವಾಗಿ ಸಮಾಜವಾದದ ರಾಜಕೀಯ ಪರ್ಯಾಯಕ್ಕಾಗಿಯೂ ಇಂತಹ ಹೋರಾಟ ನಡೆಯಬೇಕಾಗ್ಗಿದೆ.

● ಇಂತಹ ಸನ್ನಿವೇಶದಲ್ಲಿ ಕಮ್ಯೂನಿಸ್ಟ್ ಪಕ್ಷಗಳು ಕಾರ್ಮಿಕ ಪಕ್ಷಗಳು ಜಗತ್ತಿನಾದ್ಯಂತ ಪೂರ್ಣಾವಧಿಯ ಉದ್ಯೋಗಕ್ಕಾಗಿ ಸಾರ್ವಜನಿಕವಾದ ಮತ್ತು ಉಚಿತವಾದ ಆರೋಗ್ಯ ಸೇವೆ, ಶಿಕ್ಷಣ, ಸಾಮಾಜ ಕಲ್ಯಾಣ ಯೋಜನೆಗಳಿಗಾಗಿ, ಲಿಂಗ ತಾರತಮ್ಯ, ವರ್ಣಬೇಧಗಳ ವಿರುದ್ಧ ಮಹಿಳೆಯರು, ಯುವಜನ, ಕಾರ್ಮಿಕ ವರ್ಗ ಹಾಗೂ ವಲಸೆ ಕಾರ್ಮಿಕರು, ಜನಾಂಗೀಯ ಮತ್ತು ರಾಷ್ಟ್ರೀಯತೆಯ ದೃಷ್ಟಿಯಿಂದ ಅಲ್ಪಸಂಖ್ಯಾತರಾದವರು ಹೀಗೆ ವಿಶಾಲ ಜನ ಸಮುದಾಯದ ಹಕ್ಕುಗಳ ರಕ್ಷಣೆಗಾಗಿ ಗರಿಷ್ಟ ಸಾಧ್ಯತೆಯ ವಿಶಾಲ ಜನ ಸಮುದಾಯಗಳನ್ನು ಚಳುವಳಿಯಲ್ಲಿ ಅಣಿನೆರೆಸಲು ಶ್ರಮಿಸುತ್ತವೆ.

● ಬಂಡವಾಳಶಾಹಿ ವ್ಯವಸ್ಥೆಯು ಅಂತರ್ಗತವಾಗಿ ಬಿಕ್ಕಟ್ಟು ಹೊಂದಿರುವಂತಹದ್ದಾದರೂ ಅದು ತಾನೇ ತಾನಾಗಿಯೇನೂ ಕುಸಿದು ಬೀಳುವುದಿಲ್ಲ. ಕಮ್ಯುನಿಸ್ಟ್ ನಾಯಕತ್ವದ ಪ್ರತಿದಾಳಿ ಇಲ್ಲದೇ ಹೋದಲ್ಲಿ ಇಂತಹ ಸನ್ನಿವೇಶಗಳಲ್ಲಿ ಬಲಪಂಥೀಯ ಪ್ರತಿಗಾಮಿ ಶಕ್ತಿಗಳು ತಲೆ ಎತ್ತುವ ಅಪಾಯವಿರುತ್ತದೆ. ವಿರೋಧ ಪಕ್ಷದಲ್ಲಿದ್ದಾಗ ಕಾರ್ಮಿಕ ವರ್ಗದಪರ, ಆಡಳಿತಕ್ಕೆ ಬಂದರೆ ಬಂಡವಾಳಶಾಹಿ ಪರ ಆಗುವ 'ಸೋಷಿಯಲ್ ಡೆಮಾಕ್ರೆಟಿಕ್' ಪಕ್ಷಗಳು ಬಂಡವಾಳಶಾಹಿಯ ನಿಜವಾದ ಮುಖವನ್ನು ಮರೆಮಾಚಿ ಬಂಡವಾಳಶಾಹಿಯ ಕುರಿತು ಭ್ರಮೆ ಮುಂದುವರಿಯಲು ಈಗಲೂ ನೆರವಾಗುತ್ತಿವೆ. 'ಮಾನವೀಕರಣಗೊಂಡ ಬಂಡವಾಳಶಾಹಿ', 'ನಿಯಂತ್ರಣ', 'ಜಾಗತಿಕ ಆಡಳಿತ', ಇವೆಲ್ಲಾ ಜನವಿರೋಧಿ ನೀತಿಗಳಿಗೆ ಬೆಣ್ಣೆಯನ್ನು ಸವರಿ ವರ್ಗ ಸಂಘರ್ಷವನ್ನು ತಪ್ಪಿಸುವ ಉದ್ದೇಶ ಹೊಂದಿದೆ. ಯಾವ ಪ್ರಮಾಣದ ಸುಧಾರಣೆಯೂ ಬಂಡವಾಳಶಾಹಿ ವ್ಯವಸ್ಥೆಯೊಳಗೆ ಶೋಷಣೆ ಇಲ್ಲದಂತೆ ಮಾಡಲು ಸಾಧ್ಯವಿಲ್ಲ. ಬಂಡವಾಳಶಾಹಿಯನ್ನೇ ಕಿತ್ತೆಸೆಯಬೇಕಾಗಿದೆ. ಇದಾಗಬೇಕಾದಲ್ಲಿ ಕಾರ್ಮಿಕ ವರ್ಗದ ನಾಯಕತ್ವದ ಸಾಮೂಹಿಕ, ಸೈದ್ಧಾಂತಿಕ, ರಾಜಕೀಯ ಹೋರಾಟ ಅಗತ್ಯವಾಗಿದೆ.

● ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ 'ಬೇರೆ ಪರ್ಯಾಯವಿಲ್ಲ' (There is no alternative) ಎಂಬ ಸಿದ್ಧಾಂತಕ್ಕೆ ಪ್ರತಿಯಾಗಿ ನಾವು 'ಸಮಾಜವಾದವೇ ಪರ್ಯಾಯ' ಎಂದು ಘೋಷಿಸುತ್ತೇವೆ.

● ಜಗತ್ತಿನ ವಿವಿಧ ದೇಶಗಳ ಬಹುಸಂಖ್ಯಾತರಾದ ಕಾರ್ಮಿಕ ವರ್ಗ ಮತ್ತು ಶೋಷಿತ ಸಮುದಾಯಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವ ವಿವಿಧ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳಾದ ನಾವು ಪರ್ಯಾಯವೇ ಇಲ್ಲದ ಕಮ್ಯೂನಿಸ್ಟ್ ಪಕ್ಷದ ಚಾರಿತ್ರಿಕ ಪಾತ್ರದ ಕುರಿತು ಮತ್ತೊಮ್ಮೆ ಸಾರಿ ಹೇಳುತ್ತೇವೆ. ಮನುಕುಲದ ಭವ್ಯ ಭವಿತವ್ಯಕ್ಕಾಗಿ ಸಮಾಜವಾದವೊಂದೇ-ಬೇರೊಂದಿಲ್ಲವೆಂದು ಘೋಷಿಸುತ್ತೇವೆ ಹಾಗೂ ಈ ಹೋರಾಟವನ್ನು ಸದೃಢಗೊಳಿಸಲು ಅಣಿನೆರೆಯಬೇಕೆಂದು ಜನರಿಗೆ ಮನವಿ ಮಾಡುತ್ತೇವೆ. ○

ಸಭೆಯ - ಕರೆಗಳು ತೀರ್ಮಾನಗಳು

ಈ ಸಭೆಯು ಸರ್ವಾನುಮತದಿಂದ 'ದೆಹಲಿ ಘೋಷಣೆ'ಯನ್ನು ಅಂಗೀಕರಿಸಿತು.

ಮುಂದಿನ ಅಂತರಾಷ್ಟ್ರೀಯ ಸಭೆಗಳಿಗೆ ತನ್ನನ್ನು ಆಹ್ವಾನಿಸಬೇಕೆಂಬ ಬಾಂಗ್ಲಾದೇಶ ಕಾರ್ಮಿಕ ಪಕ್ಷದ ವಿನಂತಿಯನ್ನು ಒಪ್ಪಿಕೊಳ್ಳಲು ಸಭೆ ನಿರ್ಧರಿಸಿತು.

12ನೇ ಅಂತರಾಷ್ಟ್ರೀಯ ಸಭೆಯನ್ನು ದಕ್ಷಿಣ ಆಫ್ರಿಯಾ ಕಮ್ಯೂನಿಸ್ಟ್ ಪಕ್ಷದ ಆತಿಥ್ಯದಲ್ಲಿ ಆಫ್ರಿಕಾ ಖಂಡದಲ್ಲಿ ನಡೆಸಲು ಸಭೆ ತೀರ್ಮಾನಿಸಿತು.

ಶಾಂತಿ, ಸಾರ್ವಭೌಮತೆ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಜಗತ್ತಿನಾದ್ಯಂತ ಕಾರ್ಮಿಕರು ಮತ್ತು ಜನತೆ ನಡೆಸುತ್ತಿರುವ ಹೋರಾಟಗಳಿಗೆ ಸಭೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಿತು.

ಈ ಕೆಳಗಿನ ವಿಷಯಗಳ ಮೇಲೆ ಎಲ್ಲಾ ದೇಶಗಳಲ್ಲಿ ನಿರ್ದಿಷ್ಟ ಕಾರ್ಯಾಚರಣೆಗಳನ್ನು ರೂಪಿಸಬೇಕು ಮತ್ತು ಜಾಗತಿಕವಾಗಿ ಅವುಗಳನ್ನು ಸಮನ್ವಯಗೊಳಿಸಬೇಕು ಎಂದು ಸಭೆ ನಿರ್ಧರಿಸಿತು.

1. ನ್ಯಾಟೋ ಮತ್ತು ಅದರ ಜಾಗತಿಕ ವಿಸ್ತರಣೆಯ ವಿರುದ್ಧ ಸಾಮ್ರಾಜ್ಯಶಾಹಿಯ ನವೀಕೃತ ಮಿಲಿಟರಿ ಆಕ್ರಮಣಕಾರಿ ನೀತಿಗಳ ವಿರುದ್ಧ ಮತ್ತು ವಿದೇಶಿ ಸೇನಾ ನೆಲೆಗಳ ವಿರುದ್ಧ
2. 2009 ಸೆಪ್ಟೆಂಬರ್‌ನಲ್ಲಿ ಡಮಾಸ್ಕಸ್‌ನಲ್ಲಿ ನಡೆದ ವಿಶೇಷ ಸಭೆಯ ನಿರ್ಣಯಕ್ಕೆ ಅನುಗುಣವಾಗಿ ನವೆಂಬರ್ 29 ರಂದು ಪ್ಯಾಲೆಸ್ತೀನಿ ಹೋರಾಟಕ್ಕೆ ಸೌಹಾರ್ದತೆ ಸೂಚಿಸುವ ದಿನವನ್ನಾಗಿ ಆಚರಿಸಬೇಕು.
3. 2010 ನ್ನು ಫ್ಯಾಸಿಸಂ ಸೋಲಿನ 65ನೇ ವರ್ಷವನ್ನಾಗಿ ಆಚರಿಸಬೇಕು.
4. ಟ್ರೇಡ್ ಯೂನಿಯನ್‌ಗಳ ಜತೆ ಕಾರ್ಯಾಚರಿಸುವ ಮೂಲಕ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವ ಆಂದೋಲನಗಳನ್ನು ಬಲಪಡಿಸಬೇಕು.
5. ಕ್ಯೂಬಾದ ಐವರನ್ನು ಬಿಡುಗಡೆಗೊಳಿಸಬೇಕೆಂಬ ಅಂತರಾಷ್ಟ್ರೀಯ ಸೌಹಾರ್ದ ಹೋರಾಟವನ್ನು ತೀವ್ರಗೊಳಿಸಬೇಕು.
6. ದುಡಿಯುವ ಹಕ್ಕಿಗಾಗಿ ಆಯಾ ದೇಶಗಳ ಸರಕಾರಗಳ ಮೇಲೆ ಒತ್ತಡ ಹೇರಲು ನಡೆಯುತ್ತಿರುವ ಜನಪರ ಚಳುವಳಿಗಳನ್ನು ಬಲಪಡಿಸಲು ಯುವಜನ ಸಂಘಟನೆಗಳ ಜತೆ ಸಮನ್ವಯದಿಂದ ಕಾರ್ಯಾಚರಿಸುವುದು.

ಈ ದೆಹಲಿ ಸಭೆಯ ಆತಿಥ್ಯವನ್ನು ಸಿಪಿಐ(ಎಂ) ಹಾಗೂ ಸಿಪಿಐ ಪಕ್ಷಗಳು ವಹಿಸಿದ್ದವು. ಕಾಂ.ಸೀತಾರಾಂಯೆಚೂರಿ, ಪ್ರಕಾಶ್ ಕಾರಟ್, ತ್ರಿಪುರ ಮುಖ್ಯಮಂತ್ರಿ ಮಾಣಿಕ ಸರ್ಕಾರ್ ಮುಂತಾದವರು ವಿವಿಧ ಸಂದರ್ಭಗಳಲ್ಲಿ ಸಿಪಿಐ(ಎಂ) ಪರವಾಗಿ ಪಾಲ್ಗೊಂಡು ವಿಚಾರ ಮಂಡಿಸಿದರು. ○

ಆರ್‌ಎಸ್‌ಎಸ್ ಪಾಲಾದ ಆಶ್ರಯ ಜಮೀನು



ಬಿಜೆಪಿ ದರ್ಬಾರ್

ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ತಾವರೆಕೆರೆ ಹೋಬಳಿಯ ಚನ್ನೇನಹಳ್ಳಿಯಲ್ಲಿ ಆಶ್ರಯ ಯೋಜನೆಯಲ್ಲಿ ವಸತಿಹೀನರಿಗೆ ವಿತರಿಸಲು ಹಿಂದೆ ಗುರುತಿಸಲಾಗಿದ್ದ 4 ಎಕರೆ ಜಾಗವನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಆರೆಸ್ಸೆಸ್‌ಗೆ ಮಂಜೂರು ಮಾಡಲಾಗಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರ ನಡೆಸುವಾಗ ಇವೆಲ್ಲಾ ಆಗದಿದ್ದರೆ ಮತ್ತೆ ಯಾವಾಗ ಆಗುವುದು. ಅಲ್ಲವೇ?

ಆರೆಸ್ಸೆಸ್ ಭಾರತದ ಸಂವಿಧಾನದ ಮೌಲ್ಯಗಳನ್ನು ಕೆಲವೊಮ್ಮೆ ಪ್ರತ್ಯಕ್ಷವಾಗಿ, ಹಲವು ಬಾರಿ ಪರೋಕ್ಷವಾಗಿ ಖಂಡಿಸುವ, ವಿರೋಧಿಸುವ ಒಂದು ಮತಾಂಧ ಸಂಘಟನೆ. ದೇಶದಲ್ಲಿ ಉಂಟಾಗಿರುವ ನೂರಾರು ಕೋಮುಗಲಭೆಗಳಲ್ಲಿ ಪಾತ್ರ ವಹಿಸಿರುವ ಕುಖ್ಯಾತ ಸಂಘಟನೆ. ಬಡವರು, ಕೂಲಿಕಾರರು, ದಲಿತರು ಹೀಗೆ ಸಮಾಜದ ನೊಂದ ಜನವಿಭಾಗಗಳಿಗೆ ಸೇರಬೇಕಾಗಿದ್ದ ಸರ್ಕಾರಿ ಜಾಗ ಹೀಗೆ ಆರೆಸ್ಸೆಸ್ ಪಾಲಾಗುತ್ತಿರುವುದು ಆರೆಸ್ಸೆಸ್‌ನ ಸಿದ್ಧಾಂತ, ವರ್ಗಗುಣ, ಹುಟ್ಟುಗುಣಕ್ಕೆ ತಕ್ಕಂತೆಯೇ ಇದೆ. ಏನಂತೀರಿ?

ಅಕ್ರಮ ಸಕ್ರಮ ರಿಯಾಯಿತಿ ಯಾರಿಗೆ?

ಒಡಾವಣೆ, ನಿವೇಶನ, ಕಟ್ಟಡ ಸೇರಿದಂತೆ ಎಲ್ಲ ಬಗೆಯ ನಿಯಮಗಳ ಉಲ್ಲಂಘನೆಗಳನ್ನು ದಂಡ ವಿಧಿಸಿ ಸಕ್ರಮಗೊಳಿಸುತ್ತೇವೆನ್ನುವ ಬಿಜೆಪಿ ಸರ್ಕಾರದ 'ಅಕ್ರಮ ಸಕ್ರಮ' ಯೋಜನೆಗೆ ಈ ಹಿಂದೆಯೇ ಜನ ಸಾಕಷ್ಟು ಪ್ರತಿರೋಧ ತೋರಿದ್ದರು.

ದಂಡ ಶುಲ್ಕಗಳು ತೀರಾ ದುಬಾರಿ, ಸಣ್ಣಪುಟ್ಟ ನಿವೇಶನ ಹೊಂದಿದವರಿಗೆ ಬಾರಿ ತೊಂದರೆ ಇಡೀ ಯೋಜನೆ ರಿಯಲ್ ಎಸ್ಟೇಟ್ ಕುಳಗಳ ಹಿತಾಸಕ್ತಿಗೆ ತಕ್ಕಂತೆ ಇತ್ತು ಎನ್ನುವ ಕಟು ಟೀಕೆಗಳು ಆಗ ಕೇಳಿಬಂದಿತ್ತು.

ಇದೀಗ ಬಿಜೆಪಿ ಸರ್ಕಾರವು ದಂಡ ಶುಲ್ಕವನ್ನು ಕಡಿತ ಮಾಡಿದ್ದೇನೆಂದು ಹೇಳಿ ಹೊಸ ಪ್ರಕಟಣೆ ಹೊರಡಿಸಿದೆ. ದಂಡ ಶುಲ್ಕಗಳು ಈಗಲೂ ಬಡವರ ವಿರೋಧಿಯಾಗಿಯೇ ಇವೆ. ನಿಯಮಗಳೂ ಅಷ್ಟೇ. ಪ್ರಶ್ನೆ ಬಿಜೆಪಿ ಸರ್ಕಾರಕ್ಕೆ ಯಾಕೆ ಈ ವಿಷಯದಲ್ಲಿ ಧಾವಂತ ಅಂತ. ಯಾಕೆಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗಳು ಹತ್ತಿರ ಬಂದಿವೆ. ಈ ಚುನಾವಣೆಯಲ್ಲಿ ಗೆಲ್ಲುವುದು ರಾಜಕೀಯವಾಗಿ ಒಂದು ಪ್ರಮುಖ ಆದ್ಯತೆ. ಚುನಾವಣೆ ಮೇಲೆ ಕಣ್ಣಿರಿಸ ಕೊಂಚ ರಿಯಾಯಿತಿ ತೋರಿದಂತೆ ಮಾಡಲಾಗಿದೆ. ಜನರ ಕಣ್ಣಿಗೆ ಮಂಕುಬೂದಿ ಎರಚುವ ಯತ್ನದ ಭಾಗವಾಗಿ ಬಿಜೆಪಿ ಸರ್ಕಾರ ಇನ್ನು ಏನೇನು ಪ್ರಯತ್ನ ಮಾಡಲಿದೆಯೋ ನೋಡಬೇಕಿದೆ.

ಈ ವಾರ

ಗಣಿ ಲೂಟಿ ವಾಸ್ತವ ಸತ್ಯ

ಪುಟ 3 ರಿಂದ

ಕರ್ನಾಟಕ ಮತ್ತು ಆಂಧ್ರ ರಾಜ್ಯಗಳಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆಯ ಕುರಿತಂತೆ ಸಿಬಿಐ ತನಿಖೆ ನಡೆಸಲು ಕೇಂದ್ರ ಸರ್ಕಾರ ನಿರ್ದೇಶಿಸಿರುವುದು ಸ್ವಾಗತಾರ್ಹ ಬೆಳವಣಿಗೆ. ಈ ವಿಷಯ ಪಾರ್ಲಿಮೆಂಟ್‌ನಲ್ಲಿಯೂ ಧ್ವನಿಸಿತ್ತು. ಆಂಧ್ರ ಸರ್ಕಾರದಂತೆ ಕರ್ನಾಟಕ ಸರ್ಕಾರವೂ ಇಂತಹ ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಸತತವಾದ ಆಗ್ರಹವನ್ನು ಮಾಡಿ ಒತ್ತಾಯಿಸಿದ್ದರೂ ಮುಖ್ಯಮಂತ್ರಿ ಯಡಿಯೂರಪ್ಪನವರು ನಿರಾಕರಿಸುತ್ತಾ ಬಂದಿದ್ದರು. ಮಾತ್ರವಲ್ಲ, ಈ ಹಿಂದೆಲ್ಲ ಇಂತಹ ಅಕ್ರಮ ಗಣಿಗಾರಿಕೆ ತನಿಖೆಗೆ ಒಳಪಡಿಸಬೇಕೆಂದೇ ಹೇಳಿದ್ದ ಅವರು ಈಗ ಅಂತಹ ಯಾವುದೇ ಅಕ್ರಮ ಗಣಿಗಾರಿಕೆ ನಡೆದೇ ಇಲ್ಲ. ತನಿಖೆಯೆಲ್ಲಿಂದ ಬಂತು ಎಂದೆಲ್ಲಾ ಗಣಿ ಭೂಮಾಫಿಯಾಗಳನ್ನು ಬಹಿರಂಗವಾಗಿ ಸಮರ್ಥಿಸಿಕೊಳ್ಳತೊಡಗಿದ್ದಾರೆ. ಹಾಗೆಯೇ ಅಕ್ರಮ ಗಣಿಗಾರಿಕೆಯ ಪ್ರಕರಣಗಳು ಬಟಾ ಬಯಲಾಗುತ್ತಿರುವಾಗ, ಗಣಿಗಾರಿಕೆಗೆ ತಾವೆಂದೂ ಲೈಸೆನ್ಸ್ ಒಂದನ್ನೂ ನೀಡಿಲ್ಲವೆಂದು, ಹಿಂದಿನವರ ಹೆಗಲ ಮೇಲೆ ಆರೋಪಗಳನ್ನು ಸಾಗಿಸ ಹೊರಟಿರುವುದು ತನಿಖೆಯ ಬೇಡಿಕೆಯನ್ನು ಹಾದಿ ತಪ್ಪಿಸಲು ಮಾಡಿದ ಯತ್ನವೇ ಆಗಿದೆ. ಇದರಲ್ಲಿ ಹಿಂದಿನವರ ಪಾಲು ಇಲ್ಲವೆಂದೇನೂ ಅಲ್ಲ ಆದರೆ...) ಭಿನ್ನಮತದ ಬಹಿರಂಗ ಬಂಡಾಯ ಹೂಡಿ, ಅಂತಿಮವಾಗಿ ತಮ್ಮ ಲೂಟಿಕೋರ, ರಾಜಕಾರಣಕ್ಕೆ ಆರೆಸ್ಸೆಸ್- ಬಿಜೆಪಿ - ಕೇಂದ್ರ ಹಾಗೂ ರಾಜ್ಯದ ನಾಯಕರ ಅಭಯ, ಬೆಂಬಲ ಪಡೆದದ್ದು, ಬಿಜೆಪಿ ಅಧಿಕಾರದ ಕುರ್ಚಿ ಉಳಿದದ್ದು ಅಲ್ಲಿನ ರಾಜಿಗೆ ಅನುಗುಣವಾಗಿ ಈಗ ಮುಖ್ಯಮಂತ್ರಿಗಳು ಗಣಿ, ಗಡಿಗಳ್ಳರ ಅಕ್ರಮಗಳನ್ನು ರಕ್ಷಿಸಿಕೊಳ್ಳಲು ಸಮರ್ಥನೆಗೆ ನಾಚಿಕೆ ಬಿಟ್ಟು ಇಳಿದದ್ದು ನಿಚ್ಚಳ. ಈ ಮೂಲಕ ಬಿಜೆಪಿ ಸಂಘ ಪರಿವಾರ ರಾಜ್ಯದ ಹಿತವನ್ನೇ ಬಲಿಕೊಡಲು ಸಿದ್ಧವೆಂಬುದನ್ನು ಮತ್ತೆ ತೋರಿಸಿದೆ.

ಈಗಾಗಲೇ ಕೇಂದ್ರದ ಭಾರತೀಯ ಗಣಿ ಬ್ಯೂರೋ ಅಧಿಕಾರಿಗಳ ತಂಡ ಬಳ್ಳಾರಿ ಜಿಲ್ಲೆಯಲ್ಲಿ ಆಂಧ್ರ, ಕರ್ನಾಟಕ ಗಡಿಗಳಲ್ಲಿ ನಡೆದಿರುವ ಗಣಿಗಾರಿಕೆಯ ತನಿಖೆಯನ್ನು ನಡೆಸಿದೆ. ಆಂಧ್ರದ ಇಲಾಖೆಯ ಉನ್ನತ ತಂಡ ನಡೆಸಿದ ತನಿಖೆಯಲ್ಲಿ ಜನಾರ್ಧನ ರೆಡ್ಡಿ ಬಳಗದ ಮಾಲೀಕತ್ವದ ಓಬಳಾಪುರಂ ಮೈನಿಂಗ್ ಕಂಪನಿಯ ಅಕ್ರಮಗಳನ್ನು ವಿವರವಾಗಿ ಪತ್ತೆ ಹಚ್ಚಿದ್ದು ಅಂತರಾಜ್ಯದ ಗಡಿಯನ್ನೇ ನಾಶ ಮಾಡಿ, ಹಿಂದಿನ ದಾಖಲೆಗಳನ್ನು ತಿರುಚಿದ ಅಂಶಗಳನ್ನು ಬಹಿರಂಗಪಡಿಸಿರುವುದು ಅಕ್ರಮಗಳನ್ನು ಖಚಿತಪಡಿಸಿದಂತಾಗಿದೆ.

ಪತ್ರಿಕೆ ಮುದ್ರಣಕ್ಕೆ ಸಿದ್ಧವಾಗುತ್ತಿರುವ ಹೊತ್ತಿನಲ್ಲಿ (ಗುರುವಾರ) ಸಿ.ಬಿ.ಐ.ನ ಅಧಿಕಾರಿಗಳು ಓಬಳಾಪುರಂ ಮೈನಿಂಗ್ ಕಂಪನಿಯ ಹಾಗೂ ಜನಾರ್ಧನ ರೆಡ್ಡಿಯವರ ಒಡೆತನದ ಕಛೇರಿಗಳ ಮೇಲೆ ಧಾಳಿ ಮಾಡಿ ತನಿಖೆ ಆರಂಭಿಸಿದ್ದಾರೆ. ಇದು ಬಿಜೆಪಿ ಸರ್ಕಾರವನ್ನು ಅಭದ್ರಗೊಳಿಸುವ ಹಾಗೂ ತಮ್ಮ ಕುಟುಂಬವನ್ನು ದುರ್ಬಲಗೊಳಿಸುವ ಕ್ರಮವೆಂದು ಸಚಿವ ಜನಾರ್ಧನ ರೆಡ್ಡಿ ಹೇಳಿರುವುದು ಅತ್ಯಂತ ಕೆಳಮಟ್ಟದ ರಾಜಕೀಯ ತಂತ್ರವಾಗಿದೆ. ಈ ಹೊತ್ತಿನಲ್ಲಿಯೇ ಬಳ್ಳಾರಿ ವಿಮಾನ ನಿಲ್ದಾಣಕ್ಕೆಂದು ರೈತರ ಭೂಮಿಯನ್ನು ವಶಪಡಿಸಿಕೊಳ್ಳಲು ಪೊಲೀಸರ ಬೃಹತ್ ಬಲದೊಂದಿಗೆ ಸರ್ವೆ ನಡೆಸಿ, ಪ್ರತಿಭಟನಾಕಾರರನ್ನು ದಮನಿಸಲು ಹೊರಟಿರುವುದು ಜನವಿರೋಧಿ ಕ್ರಮದ ಅತಿರೇಕವಾಗಿದೆ. ಈ ದೌರ್ಜನ್ಯ ಉಗ್ರ ಖಂಡನೆಗೆ ಅರ್ಹವಾದದು.

ಇಷ್ಟೆಲ್ಲಾ ನಡೆದರೂ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರುವ ಜನಾರ್ಧನ ರೆಡ್ಡಿ, ಕರುಣಾಕರ ರೆಡ್ಡಿ, ಶ್ರೀರಾಮುಲುರವರನ್ನು ಸಚಿವ ಸಂಪುಟದಿಂದ ವಜಾಗೊಳಿಸದೇ ಇರುವ ಬಿಜೆಪಿಯ ಭಂಡತನ ಕ್ರಮಗಳು ಅಕ್ಷಮ್ಯವಾಗಿವೆ. ಈಗಲಾದರೂ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು, ಇದೇ ಸಂದರ್ಭದಲ್ಲಿ ಇಂತಹ ಹಲವಾರು ತಿಮಿಂಗಲಗಳು ಬಿಜೆಪಿ ಆಶ್ರಯದಲ್ಲಿದ್ದು ಅವರ ಮೇಲೂ ಕ್ರಮ ಜರುಗಿಸಬೇಕು.

ಚಾಗನೂರು, ಸಿರಿವಾರ: ವಿಮಾನ ನಿಲ್ದಾಣ ಬೇಡ

ಬಳ್ಳಾರಿ ನಗರದ ಬಳಿಯ ಚಾಗನೂರು - ಸಿರಿವಾರದಲ್ಲಿ ವಿಮಾನ ನಿಲ್ದಾಣಕ್ಕಾಗಿ ನೀರಾವರಿ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಸೆಕ್ಷನ್ 144 ಜಾರಿಗೆ ತಂದು ಸಾವಿರಾರು ಪೋಲೀಸರನ್ನೂ ಈ ಗ್ರಾಮಕ್ಕೆ ನುಗ್ಗಿಸಿ ಜನರನ್ನು ಭಯಭೀತಗೊಳಿಸುತ್ತಿರುವುದನ್ನು ಹಾಗೂ ಈ ಗ್ರಾಮಗಳ ರೈತರನ್ನು ಬಂಧಿಸಿರುವುದನ್ನು ಸಿಪಿಐ(ಎಂ) ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ಇದು ಸಾಮಾನ್ಯ ರೈತರ ದಮನದ ಪಾಶವೀ ಕೃತ್ಯವಾಗಿದ್ದು, ಸೆಕ್ಷನ್ 144 ಜಾರಿ ಹಾಗೂ ಪೋಲಿಸರನ್ನು ಹಿಂತೆಗೆದುಕೊಳ್ಳಬೇಕೆಂದು ಬಂಧಿತರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ರಾಜ್ಯ ಸರ್ಕಾರ ರೆಡ್ಡಿ ಗಣಿ ಮಾಫಿಯಾಕ್ಕೆ ಡೊಗ್ಗಾಯಿಸಿ ದೀರ್ಘ ಕಾಲದಿಂದ ದೃಢವಾಗಿ ಹೋರಾಡುತ್ತಿರುವ ರೈತ ಹೋರಾಟಗಾರರನ್ನು ಜೈಲಿಗೆ ಕಳುಹಿಸಲು ನೂರೆಂಟು ಸುಳ್ಳು ಪ್ರಚಾರ ಹಾಗೂ ಮೊಕದ್ದಮೆಗಳನ್ನು ಸೃಷ್ಟಿಸುವ ಒಳ ಸಂಚು ನಡೆಸುತ್ತಿದೆ. ಇದನ್ನು ಕೂಡಲೇ ಕೈಬಿಡಬೇಕು ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ನೀರಾವರಿ ಭೂಮಿಯನ್ನು ಒಣಭೂಮಿಯೆಂದು ಸುಳ್ಳು ಹೇಳಿ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಳ್ಳುವುದನ್ನು ಕೈಬಿಡಬೇಕೆಂದು, ಭೂಸ್ವಾಧೀನ ನೋಟಿಸ್‌ಗಳನ್ನು ಹಿಂದೆಗೆದು ಕೊಳ್ಳಬೇಕೆಂದು ಹಾಗೂ ಭೂ ಸಮೀಕ್ಷೆ ಕಾರ್ಯವನ್ನೂ ಕೈ ಬಿಡಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಬಂಧನದ ಸುದ್ದಿ ತಿಳಿದ ಕೂಡಲೇ ಬಳ್ಳಾರಿ ಜಿಲ್ಲೆಯಾದ್ಯಂತ ಸಿಪಿಐ(ಎಂ) ನೇತೃತ್ವದಲ್ಲಿ ಸ್ವಯಂ ಸ್ಫೂರ್ತಿಯ ಪ್ರತಿಭಟನೆಗಳು ನಡೆದಿವೆ. ಪ್ರಾಂತ ರೈತ ಸಂಘ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಇಂದೇ ಪ್ರತಿಭಟನೆ ಸಂಘಟಿಸಿದೆ.

ರಾಜ್ಯ ಸರ್ಕಾರ ರೈತರ ದಮನವನ್ನು ಕೈಬಿಡದಿದ್ದರೆ ಇತರ ಪ್ರಜಾಸತ್ತಾತ್ಮಕ ಶಕ್ತಿಗಳೊಡನೆ ರಾಜ್ಯಾದ್ಯಂತ ಪ್ರತಿಭಟನೆ ಕೈಗೊಳ್ಳಬೇಕಾಗುತ್ತದೆ ಎಂದು ಸಿಪಿಐ(ಎಂ) ಎಚ್ಚರಿಸಿದೆ.

ಜಗದಗಲ

ಶರತ್‌ಚಂದ್ರ

ಕೊಪನ್‌ಹೆಗನ್‌ನಲ್ಲಿ ಕ್ಯೋಟೋ ಒಪ್ಪಂದ ಒಡೆಯಲು ಹುನ್ನಾರ

ಕೊಪನ್ ಹೆಗನ್ ನಲ್ಲಿ ಹವಾಮಾನ ಬದಲಾವಣೆ ತಡೆಯುವ ಜಾಗತಿಕ ಕ್ರಮಗಳ ಬಗ್ಗೆ ಒಪ್ಪಂದಕ್ಕೆ ಬರಲು ಚಾರಿತ್ರಿಕ ಶೃಂಗಸಭೆ ಆರಂಭವಾಗಿದೆ. ಇದು 1990 ರ ದಶಕದಲ್ಲಿ ಆದ ಕ್ಯೋಟೋ ಜಾಗತಿಕ ಒಪ್ಪಂದ ಮುಂದುವರಿಸುವ ಮತ್ತು ವಿಸ್ತರಿಸುವ, ಜಾಗತಿಕ ತಾಪಮಾನ 2 ಡಿಗ್ರಿಗಿಂತ ಹೆಚ್ಚಿದರೆ ಆಗಬಹುದಾದ ಪ್ರಕೋಪ ತಡೆಯುವ ಕ್ರಮಗಳನ್ನು ತೆಗೆದುಕೊಳ್ಳುವ, ಮನುಕುಲ ಉಳಿಸುವ ಉದ್ದೇಶ ಹೊಂದಿರುವ ಮಹತ್ವದ ಸಭೆ. ಆದರೆ ಶ್ರೀಮಂತ ದೇಶಗಳ ನಾಯಕರು ತಮ್ಮ ಜವಾಬ್ದಾರಿಯನ್ನು ಅರಿತು ಒಪ್ಪಂದದ ಯಶಸ್ಸಿಗೆ ಕೈಗೂಡಿಸುವಲ್ಲಿ ಹಿಂದೇಟು ಹೊಡೆಯುತ್ತಿದ್ದಾರೆ, ಮಾತ್ರವಲ್ಲ ಇದನ್ನು ಬಳಸಿ ಬಡ ದೇಶಗಳನ್ನು ಇನ್ನಷ್ಟು ಹಿಂಡುವುದರಲ್ಲಿ ತೊಡಗಿದ್ದಾರೆ. ಕ್ಯೋಟೋ ಒಪ್ಪಂದಕ್ಕೆ ಅಮೆರಿಕ ಸಹಿ ಹಾಕದೆ ಜಾರಿ ಮಾಡದೆ ಹವಾಮಾನ ಬದಲಾವಣೆ ಸಮಸ್ಯೆ ವಿಕೋಪಕ್ಕೆ ಹೋಗುವುದಕ್ಕೆ ಕಾರಣವಾಗಿದೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಒಬಾಮಾ ಅಧ್ಯಕ್ಷರಾದ ಮೇಲೂ ಅದರ ನೀತಿಯಲ್ಲಿ ಭಾರೀ ಬದಲಾವಣೆ ಏನೂ ಆಗಿಲ್ಲ.

ಕೊಪನ್ ಹೆಗನ್ ನಲ್ಲಿ ಸಭೆ ಆರಂಭವಾಗುತ್ತಿದ್ದಂತೆ ಶ್ರೀಮಂತ ದೇಶಗಳು ಗುಟ್ಟಾಗಿ ತಯಾರಿಸಿರುವ ತಮ್ಮದೇ ಪ್ರತ್ಯೇಕ ಕರಡು ಒಪ್ಪಂದ ಮಂಡಿಸಿ, ಸಭೆಯ ಮುಂದಿರುವ ಅಧಿಕೃತ ಕರಡನ್ನು ತಳ್ಳಿ ಹಾಕುವ ಹುನ್ನಾರ ನಡೆಸಿದ್ದಾರೆ ಎಂಬ ಸುದ್ದಿ ಹರಡಿದೆ. 'ಡ್ಯಾನಿಷ್ ಕರಡು' ಎಂದು ಕರೆಯಲಾಗುತ್ತಿರುವ ಇದನ್ನು ಬ್ರಿಟನ್, ಅಮೆರಿಕ ಮತ್ತು ಡೆನ್ಮಾರ್ಕ್ ತಯಾರಿಸಿ ಕೆಲವೇ ದೇಶಗಳ ಜತೆ ಚರ್ಚಿಸಿದೆ ಎನ್ನಲಾಗಿದೆ. ಕ್ಯೋಟೋ ಒಪ್ಪಂದ ಮತ್ತು ಈ ಸಭೆಯ ಮುಂದಿರುವ ಕರಡಿನ ಮುಖ್ಯ ಅಂಶಗಳನ್ನು 'ಡ್ಯಾನಿಷ್ ಕರಡು' ತಳ್ಳಿ ಹಾಕುತ್ತದೆ.

ಚಾರಿತ್ರಿಕವಾಗಿ ತಾಪಮಾನ ಏರಿಕೆಗೆ ಕಾರಣವಾದ್ದು ಶ್ರೀಮಂತ ದೇಶಗಳ ಹಲವು ದಶಕಗಳ ಕೈಗಾರಿಕಾ ಬೆಳವಣಿಗೆಯಿಂದ ಉಂಟಾದ ಅನಿಲಗಳ ಪ್ರಮಾಣ ಹೆಚ್ಚುವಿಕೆಯಿಂದ. ಈಗಲೂ ಅವುಗಳ ಅನಿಲಗಳ ಪ್ರಮಾಣ ಹೆಚ್ಚು. ಆದ್ದರಿಂದ ಅವು ಹೆಚ್ಚಿನ ಕಡಿತದ ಜವಾಬ್ದಾರಿ ಮತ್ತು ಪ್ರತಿ ಕ್ರಮಗಳ ವೆಚ್ಚದ ಹೆಚ್ಚಿನ ಭಾರ ಹೊರಬೇಕು. ಕಾನೂನು ಬದ್ಧವಾಗಿ ಅನಿಲಗಳ ಕಡಿತದ ಬಾಧ್ಯತೆ ಹೊರಬೇಕು. ಇಂತಹ ಪ್ರತಿಕ್ರಮಗಳನ್ನು ಒಳಗೊಂಡಿರುವ ತಂತ್ರಜ್ಞಾನವನ್ನು



ಸುಲಭ ಬೆಲೆಯಲ್ಲಿ ಅಥವಾ ಉಚಿತವಾಗಿ ಬಡ ದೇಶಗಳಿಗೆ ಒದಗಿಸಬೇಕು. ಬೆಳವಣಿಗೆಯ ಆರಂಭದ ಹಂತದಲ್ಲಿರುವ ಬಡ ದೇಶಗಳ ಮೇಲೆ ಅನಿಲಗಳ ಕಡಿತದ ಕಾನೂನು ಬದ್ಧ ಬಾಧ್ಯತೆ ಹೊರಿಸಬಾರದು - ಅವುಗಳಲ್ಲಿ ಮುಖ್ಯವಾದ್ದು.

ಕ್ಯೋಟೋ ಒಪ್ಪಂದ ಸಹ ಈ ನೀತಿಗಳ ಮೇಲೆ ಆಧಾರಿತವಾಗಿದೆ. ಇವೆಲ್ಲವನ್ನು 'ಡ್ಯಾನಿಷ್ ಕರಡು' ಉಲ್ಲಂಘಿಸುವ ಮೂಲಕ ಕ್ಯೋಟೋ ಒಪ್ಪಂದ ಒಡೆಯಲು ಸಿದ್ಧತೆ ನಡೆಸಿದೆ. ವಿಶ್ವಸಂಸ್ಥೆಯ ಬದಲು ವಿಶ್ವ ಬ್ಯಾಂಕನ್ನು, ಒಪ್ಪಂದ ಜಾರಿ ಮತ್ತು ಹಣ ನಿರ್ವಹಣೆಯ ಮುಖ್ಯ ಸಂಸ್ಥೆ ಮಾಡುವ; ಹೊಸ ತಂತ್ರಜ್ಞಾನ ಮತ್ತು ಧನ ಸಹಾಯಕ್ಕೆ ಬಡ ದೇಶಗಳ ಮೇಲೆ ಅನಿಲಗಳ ಕಡಿತದ ಕಾನೂನು ಬದ್ಧ ಬಾಧ್ಯತೆಯ ಷರತ್ತು ಹಾಕುವ; ಬಡ ದೇಶ[illegible] ಅನಿಲಗಳ ಕಡಿತವನ್ನು ಶ್ರೀಮಂತ ದೇಶಗಳದ್ದಕ್ಕಿಂತಲೂ ಹೆಚ್ಚಿಸುವ; ಬಡ ದೇಶಗಳನ್ನು ಹಲವು ವರ್ಗೀಕರಣಗಳ ಮೂಲಕ ಒಡೆಯುವ - ಇಂತಹ ಹಲವು ಅಪಾಯಕಾರಿ ಪ್ರಸ್ತಾವಗಳನ್ನು 'ಡ್ಯಾನಿಷ್ ಕರಡು' ಹೊಂದಿದೆ.

ಸಭೆಯಲ್ಲಿ ಒಪ್ಪಂದದ ಅಧಿಕೃತ ಕರಡಿಗೆ ತೀವ್ರ ಪ್ರತಿರೋಧ ಒಡ್ಡಿ ಯಾವುದೇ ಒಪ್ಪಂದಕ್ಕೆ ಬರದಂತೆ ಮಾಡುವುದು, ಆ ಮೇಲೆ 'ಡ್ಯಾನಿಷ್ ಕರಡ'ನ್ನು ಶೃಂಗಸಭೆಯ ಮುಖ ಉಳಿಸಿಕೊಳ್ಳುವ ಒಂದು ರಾಜಕೀಯ ಹೇಳಿಕೆಯಾಗಿ ಹೊರಡಿಸುವುದು - ಶ್ರೀಮಂತ ದೇಶಗಳ ಪಿತೂರಿ ಎನ್ನಲಾಗಿದೆ. ಚೀನಾ ಇದನ್ನು ತೀವ್ರವಾಗಿ ಪ್ರತಿಭಟಿಸಿದ್ದು ಭಾರತ ಸೇರಿದಂತೆ ಗುಂಪು-77 ದೇಶಗಳ ಇದರ ವಿರುದ್ಧ ಒಗ್ಗಟ್ಟಾಗಿರಬೇಕೆಂದು ಕರೆ ಕೊಟ್ಟಿದೆ. ಭಾ[illegible] ಅಧಿಕೃತವಾಗಿ ಶ್ರೀಮಂತ ದೇಶಗಳ ಹುನ್ನಾರದ ಭಾಗವಾಗಿರದಿದ್ದರೂ, ಸಭೆಯ ಮೊದಲು ದೇಶ[illegible] ನಿಲುವಿನ ಬಗ್ಗೆ ಪರಿಸರ ಮಂತ್ರಿಯ ಹಲವು ತಿಪ್ಪರಲಾಗಗಳು ಅಮೆರಿಕದ ಒತ್ತಡಕ್ಕೆ ಮಣಿದ ಸೂಚನೆ ನೀಡುತ್ತಿವೆ.

ರೋಂನಲ್ಲಿ ಜಗತ್ತಿನ ಗಮನ ಸೆಳೆದ ಬ್ರೆಜಿಲ್‌ನ 'ಶೂನ್ಯ ಹಸಿವು' ಕಾರ್ಯಕ್ರಮ

ಇತ್ತೀಚೆಗೆ ರೋಂನಲ್ಲಿ ನಡೆದ ವಿಶ್ವ ಆಹಾರ ಸಮ್ಮೇಳನದಲ್ಲಿ ಹಲವು ದೇಶಗಳ ಆಹಾರ ಭದ್ರತೆ ಕಾರ್ಯಕ್ರಮಗಳ ಸಫಲತೆ-ವಿಫಲತೆಗಳ ಬಗ್ಗೆ ವಿಶ್ಲೇಷಣೆ ಚರ್ಚೆಗಳು ನಡೆದವು. ಇವುಗಳಲ್ಲಿ ಜಗತ್ತಿನ ಹೆಚ್ಚಿನ ದೇಶಗಳ ಪ್ರತಿನಿಧಿಗಳ ಗಮನ ಸೆಳೆದ ಕಾರ್ಯಕ್ರಮವೆಂದರೆ ಬ್ರೆಜಿಲ್‌ನ 'ಶೂನ್ಯ ಹಸಿವು' ಕಾರ್ಯಕ್ರಮ (ಪ್ರೊಜೆಟೋ ಫೋಂ ಜೀರೋ). 'ಶೂನ್ಯ ಹಸಿವು' ಎಫ್.ಎ.ಒ. (ವಿಶ್ವ ಆಹಾರ ಸಂಸ್ಥೆ) ದ ಅಧಿಕೃತ ಪ್ರಶಂಸೆಗೆ ಪಾತ್ರವಾದ ಮತ್ತು ಹಲವರು ಮೆಚ್ಚಿದ ಕಾರ್ಯಕ್ರಮ. ಇದಕ್ಕೆ ಬ್ರೆಜಿಲ್ ಈ ಕಾರ್ಯಕ್ರಮದ ಮೂಲಕ ಸಾಧಿಸಿದ ಅದ್ಭುತ ಯಶಸ್ಸು ಕಾರಣ.

ಎಫ್.ಎ.ಒ. ಪ್ರಕಾರ 2003 ರಲ್ಲಿ ಆರಂಭವಾದ ಈ ಕಾರ್ಯಕ್ರಮ ಬ್ರೆಜಿಲ್‌ನಲ್ಲಿ ಕಳೆದ ಆರು ವರ್ಷಗಳಲ್ಲಿ ಅಪೌಷ್ಟಿಕತೆಯನ್ನು ಶೇ. 73 ರಷ್ಟು ಕಡಿಮೆ ಮಾಡುವುದರಲ್ಲಿ ಯಶಸ್ವಿಯಾಗಿದೆ. ಅದೇ ಅವಧಿಯಲ್ಲಿ ಶಿಶು ಮರಣ ಪ್ರಮಾಣವನ್ನು ಶೇ. 45 ರಷ್ಟು ಕಡಿಮೆ ಮಾಡಿದೆ. ಬಡತನದ ಪ್ರಮಾಣವನ್ನು ಶೇ. 28 ರಿಂದ ಶೇ. 16 ಕ್ಕೆ ಇಳಿಸಿದೆ. ಸುಮಾರು 2 ಕೋಟಿ ಜನ ಬಡತನದ ರೇಖೆಗಿಂತ ಮೇಲೆ ಬಂದಿದ್ದಾರೆ. 85 ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ. ಕನಿಷ್ಠ ವೇತನವನ್ನು ಏರಿಸಲಾಗಿದೆ. ಈ ಸಮ್ಮೇಳನದಿಂದ ಮರಳಿದಾಗ ಎಲ್ಲಾ ದೇಶದ ಅಧ್ಯಕ್ಷರು ಅಥವಾ ಪ್ರಧಾನಿಗಳು ತಮ್ಮದೇ 'ಶೂನ್ಯ ಹಸಿವು' ಕಾರ್ಯಕ್ರಮ ಜಾರಿಗೆ ತರುತ್ತಾರೆ ಮತ್ತು ಈ ಬಗ್ಗೆ ಇತರ ದೇಶಗಳಿಗೆ ನೆರವಾಗುತ್ತಾರೆ ಎಂದು ಎಫ್.ಎ.ಒ. ಮಾಜಿ ಆಪರೇಷನಲ್ ಡೈರೆಕ್ಟರ್ ಆಶಿಸಿದರು. ರಾಜಕೀಯ ಇಚ್ಛೆ ಇದ್ದರೆ ಪ್ರಮುಖ ಸಾಮಾಜಿಕ ಉದ್ದೇಶಗಳನ್ನು ಈಡೇರಿಸುವುದು ಸಾಧ್ಯ ಎಂಬುದರ ಬಗ್ಗೆ ಅವರು ವಿಶ್ವ ನಾಯಕರ ಗಮನ ಸೆಳೆದಿದ್ದಾರೆ.

ಪ್ರಮುಖವಾಗಿ ಆಹಾರ ಭದ್ರತೆಗೆ ಸಮಗ್ರ ಕಾರ್ಯಕ್ರಮವಾದ 'ಶೂನ್ಯ ಹಸಿವು' ನಾಲ್ಕು ಆಯಾಮಗಳನ್ನು ಹೊಂದಿರುವ ಹಲವು ಕಾರ್ಯಕ್ರಮಗಳ ಸಮಾಗಮ. ಹಸಿವು ತಡೆಯಲು ತುರ್ತು ಕ್ರಮಗಳು, ಬಡವರ ಆದಾಯ ಹೆಚ್ಚಿಸಲು ನೀತಿ-ಕ್ರಮಗಳು, ಆಹಾರದ ಬೆಲೆ ಇಳಿಸಲು ನೀತಿ-ಕ್ರಮಗಳು, ಆಹಾರ ಉತ್ಪಾದನೆ ಹೆಚ್ಚಿಸಲು ನೀತಿ-ಕ್ರಮಗಳು - ಇವೇ ಆ ನಾಲ್ಕು ಆಯಾಮಗಳು. ತುರ್ತು ಕ್ರಮಗಳಲ್ಲಿ ಆಹಾರ ಕೂಪನ್ ಗಳು, ಶಾಲಾ ಮಕ್ಕಳ ಉಚಿತ ಊಟ ಇತ್ಯಾದಿ ಸೇರಿವೆ. ಇತರ ಕ್ರಮಗಳಲ್ಲಿ - ಭೂಸುಧಾರಣೆ, ಆಹಾರ ಕೃಷಿಗೆ ಉತ್ತೇಜನ ನೀಡುವ ನೀತಿಗಳು, ಉದ್ಯೋಗ ಸೃಷ್ಟಿ, ಕನಿಷ್ಟ ವೇತನ ಹೆಚ್ಚಿಸುವ ನೀತಿಗಳು - ಸೇರಿವೆ.

'ಫ್ಯಾಮಿಲಿ ಪರ್ಸ್' ಎಂಬ ವಿಶಿಷ್ಟ ಕಾರ್ಯಕ್ರಮ ಪ್ರತೀ ಬಡ ಕುಟುಂಬಕ್ಕೆ ಪ್ರತೀ ತಿಂಗಳು 55 ಡಾಲರುಗಳನ್ನು ಕೊಡುತ್ತದೆ. ಮಕ್ಕಳು ಸ್ಕೂಲಿಗೆ ಹೋಗಬೇಕು. ವಯಸ್ಕರು ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಬೇಕು ಎಂಬುದಷ್ಟೇ ಶರತ್ತು. ಬ್ರೆಜಿಲ್ ನ ಒಂದು ಕಾಲು ಕೋಟಿ ಬಡ ಕುಟುಂಬಗಳು (ಆ ದೇಶದ ಕಾಲು ಭಾಗ ಜನರನ್ನು ಒಳಗೊಳ್ಳುವ) ಈ ಕಾರ್ಯಕ್ರಮದ ಪ್ರಯೋಜನ ಪಡೆದಿವೆ. 3.7 ಕೋಟಿ ಶಾಲಾ ಮಕ್ಕಳು ಉಚಿತ ಊಟ ಪಡೆಯುತ್ತಿದ್ದಾರೆ.

ಎಫ್.ಎ.ಒ. 'ಫ್ಯಾಮಿಲಿ ಪರ್ಸ್' ಮತ್ತು 'ಶೂನ್ಯ ಹಸಿವು' ಕಾರ್ಯಕ್ರಮವನ್ನು ಲ್ಯಾಟಿನ್ ಅಮೆರಿಕ ಮತ್ತು ಆಫ್ರಿಕಾದ ಬಡ ದೇಶಗಳಿಗೆ ಮಾದರಿ ಕಾರ್ಯಕ್ರಮ ಎಂದು ಪ್ರಚಾರ ಮಾಡುತ್ತಿದೆ. 'ಶೂನ್ಯ ಹಸಿವು' ಬ್ರೆಜಿಲ್‌ನಂತಹ ದೊಡ್ಡ ದೇಶದಲ್ಲಿ ಹಸಿವಿನ ವಿರುದ್ಧ ಹೋರಾಟದಲ್ಲಿ ಗಮನಾರ್ಹ ಯಶಸ್ಸು ಕಂಡಿದೆ ಎಂಬುದು ನಿಜ. ಆದರೆ ಅದು ವೆನೆಜುವೇಲಾದ ಆಹಾರ ಭದ್ರತೆ ಕಾರ್ಯಕ್ರಮದಷ್ಟು (ವಿವರಗಳಿಗೆ ಜನಶಕ್ತಿ ನವಂಬರ್ 29 ನೋಡಿ) ಸಮಗ್ರವಾದ ಮತ್ತು ಮೂಲಭೂತ ಬದಲಾವಣೆ ತರಬಯಸುವ ಕಾರ್ಯಕ್ರಮ ಅಲ್ಲ. ಆದ್ದರಿಂದಲೇ ಏನೋ ಎಫ್.ಎ.ಒ. ವೆನೆಜುವೇಲಾ ಮಾದರಿ ಬದಲು ಬ್ರೆಜಿಲ್ ಮಾದರಿ ಎತ್ತಿ ಹಿಡಿಯುತ್ತಿದೆ.

0ರ ದಶಕದಲ್ಲಿ ಸಮಾಜವಾದಿ ಸೋವಿಯತ್ ಒಕ್ಕೂಟ ಪತನವಾದ ನಂತರ ಜಗತ್ತಿನಲ್ಲಿ ಅಮೆರಿಕದ ಾರಮ್ಯವನ್ನು ಪ್ರಶ್ನಿಸುವವರೇ ಇಲ್ಲದಂತಾಗಿತ್ತು. ವ್ಯಾಪಾರ, ವಾಣಿಜ್ಯ ಮುಂತಾದ ಆರ್ಥಿಕ ವಿಚಾರಗಳಲ್ಲೂ ನಿಕ ಮಿಲಿಟರಿ ಶಕ್ತಿಗಳಲ್ಲೂ ಅಮೆರಿಕಕ್ಕೆ ಸೆಡ್ಡು ಹೊಡೆಯುವ ಶಕ್ತಿಗಳೇ ಇಲ್ಲದಂತಾಗಿ ಅಮೆರಿಕವೇ ಜಗತ್ತಿನ ರಿಯಣ್ಣನಂತೆ, ಜಾಗತಿಕ ಪೊಲೀಸಿನಂತೆ ವರ್ತಿಸುತ್ತಿತ್ತು. ಇಡೀ ಜಗತ್ತಿನ ಮೇಲೆ ಜನರ ಜೀವ ಹಿಂಡುವ ಮ್ರಾಜ್ಯಶಾಹಿ ಜಾಗತೀಕರಣದ ನೀತಿಗಳನ್ನು ಹೇರುವುದು ಅಮೆರಿಕಕ್ಕೆ ಬಹು ಸುಲಭವಾಗಿತ್ತು. ಆದರೆ ತ್ತೀಚಿನ ಅಂತರರಾಷ್ಟ್ರೀಯ ಬೆಳವಣಿಗೆಗಳು, ಅದರಲ್ಲೂ ಅಮೆರಿಕದಲ್ಲಿ ಉಂಟಾದ ತೀವ್ರ ಆರ್ಥಿಕ ಬಿಕ್ಕಟ್ಟು ರಿಸ್ಥಿತಿಯನ್ನು ತೀವ್ರವಾಗಿ ಬದಲಿಸುವ ಲಕ್ಷಣಗಳು ಎದ್ದು ಕಾಣುತ್ತಿವೆ.

ನೆಲ ಕಚ್ಚುತ್ತಿರುವ ಡಾಲರ್ ಯಜಮಾನಿಕೆ

ಮೇರಿಕಾ ಸಾಮ್ರಾಜ್ಯಶಾಹಿಯು ತನ್ನ ಜಮಾನಿಕೆಯನ್ನು ವಿಶ್ವದಾದ್ಯಂತ ಹೇರುತ್ತಿರುವುಕ್ಕೆ ಮುಖವಾಗಿ ಆ ದೇಶದ ಡಾಲರ್ ಕರೆನ್ಸಿಯು ರಣವಾಗಿದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ್ಯಾಪಾರ ಮತ್ತು ಆರ್ಥಿಕ ವ್ಯವಹಾರಗಳ ಡುಕೊಳ್ಳುವಿಕೆಯಲ್ಲಿ ಅಮೇರಿಕಾದ ಕರೆನ್ಸಿ ಲರ್'ಗೆ ಬಹಳ ತೂಕವನ್ನು ಕಲ್ಪಿಸಲಾಗಿದೆ. ಲ್ಲದೆ, ವಿಶ್ವದಾದ್ಯಂತ ಹಲವು ದೇಶಗಳು ಈ ರ್‌ನ್ನು ಸಂಪತ್ತಿನ ಕರೆನ್ಸಿಯಾಗಿ ಟ್ಟುಕೊಳ್ಳುತ್ತವೆ. ಅಂತರಾಷ್ಟ್ರೀಯ ರುಕಟ್ಟೆಯಲ್ಲಿ ಯಾವುದೇ ದೇಶ ಏನಾದರೂ ಳ್ಳಬೇಕಾದಲ್ಲಿ ಅದು ಡಾಲರ್ ಟ್ಟುಕೊಂಡಿರಬೇಕು. ಇದಕ್ಕಾಗಿ ಹಲವು ದೇಶಗಳು ಕದಾಡುತ್ತಾ ಡಾಲರ್ ಸಂಗ್ರಹಿಸಿಟ್ಟುಕೊಳ್ಳುತ್ತವೆ. ದರಿಂದಾಗಿ ಅಮೇರಿಕಾ ಏನೂ ತ್ಪಾದಿಸದಿದ್ದರೂ, ಸುಮ್ಮನೆ ಡಾಲರ್ ಪ್ರಿಂಟ್ ಡುತ್ತಾ ಕುಳಿತಿತ್ತು. ಅಮೇರಿಕಾದ ವ್ಯಾಪಾರ ರತೆಯು (ಅಂದರೆ ಆ ದೇಶದ ರಫ್ತು ಮತ್ತು ದುಗಳ ಆದಾಯ ಮತ್ತು ವೆಚ್ಚದ ನಡುವಿನ ್ಯಾಸ) ದೊಡ್ಡ ಮಟ್ಟದಲ್ಲಿದ್ದರೂ ಡಾಲರ್ ಜಮಾನಿಕೆಯಿಂದಾಗಿ, ಅಮೇರಿಕಾ ಉಳಿದ ಶಗಳಿಂದ ಅತಿ ಕಡಿಮೆ ಬೆಲೆಗೆ ಆಮದು ಡಿಕೊಳ್ಳುತ್ತಿತ್ತು. ಇದರಿಂದಾಗಿ ಜಾಗತೀಕರಣದ ಯಲ್ಲಿ, ಹೆಚ್ಚಾಗಿ ರಫ್ತು ಮಾಡುವ ರಾಷ್ಟ್ರಗಳ ರ್ಥಿಕವು ಒಂದಷ್ಟು ಬೆಳೆಯಲು ಅಮೇರಿಕಾ ಶ ಮಾಡಿಕೊಟ್ಟಿತ್ತು. ಆದರೆ, ವಿಶ್ವ ಆರ್ಥಿಕ ಟ್ಟಿನಿಂದಾಗಿ ವಿಶ್ವ ಆರ್ಥಿಕ ತಳಪಾಯಕ್ಕೆ ದೊಡ್ಡ ಲು ಎದುರಾಯಿತು. ಡಾಲರಿನ ಯಜಮಾನಿಕೆಗೆ ಟ್ಟು ಬಿದ್ದು, ಅದರ ಮೌಲ್ಯದ ಬಗ್ಗೆ ಆತಂಕ ಮೂಡಿ ದು ಚೀನಾ ಮತ್ತು ಜಪಾನಿನಂತಹ ಡಾಲರ್ ಗ್ರಹಿಸಿಡುವ ರಾಷ್ಟ್ರಗಳು ಮತ್ತು ತೈಲ ರಫ್ತು ಡುವ ರಷ್ಯಾ ಮತ್ತು ಕೊಲ್ಲಿ ರಾಷ್ಟ್ರಗಳು ಡಾಲರನ್ನು ಸಂಗ್ರಹಣೆ ಮಾಡುವುದಕ್ಕಾಗಲಿ ಅಥವಾ ವ್ಯಾಪಾರ ವ್ಯವಹಾರದಲ್ಲಿಯಾಗಲಿ ಏಕೆ ಬಳಸಬೇಕು ಎಂದು ವಿರೋಧ ವ್ಯಕ್ತಪಡಿಸುತ್ತಿವೆ.

ಅಮೇರಿಕಾ ತನ್ನ ಡಾಲರ್ ಕುರಿತು ಉಭಯ ಸಂಕಟದಲ್ಲಿದೆ. ಅದು ಡಾಲರ್‌ನ್ನು ಅಪಮೌಲ್ಯಗೊಳಿಸಿದಲ್ಲಿ ಅಮೇರಿಕಾದ ರಫ್ತು ಹೆಚ್ಚಳಗೊಳ್ಳಲು ಮತ್ತು ವ್ಯಾಪಾರ ಕೊರತೆಯನ್ನು ತಗ್ಗಿಸಲು ಸಹಕಾರಿಯಾಗುತ್ತದೆ. ಆದರೆ, ಡಾಲರಿನ ಅಪವಮೌಲ್ಯವು ಹಾಗೆಯೇ ದೀರ್ಘಾವಧಿ ಮುಂದುವರಿದಲ್ಲಿ, ಡಾಲರಿನ ಬೆಲೆ ಕುಸಿದು ಇತರೆ ದೇಶಗಳಿಗೆ ಡಾಲರ್ ಮೇಲಿರುವ ವಿಶ್ವಾಸ ನಾಶಗೊಂಡು, ಅವು ಪರ್ಯಾಯ ಕರೆನ್ಸಿಯನ್ನು ಹುಡುಕುತ್ತವೆ. ಅಮೇರಿಕಾದ ಮುಂದಿರುವ ಸವಾಲೆಂದರೆ ಡಾಲರಿನ ಪ್ರಾಬಲ್ಯತೆಯನ್ನು ತಗ್ಗಿಸದೆ ವ್ಯಾಪಾರ ಕೊರತೆಯನ್ನು ತಗ್ಗಿಸುವುದು. ಇದರಲ್ಲಿ ಯಶಸ್ವಿಯಾಗಲು ಇರುವ ಮಾರ್ಗವೆಂದರೆ, ಅಮೇರಿಕಾವು ಚೀನಾ ಮತ್ತು ಜಪಾನ್ ದೇಶಗಳು ತಮ್ಮ ಕರೆನ್ಸಿಗಳನ್ನು ಪುನರ್-ಮೌಲ್ಯಗೊಳಿಸುವಂತೆ ಒತ್ತಾಯಿಸುವುದು. ಇದು ಎಂತಹ ವೈರುಧ್ಯಗಳಿಂದ ಕೂಡಿದೆಯೆಂದರೆ, ಪ್ರಧಾನವಾಗಿ ರಫ್ತು ಮಾಡುತ್ತಿರುವ ದೇಶಗಳಿಗೆ ಅಮೇರಿಕಾದ ಮಾರುಕಟ್ಟೆಯ ವ್ಯಾಪ್ತಿ ಕಿರಿದಾದರೆ ಜಾಗತಿಕ ಆರ್ಥಿಕ ಪುನಶ್ಚೇತನಕ್ಕೆ ಪೆಟ್ಟುಬೀಳುತ್ತದೆ.

ಜಾಗತಿಕ ಏರಿಳಿತಗಳ ಅಲೆಯಿಂದ ದೂರವಿರಬೇಕಾದಲ್ಲಿ ಇತರೆ ದೇಶಗಳಿಗಿರುವ ಪರಿಹಾರವೆಂದರೆ ಸಾಮ್ರಾಜ್ಯಶಾಹಿಯ ಹಾದಿಯಿಂದ ಜಾಗತೀಕರಣ ರಫ್ತು-ಮುಖಿ ಬೆಳವಣಿಗೆಯಿಂದ ಹಿಂದೆಸರಿಯುವುದು. ಜೊತೆಗೆ ತಮ್ಮ ದೇಶದೊಳಗಿನ ದುಡಿಯುವ ಜನತೆಯ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಮೂಲಕ ಆಂತರಿಕ ಬೇಡಿಕೆಯನ್ನು ಹೆಚ್ಚಿಸಲು ಸರ್ಕಾರ ಮಧ್ಯಪ್ರವೇಶಿಸಬೇಕು. ಇದು ಬಿಕ್ಕಟ್ಟನ್ನು ಉಂಟುಮಾಡಿರುವ ಜೂಜುಕೋರ ಹಣಕಾಸು ಬಂಡವಾಳವು ಎಲ್ಲೆಯಿಲ್ಲದೆ ಗಡಿಗಳನ್ನು ತೂರಿ



ಹರಿಯುವುದಕ್ಕೆ ಇತಿಶ್ರೀ ಹಾಡುತ್ತದೆ. ಆದರೆ, ಇಡೀ ಜಾಗತಿಕ ಆರ್ಥಿಕವನ್ನು ಬಲಿಷ್ಟಗೊಳ್ಳುವಂತೆ ಪುನರ್ರಚನೆ ಮಾಡಬಲ್ಲ ಈ ಕ್ರಮಗಳಿಗೆ ಅತಿ ದೊಡ್ಡ ತಡೆಗೋಡೆಯಾಗಿ ಅಮೇರಿಕಾದ ಸಾಮ್ರಾಜ್ಯಶಾಹಿಯು ಅಡ್ಡ ನಿಂತಿದೆ.

ಪ್ರಾದೇಶಿಕ ಸಹಕಾರ :

ಹಲವು ದೇಶಗಳು ಪ್ರಾದೇಶಿಕ ಮಟ್ಟದಲ್ಲಿ ಒಂದುಗೂಡುತ್ತಿದ್ದು ಅಮೇರಿಕಾದ ಸಾಮ್ರಾಜ್ಯಶಾಹಿಗೆ ಪರ್ಯಾಯವಾಗಿ ಒಕ್ಕೂಟ ಗಳನ್ನು ರಚಿಸಿಕೊಳ್ಳುತ್ತಿವೆ. ಪ್ರಜಾಸತ್ತಾತ್ಮಕವಾಗಿ ಚುನಾಯಿತಗೊಂಡ ಹೊಂಡುರಾಸ್ ದೇಶದ ಸರ್ಕಾರದ ಮೇಲೆ ಮಿಲಿಟರಿ ಅತಿಕ್ರಮಣ ನಡೆಸಿದಾಗ ಲ್ಯಾಟಿನ್ ಅಮೇರಿಕಾದಲ್ಲಿ ಬ್ರೆಜಿಲ್, ವೆನಿಜುವೆಲಾ, ಇತ್ಯಾದಿ ರಾಷ್ಟ್ರಗಳು ಹೊಂಡುರಾಸ್ ಪರವಾಗಿ ನಿಂತದ್ದು ಇದಕ್ಕೆ ಉದಾಹರಣೆ. ಆಗ್ನೇಯಾ ಏಷ್ಯಾದಲ್ಲಿ 10 ರಾಷ್ಟ್ರಗಳು ಒಡಗೂಡಿ ಏಷಿಯಾನ್ ಒಕ್ಕೂಟವನ್ನು ರಚಿಸಿ ದಾಪುಗಾಲಿಡುತ್ತಿವೆ. ಹಾಗೆಯೇ ಷಾಂಘೈ ಸಹಕಾರ ಸಂಘಟನೆಯು ನಿಧಾನವಾಗಿ ಬೆಳೆಯುತ್ತಿದೆ. ಬ್ರೆಜಿಲ್, ರಷ್ಯಾ, ಭಾರತ ಮತ್ತು ಚೀನಾ ದೇಶಗಳು ಒಂದುಗೂಡಿ ವೇದಿಕೆ ರಚಿಸಿರುವುದು ಒಂದಷ್ಟು ವೇಗ ಪಡಕೊಂಡಿದೆ. ಈಶಾನ್ಯ ಏಷ್ಯಾ ಆರ್ಥಿಕ ಸಮುದಾಯವೊಂದನ್ನು ಸ್ಥಾಪಿಸಲು ಚೀನಾವು ಜಪಾನ್ ಮತ್ತು ದಕ್ಷಿಣ ಕೊರಿಯಾದೊಂದಿಗೆ ತ್ರಿಪಕ್ಷೀಯ ಸಭೆ ಏರ್ಪಡಿಸಿತ್ತು. ಹೀಗೆ ಭದ್ರತೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಅಂತಹ ವೇದಿಕೆ ಸೇರಲು ರಾಷ್ಟ್ರಗಳು ಹಾತೊರೆಯುತ್ತಿವೆ.

ಹತ್ತಾರು ದೇಶಗಳನ್ನೊಳಗೊಂಡ ಬಹುಪಕ್ಷೀಯ ವೇದಿಕೆಗಳಲ್ಲಿ ತನಗೆ ಬೇಕಾದದ್ದನ್ನು ಸಾಧಿಸಿಕೊಳ್ಳುವುದು ಅಮೆರಿಕಕ್ಕೆ ದಿನೇ ದಿನೇ ಕಷ್ಟವಾಗುತ್ತಿದೆ. ಹೀಗಾಗಿ ಅಮೆರಿಕ ದೇಶವು ಬಿಡಿ ಬಿಡಿಯಾಗಿ ವಿವಿಧ ದೇಶಗಳೊಂದಿಗೆ ಪ್ರತ್ಯೇಕ ದ್ವಿಪಕ್ಷೀಯ ಒಪ್ಪಂದಗಳಿಗೆ ಮುಂದಾಗುತ್ತಿದೆ. ಜಗತ್ತಿನಲ್ಲಿ ವಿವಿಧ ರೀತಿಯ ದೇಶಗಳ ನಡುವೆ ಪ್ರಾದೇಶಿಕವಾದ ಸಹಕಾರ ಬೆಳೆದು ಬರುತ್ತಿರುವುದು ಅಮೆರಿಕದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತಿದೆ. ಅಷ್ಟು ಮಾತ್ರವಲ್ಲ ಪ್ರಸಕ್ತ ಜಗತ್ತಿನಲ್ಲಿ ಒಂದು ಬಲಾಢ್ಯ ಸೂಪರ್‌ಪವರ್ ದೇಶವಾಗಿ ಅಮೆರಿಕ ಮೆರೆಯುವುದು ಸಾಧ್ಯವಿಲ್ಲ. ಇದು ಅಮೆರಿಕ ಕೇಂದ್ರವಾದ ಏಕದ್ರುವ ಜಗತ್ತು ಈಗ ದಿನೇ ದಿನೇ ಅಸಾಧ್ಯವಾಗುತ್ತಿರುವುದರ ಸಂಕೇತವಾಗಿದೆ. ಜಗತ್ತು ಹಲವು ಶಕ್ತಿ ಕೇಂದ್ರಗಳ ಜಗತ್ತು ಹಲವು ದ್ರುವಗಳ ಕಡೆಗೆ ಚಲಿಸುತ್ತಿವೆ. ದಕ್ಷಿಣ ಏಶ್ಯಾದಲ್ಲಿ ಹಲವುರಾಜಕೀಯ ನಿರ್ಬಂಧಗಳಿಂದಾಗಿ ಹಿಂದುಳಿದಿರುವ ಸಾರ್ಕ್ ದೇಶಗಳ ನಡುವಿನ ಸಹಕಾರವು ಬಲಗೊಳ್ಳಬೇಕಾದ ಅಗತ್ಯ ಇದೆ.

(ಆಧಾರ : ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆಯ ರಾಜಕೀಯ ನಿರ್ಣಯ)

ಾಬ್ರಿ ಮಸೀದಿ ಧ್ವಂಸಕಾರರಿಗೆ ಶಿಕ್ಷೆ....

7 ರಿಂದ

ವಿಶ್ವಾಸಾರ್ಹತೆಯಿಲ್ಲ

ಈ ರೀತಿ ಬಹುದೊಡ್ಡ ಪ್ರಮಾಣದಲ್ಲಿ ನ್ಯಾಯ ಕರಣೆಯಾಗಿರುವುದು ಆಧುನಿಕ ಭಾರತದ ಕೀಯ ವ್ಯವಸ್ಥೆಯ ವಿಶ್ವಾಸಾರ್ಹತೆಯ ಬಗ್ಗೆ ಳಲ್ಲಿ ಯಾವುದೇ ಭರವಸೆಯನ್ನು ಉಂಟು ಡುತ್ತಿಲ್ಲ. ಲಿಬರ್ಹಾನ್ ಆಯೋಗದ ರಸುಗಳ ಮೇಲೆ ಕೈಗೊಳ್ಳುವ ಕ್ರಮಗಳ ರದಲ್ಲಿ ಈ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರದ ಪರೀಕ್ಷೆಯಾಗುತ್ತದೆ. ಸಂಸತ್ತಿನಲ್ಲಿ ಮಂಡಿಸಿದ ಕ್ರಮ ಕೈಗೊಂಡ ವರದಿ(ಎಟಿಆರ್)ಯಂತೂ ಇಂತಹ ಒಂದು ವಿಶ್ವಾಸವನ್ನು ಏನೇನೂ ಮೂಡಿಸುವುದಿಲ್ಲ. ಸರಕಾರ ಈ ಬಗ್ಗೆ ಗಂಭೀರವಾಗಿ ಪುನರಾಲೋಚನೆ ಮಾಡಬೇಕಾಗಿದೆ.

ಆದರೆ ಈ ಹಿಂದೆ ಮೆದು ಹಿಂದುತ್ವವನ್ನು ಅಥವಾ ತೆಳು ಕೇಸರಿಯನ್ನು ಪ್ರದರ್ಶಿಸಿರುವ ಒಂದು ಸರಕಾರದಿಂದ ಇಂತಹ ನಿರೀಕ್ಷೆ ಇಟ್ಟುಕೊಳ್ಳವುದು ಸಾಧ್ಯವೇ ಎಂಬ ಪ್ರಶ್ನೆಯೂ ಏಳುತ್ತದೆ. ಬಾಬ್ರಿ ಮಸೀದಿಯ ಬೀಗ ತೆಗೆಸಿದ್ದು, ರಾಜೀವ ಗಾಂಧಿ ಶಿಲಾನ್ಯಾಸದೊಂದಿಗೆ ತನ್ನ ಚುನಾವಣಾ ಪ್ರಚಾರ ಆರಂಭಿಸಿದ್ದು, ಶಾಬಾನೊ ಕೇಸಿನಲ್ಲಿ ಮುಸ್ಲಿಂ ಮೂಲಭೂತವಾದಿಗಳನ್ನು ಸಂತುಷ್ಟಗೊಳಿಸುವ ಸ್ಪಷ್ಟ ಪ್ರಯತ್ನ ಮುಂತಾದುವೆಲ್ಲಾ ಹಿಂದುತ್ವ ಕೋಮುವಾದಕ್ಕೆ ಕಾನೂನುಬದ್ಧತೆ ಕೊಡುವಲ್ಲಿ ಮತ್ತು ಹೆಚ್ಚಿನ ವಿಶ್ವಾಸಾರ್ಹತೆಯನ್ನು ಕೊಡಮಾಡಿಸುವಲ್ಲಿ ನೆರವಾಯಿತು. ಕಾಂಗ್ರೆಸ್ ಮತ್ತು ಯುಪಿಎ ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ನಿಸ್ಸಂದಿಗ್ಧವಾಗಿ, ಯಾವುದೇ ರಾಜಿಗೊಳಪಡದೆ ಎತ್ತಿ ಹಿಡಿಯಬೇಕಾದರೆ ಇವೆಲ್ಲಾ ಈಗ ಬದಲಾಗಲೇಬೇಕು.

ವಾಸ್ತವವಾಗಿ, ಆಧುನಿಕ ಭಾರತದ ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರ ಸ್ವರೂಪವನ್ನು ಬದಲಿಸಿ ಅದನ್ನೊಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ'ವಾಗಿಸುವುದನ್ನೇ ತಮ್ಮ ಗುರಿಯಗಿಸಿಕೊಂಡಿರುವ ಈ ಬಾಬ್ರಿ ಮಸೀದಿ ಧ್ವಂಸಕಾರರಿಗೆ ಶಿಕ್ಷೆಯಾಗುವಂತೆ ಭಾರತದ ಜನತೆ ಐಕ್ಯತೆಯಿಂದ ಎದ್ದು ನಿಲ್ಲಬೇಕು.



ಪಾ: ಖಾಯಿಲೆ ಪೀಡಿತ ಬಾಲಕನ ಕಥೆಯೊಂದಿಗೆ ಬೆಸೆದ ರಾಜಕೀಯ ನೈತಿಕತೆಯ ಪಾಠ

'ಪ್ರೊಜೆರಿಯಾ'. ಇದು ದೇಹವನ್ನು ಇರುವ ವಯಸ್ಸಿಗಿಂತ ಐದು ಪಟ್ಟು ಹೆಚ್ಚು ವಯಸ್ಸಾದಂತೆ ಅಕಾಲ ಮುಪ್ಪಿಗೆ ಈಡು ಮಾಡುವ ಕಾಯಿಲೆ. ಬಹಳ ಅಪರೂಪದ ಖಾಯಿಲೆ. ಪ್ರಪಂಚದಾದ್ಯಂತ ಕೇವಲ ಬೆರಳೆಣಿಕೆಯಷ್ಟೇ ಪ್ರಕರಣಗಳು ಕಂಡುಬರುವುದು. ಈ ಮಕ್ಕಳು 15-20 ವರ್ಷಗಳಿಗಿಂತ ಹೆಚ್ಚು ಬದುಕಲಾರರು. ಇಂತಹ ಖಾಯಿಲೆಗೆ ತುತ್ತಾದ ಬಾಲಕನೊಬ್ಬನ ಕಥೆಯೇ 'ಪಾ'.

ಮಕ್ಕಳ ಬಗೆಗಿನ ನೈಜ ಕಾಳಜಿಯೊಂದಿಗೆ ಅಮೀರ್ ಖಾನ್ 'ತಾರೆ ಜಮೀನ್ ಪರ್' ಚಿತ್ರದ ಮುಖಾಂತರ ಗಮನ ಸೆಳೆದ ನಂತರ ಅಮಿತಾಬ್ ಕುಟುಂಬ ತಮ್ಮ ಅಮಿತಾಬ್ ಬಚ್ಚನ್ ಕಾರ್ಪೊರೇಷನ್ ನಿರ್ಮಾಣದ ಮುಖಾಂತರ ಅಂತಹದ್ದೇ ಪರಿಣಾಮಕಾರಿಯಾದ ಚಿತ್ರ 'ಪಾ' ದಿಂದ ಮನಸೆಳೆಯುತ್ತಾರೆ. ಸ್ವತಃ ಅಮಿತಾಬ್ ಪ್ರೊಜೆರಿಯಾಗೆ ತುತ್ತಾದ ಬಾಲಕನ ಪಾತ್ರದಲ್ಲಿ ಹಿಂದೆಂದೂ ಕಾಣದ ಅವತಾರದಲ್ಲಿ ನೋಡುಗರಲ್ಲಿ ದಿಗ್ಭ್ರಮೆ ಮೂಡಿಸುತ್ತಾರೆ.

'ಆರೋ' ಪ್ರೊಜೆರಿಯಾ ಖಾಯಿಲೆ ಪೀಡಿತ ಬಾಲಕ. ತನ್ನ ತಾಯಿ(ವಿದ್ಯಾ ಬಾಲನ್) ಮತ್ತು ಅಜ್ಜಿ(ಅರುಂಧತಿ ನಾಗ್)ಯೊಂದಿಗೆ ವಾಸವಿರುತ್ತಾನೆ. ಶಾಲೆಯ ಸಮಾರಂಭವೊಂದರಲ್ಲಿ ಈ ಬಾಲಕನನ್ನು ಕಂಡ ಸಂಸದ ಅಮುಲ್(ಅಭಿಷೇಕ್ ಬಚನ್) ಆತನ ಬಗ್ಗೆ ಕಾಳಜಿ ವಹಿಸುತ್ತಾನೆ. ಆರೋ ಕೂಡಾ ಆತನನ್ನು ಮೆಚ್ಚಿ ಆತನೊಂದಿಗೆ ಇಂಟರ್‌ನೆಟ್ ಮುಖಾಂತರ ಮುಖಾಮುಖಿಯಾಗುವುದು, ಹರಟೆ ಹೊಡೆಯುವುದು ಮಾಡುತ್ತಿರುತ್ತಾನೆ. ವೈಚಿತ್ರ್ಯವೆಂದರೆ ಆತನೇ ಆರೋವಿನ ತಂದೆಯಾಗಿರುತ್ತಾನೆ!

ಅಮುಲ್ ಮಹತ್ವಾಕಾಂಕ್ಷೆಯುಳ್ಳ ಯುವಕ. ರಾಜಕೀಯ ಪ್ರವೇಶಿಸಬೇಕು, ಪ್ರಾಮಾಣಿಕನಾಗಿ, ಜನಪರ ಕಾಳಜಿಯುಳ್ಳವನಾಗಿ ಕಾರ್ಯ ನಿರ್ವಹಿಬೇಕು, ರಾಜಕೀಯದ ಬಗ್ಗೆ ಸಾಮಾನ್ಯರಿಗಿರುವ ಕೆಟ್ಟ ಭಾವನೆಯನ್ನು



ಹೋಗಲಾಡಿಸಬೇಕೆಂಬುದು ಅವನ ಆಸೆ. ಇಂತಹ ಸಂದರ್ಭದಲ್ಲೇ ವಿದ್ಯಾಳ ಪರಿಚಯವಾಗುತ್ತದೆ. ಪರಿಚಯವೇ ಸ್ನೇಹ, ಪ್ರೇಮವಾಗಿ ಆಕೆ ಗರ್ಭಿಣಿಯಾಗುತ್ತಾಳೆ. ಆದರೆ ಅಮುಲ್ ತನ್ನ ಆಸೆಗಳನ್ನು ಈಡೇರಿಸಿಕೊಳ್ಳಲು ಇದು ಅಡ್ಡಗಾಲಾಗಬಹುದೆಂದು, ಸದ್ಯಕ್ಕೆ ಮದುವೆ ಬೇಡವೆಂದು ಹೇಳಿ, ಮಗುವನ್ನು ತೆಗೆಸಲು ಸಲಹೆ ನೀಡುತ್ತಾನೆ. ಆದರೆ ವಿದ್ಯಾ ಎಲ್ಲರಂತೆ ಈತನಲ್ಲೂ ನಯವಂಚಕನವನ್ನು ಕಂಡು ಆತನನ್ನು ತೊರೆದು ಹೋಗುತ್ತಾಳೆ. ಪ್ರಾಮಾಣಿಕತೆಯ ಮಾತನಾಡುವ ಅಮುಲ್‌ನ ಈ ವ್ಯಕ್ತಿತ್ವ ಇಲ್ಲಿ ಅಕ್ಷಮ್ಯವೇ! ಆದರೂ ಆಕೆಯ ಬಗ್ಗೆ ಒಲವಿದ್ದ ಕಾರಣದಿಂದಲೇ ಬೇರೆ ಮದುವೆಯಾಗದೇ ಹಾಗೆಯೇ ಉಳಿದಿರುತ್ತಾನೆ.

ತಾಯಿ ವಿದ್ಯಾ ಮಗನಿಗೆ ಅಮುಲ್ ಆತನ ಅಪ್ಪನೆಂದು ಹೇಳುತ್ತಾಳೆ, ಆತನೊಂದಿಗೆ ಹೆಚ್ಚು ಸೇರುವುದು ತನಗಿಷ್ಟವಿಲ್ಲವೆಂದು ಹೇಳುತ್ತಾಳೆ. ಆತನಿಗೂ ತನ್ನ ಅಪ್ಪನ ಮೇಲೆಕೋಪ ಬಂದರೂ, ದೆಹಲಿ, ರಾಷ್ಟ್ರಪತಿ ಭವನ ನೋಡಬೇಕೆಂಬ ಬಯಕೆಯಿಂದ ಆತನೊಂದಿಗೆ ದೆಹಲಿಗೆ ಹೋಗುತ್ತಾನೆ. ಸಂಸದ ಅಮುಲ್‌ಗೆ ಈತನೊಟ್ಟಿಗೆ ಆಪ್ತತೆ ಇನ್ನೂ ಹೆಚ್ಚುತ್ತದೆ.

ಆರೋವಿನ ಆರೋಗ್ಯ ಹದಗೆಟ್ಟು, ಆಸ್ಪತ್ರೆ ಸೇರುತ್ತಾನೆ. ಆತನನ್ನು ನೋಡಲು ಬಂದ ಅಮುಲ್, ಅಲ್ಲಿ ವಿದ್ಯಾಳನ್ನು ನೋಡಿ ಆರೋ ತನ್ನ ಮಗನೆಂಬುದು ಗೊತ್ತಾಗುತ್ತದೆ. ಮಾಧ್ಯಮಗಳು ಈ ವಿಚಾರಗಳನ್ನು ಬಿತ್ತರಿಸಿ, ಸಂಸದ ಸಾಚಾ ಅಲ್ಲ ಎಂದು ಆತನನ್ನು ಅವಹೇಳನ ಮಾಡಲು ಹೊರಡುತ್ತವೆ (ಕಾರಣಕ್ಕೆ ಬಾಕ್ಸ್ ನೋಡಿ). ಮಗನ ರಾಜಕೀಯ ಭವಿಷ್ಯದ ಮೇಲೆ ಪರಿಣಾಮ ಬೀರುವುದನ್ನು ಕಂಡು ಅಪ್ಪ, ಈ ಸಂಬಂಧಗಳನ್ನು ತೊರೆಯುವಂತೆ ಹೇಳುತ್ತಾನೆ. ಆದರೆ ಸಂಸದ ಅಮುಲ್ ಅದಕ್ಕೊಪ್ಪದೆ ಮಾಧ್ಯಮಗಳ ಮುಂದೆ ತನ್ನಿಂದಾದ ತಪ್ಪನ್ನು ಮನ್ನಿಸುವಂತೆ ವಿನಂತಿಸಿ, ವಿದ್ಯಾಳನ್ನು ಮದುವೆಯಾಗಲು ಕೇಳಿಕೊಳ್ಳುತ್ತಾನೆ. ವಿದ್ಯಾ ಒಪ್ಪುವುದಿಲ್ಲ.

ತಂದೆ-ತಾಯಿ ಇಬ್ಬರೂ ಒಂದಾಗಬೇಕೆಂದು ಆರೋ ಬಯಸುತ್ತಾನೆ. ಆದರೆ ವಿದ್ಯಾ ಹಠ ಹಿಡಿಯುತ್ತಾಳೆ. ಆದರೆ ಆರೋನ ಆರೋಗ್ಯ ತೀರಾ ಕ್ಷೀಣಿಸಿ, ಆತನ ಬಯಕೆಯನ್ನು ಈಡೇರಿಸುವ ಸಲುವಾಗಿ ಅಮುಲ್-ವಿದ್ಯಾ ಒಂದಾಗುತ್ತಾರೆ. ಅವರನ್ನು ನೋಡುತ್ತ, ಸಂತೋಷದಿಂದಲೇ ಆರೋ ಸಾವನ್ನಪ್ಪುತ್ತಾನೆ.

ಮನ ಕಲಕುವ ಸನ್ನಿವೇಶಗಳೊಂದಿಗೆ ಗಮನ ಸೆಳೆಯುವ 'ಪಾ'ದಲ್ಲಿ ಅಮಿತಾಭ್ ಅವರ ಅಭಿನಯ ಅಭೂತಪೂರ್ವ. ಕೂದಲೆಳೆಯಷ್ಟು ಅಭಿತಾಬ್ ಎಂದು ಗುರುತಿಸಲಾಗದಷ್ಟು ಬದಲಾದ ವೇಷದಲ್ಲಿ, ಅವರ ಆಂಗಿಕ ಅಭಿನಯ, ಧ್ವನಿ ಎಲ್ಲವೂ ಆಶ್ಚರ್ಯ ಹುಟ್ಟಿಸುತ್ತದೆ!. ಇದಕ್ಕಾಗಿ ಸಾಕಷ್ಟು ಪೂರ್ವತಯಾರಿ ಮತ್ತು ಪರಿಶ್ರಮ ಎದ್ದುಕಾಣುತ್ತದೆ.

ಅಭಿಷೇಕ್, ವಿದ್ಯಾಬಾಲನ್ ಮತ್ತು ಅರುಂಧತಿ ನಾಗ್ ಅವರ ಅಭಿನಯವೂ ಪಾತ್ರಕ್ಕೂ ಪೂರಕವಾಗಿದೆ. ಇಳಯರಾಜ ಸಂಗೀತವೂ ಇಂಪಾಗಿದೆ.

ಅಸ್ವಾಭಾವಿಕ, ಅಂಗವಿಕಲ ಮಕ್ಕಳ ಬಗ್ಗೆ ಅವರ ಪೋಷಕರೂ ಸೇರಿದಂತೆ ಸಮಾಜ ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ಬೆಳಕು ಚೆಲ್ಲುವಂತಹ ಇಂತಹ ಚಿತ್ರಗಳು ಪ್ರಶಂಸನೀಯ. ಈ ಚಿತ್ರದ ನಿರ್ದೇಶಕರು ಆರ್.ಬಾಲಕೃಷ್ಣ(ಬಾಲ್ಕಿ). ಚಿಂತನೆಗೆ ಹಚ್ಚುವಂತಹ ಚಿತ್ರಗಳನ್ನು ಇವರಿಂದ ಮುಂದೆಯೂ ನಿರೀಕ್ಷಿಸಬಹುದು. ○

'ಪಾ' ಬೆಂಗಳೂರಿನಲ್ಲಿ ಮಲ್ಟಿಪ್ಲೆಕ್ಸ್‌ಗಳಲ್ಲಿ ಮಾತ್ರ! ಆದರೂ ನೋಡಬಹುದು ಕೇವಲ 10 ರೂಪಾಯಿಗೆ!

ಆಧುನಿಕ, ತಂತ್ರಜ್ಞಾನ ಯುಗದಲ್ಲಿ ಬಾಲಿವುಡ್ ಮಂದಿ ತಮ್ಮ ವ್ಯವಹಾರ ಶೈಲಿಯನ್ನೂ ಬದಲಾಯಿಸಿಕೊಂಡಿದ್ದಾರೆ. ಅವರ ಸಿನಿಮಾಗಳು ಈಗ ಬಹುತೇಕ ಮಲ್ಟಿಪ್ಲೆಕ್ಸ್‌ಗಳಲ್ಲಿ ಮಾತ್ರ ತೆರೆಕಾಣುತ್ತವೆ. ಅವರಿಗೆ ಚಿತ್ರದ ಗುಣಮಟ್ಟದ ಬಗ್ಗೆ ಚಿಂತೆ! ಸಾಮಾನ್ಯ ಜನ ನೋಡಿದರೆಷ್ಟು, ಬಿಟ್ಟರೆಷ್ಟು!. ದುಡ್ಡಿದ್ದವರು ಬಂದು ನೋಡಲಿ, ಸಿನಿಮಾದ ನಿಜ ಅನುಭವದ 'ಮಜಾ' ಅನುಭವಿಸಲಿ ಎಂಬುದು ಅವರ ವಾದ. 'ಪಾ' ಕೂಡಾ ಇಲ್ಲಿ ಮಲ್ಟಿಪ್ಲೆಕ್ಸ್‌ನಲ್ಲಿ ಮಾತ್ರ ತೆರೆಕಂಡಿದೆ.

ಬಾಲಿವುಡ್‌ನಿಂದ ಹಿಡಿದು ಸ್ಯಾಂಡಲ್‌ವುಡ್‌ವರೆಗೂ ಎಲ್ಲರೂ ಬಾಯಿಬಡಿದುಕೊಳ್ಳುವವರೇ 'ಪೈರೆಸಿ ತಡೆಗಟ್ಟಿ, ಚಿತ್ರಮಂದಿರದಲ್ಲೇ ಚಿತ್ರ ವೀಕ್ಷಿಸಿ, ಉದ್ಯಮ ರಕ್ಷಿಸಿ' ಅಂತ.

150-200 ರೂಪಾಯಿ ಕೊಟ್ಟು ಸಿನಿಮಾ ನೋಡೋ ತಾಕತ್ತು ಸಾಮಾನ್ಯ ಜನರಿಗಂತೂ ಇಲ್ಲ. ನೋಡೋ ಬಯಕೆ ತಡೆಯೋಕು ಸಾಧ್ಯವಿಲ್ಲ.

ಇದೇ ಸಿನಿಮ ಉದ್ಯಮದ ಕೆಲವು 'ಸಾಚಾ' ಮಂದಿಗಳ ಕೈಚಳಕದಿಂದಲೇ ಬಿಡುಗಡೆಯ ದಿನವೇ ಬೀದಿಗೆ ಬೀಳುತ್ತವೆ ಸಿನಿಮಾಗಳು. ಕೇವಲ ಹತ್ತು ರೂಪಾಯಿ!. ಮನೆಮಂದಿಯೆಲ್ಲಾ ನೋಡಬಹುದು!. 'ಪಾ' ನೂ ಇದಕ್ಕೆ ಹೊರತಾಗಿಲ್ಲ.

ಮನೆಯೊಳಗಿನ ಕಳ್ಳನನ್ನು ಹಿಡಿಯದೇ ಬೀದಿಗೆ ಬಂದು ಬಡಕೊಂಡರೇ ಏನು ಬಂತು ಭಾಗ್ಯ. ಸಿಕ್ಕಾಪಟ್ಟೆ ಟಿಕೆಟ್ ಬೆಲೆ ಏರಿಸಿ, ಸಾಮಾನ್ಯರನ್ನು ಚಿತ್ರಮಂದಿರಗಳಿಂದ ದೂರವಿಟ್ಟು, ಅದರಲ್ಲೂ ಮಲ್ಟಿಪ್ಲೆಕ್ಸ್‌ಗಳ ಕಡೆಗೆ ತಲೆಯನ್ನೇ ಹಾಕದಂತೆ ಭಯ ಹುಟ್ಟಿಸಿ, ಉದ್ಯಮ ರಕ್ಷಿಸಿ ಎಂದರೆ ಹೇಗೆ?

ಮಾಧ್ಯಮಗಳಲ್ಲಿ 'ಸುದ್ದಿಯ ಜಾಗ'ದ ಖರೀದಿ

ಅಮುಲ್‌ನ ಜನಪರ ಕಾಳಜಿಯನ್ನು ಕಂಡ ಎದುರಾಳಿ ಪಕ್ಷದ ಮುಖಂಡನೊಬ್ಬ ಮಾಧ್ಯಮಗಳ ಮುಖಾಂತರ ಅವನ ಕಾಲೆಳೆಯಲು ಯತ್ನಿಸುತ್ತಾನೆ.

ಬಡಜನ ವಾಸಿಸುವ ಕಾಲೋನಿಯಲ್ಲಿ ಅವರಿಗೆ ಸುವ್ಯವಸ್ಥಿತ ಮನೆಗಳನ್ನು ಕಟ್ಟಿಕೊಡಲು ಆಶಿಸುತ್ತಾನೆ ಅಮುಲ್. ಆದರೆ ಅದನ್ನು ಮಾಧ್ಯಮಗಳು ತಿರುಚಿ ವರದಿ ಮಾಡಿ, ಭೂಮಿ ಕಬಳಿಸಲು ನಡೆಸುತ್ತಿರುವ ವಂಚನೆಯ ಆಟ ಎಂಬಂತೆ ಬಿಂಬಿಸಿ, ಆ ಜನರೇ ಅವನ ವಿರುದ್ಧ ತಿರುಗಿಬೀಳುವಂತೆ ಮಾಡುತ್ತವೆ.

ಎದುರಾಳಿ ಮುಖಂಡ ಈ ಸುದ್ದಿ ಪ್ರಕಟಿಸುವುದಕ್ಕಾಗಿ ಖಾಸಗಿ ಮಾಧ್ಯಮಗಳ ವರದಿಗಾರರನ್ನು ಖರೀದಿಸಿರುತ್ತಾನೆ. ಇದನ್ನು ಮನಗಂಡ ಅಮುಲ್ ಸರ್ಕಾರಿ ವಾಹನಿಯಾದ ದೂರದರ್ಶನ ಮುಖಾಂತರ ಖಾಸಗಿ ಮಾಧ್ಯಮಗಳ ಬಣ್ಣ ಬಯಲು ಮಾಡುತ್ತಾನೆ. ವಂಚಕ ವರದಿಗಾರರನ್ನೂ ಜನರ ಮುಂದೆ ತರುತ್ತಾನೆ.

ಬಹಳಷ್ಟು ಸಾರಿ ಸರ್ಕಾರಿ ಸ್ವಾಮ್ಯದ ಮಾಧ್ಯಮಗಳೂ ಆಳುವವರ ಪುಂಗಿಯಂತೆ ವರ್ತಿಸುತ್ತವೆ. ಖಾಸಗಿ ಮಾಧ್ಯಮಗಳು ಕೊಂಚ ಭಿನ್ನವಾದರೂ ಅವೂ ಆಳುವವರ್ಗಗಳ, ಹಣವಂತರ ತಾಳಕ್ಕೆ ತಕ್ಕಂತೆ ಕುಣಿಯುತ್ತವೆ. ಬಂಡವಾಳಶಾಹಿ ರಾಜಕೀಯ ಪಕ್ಷಗಳಿಂದ ಖಾಸಗಿ ಮಾಧ್ಯಮಗಳ ಖರೀದಿ ಭರಾಟೆ ಇತ್ತೀಚೆಗೆ ಭಾರಿ ಜೋರಾಗಿದೆ. ಈ ಪ್ರವೃತ್ತಿಯನ್ನು ತೆರೆಯಮೇಲೆ ತಂದಿರುವುದು ಗಮನಾರ್ಹ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY
OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published
at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH